XI) ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಮಂತ್ರಿ): ಮಾನ್ಯ ಅಧ್ಯಕ್ಷರೆ,

೧೯೫೬ನೇ ಇಸವಿಯ ಕಂಪನಿಗಳ ಅಧಿನಿಯಮ ೬೧೯(ಎ) ಕಲಮಿನ ಮೇರೆಗೆ:

೩೧-೦೩-೧೯೯೮ಕ್ಕೆ ಅಂತ್ಯಗೊಳ್ಳುವ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಯಮಿತದ ೧೯ನೆ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಮಂಡಿಸುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):- ಮಾನ್ಯ ಅಧ್ಯಕ್ಷರೆ. ಮಾನ್ಯ ಗೃಹ ರಾಜ್ಯ ಮಂತ್ರಿಯವರ ಪರವಾಗಿ

೧೯೬೪ನೇ ಸಾಲಿನ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ ೨೨ನೇ ಕಲಮಿನ ಮೇರೆಗೆ:

೧. ರಾಯಚೂರು ಜಿಲ್ಲೆ ಲಿಂಗಸಗೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿ ಕಾರ್ಮಿಕರು ತಮ್ಮ ಬಯಲು ಸಭಾಂಗಣದಲ್ಲಿ ೩೫ ಎಂ.ಎಂ. ಚಲನಚಿತ್ರ ಪ್ರದರ್ಶಿಸಲು ಅನುಮತಿ ನೀಡುವ ಸಂಬಂಧದಲ್ಲಿ ದಿನಾಂಕ: ೦೮-೦೧-೧೯೯೩ರಂದು ಹೊರಡಿಸಲಾದ ಹೆಚ್‌ಡಿ:೨೧೯:ಸಿಎನ್ಎ:೯೨ರ ಕ್ರಮಾಂಕದ ಆದೇಶ.

೨. ಮಂಡ್ಯ, ಮೈಸೂರು, ಹಾಸನ, ತುಮಕೂರು, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗಳಲ್ಲಿ ಬೊಂಬಾಯಿಯಲ್ಲಿರುವ ಭಾರತ ಮಕ್ಕಳ ಚಲನಚಿತ್ರಗಳ ಸಂಘದವರು ಸರಬರಾಜು ಮಾಡಿದ ಮಕ್ಕಳ ಚಲನಚಿತ್ರಗಳನ್ನು ಪ್ರದರ್ಶಿಸಲು ಮದರಾಸಿನ ಯುನಿಸೋ ಎಂಟರ್‌ಪ್ರೈಸಸ್‌ನವರಿಗೆ ಅನುಮತಿ ನೀಡುವ ಸಂಬಂಧದಲ್ಲಿ ದಿನಾಂಕ:೧೩-೦೧-೧೯೯೩ರಂದು ಹೊರಡಿಸಲಾದ ಹೆಚ್‌ಡಿ:೨೩೫:ಸಿಎನ್‌ಸಿ:೯೨ರ ಕ್ರಮಾಂಕದ ಆದೇಶವನ್ನು ಮಂಡಿಸುತ್ತೇನೆ.

XIII) ಶ್ರೀ ರಾಮಲಿಂಗರೆಡ್ಡಿ (ಹಣಕಾಸು ರಾಜ್ಯ ಮಂತ್ರಿ):- ಮಾನ್ಯ ಅಧ್ಯಕ್ಷರೆ,

೧೯೫೭ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಕಲಂ ೩೯ರ ಮೇರೆಗೆ:

ಅವಲಕ್ಕಿ (ಬೀಟನ್ ರೈಸ್) ಮಾರಾಟದ ಮೇಲೆ ೧೯೫೭ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ಪಾವತಿ ಮಾಡಬೇಕಾಗಿರುವ ತೆರಿಗೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ:೨೪-೧೧-೯೨ರಂದು ಹೊರಡಿಸಲಾದ ಎಫ್‌ಡಿ:೧೬೯:ಸಿಎಸ್‌ಎಲ್:೯೨ರ ಕ್ರಮಾಂಕದ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು:- ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ಶ್ರೀ ಬಸವರಾಜ ರಾಯರೆಡ್ಡಿ:- ಅಧ್ಯಕ್ಷರೇ, ಎಲ್ಲಾ ಸದಸ್ಯರಿಗೂ ಸಮಾನದವಾದ ಅವಕಾಶ ಇರಬೇಕು.

ಶ್ರೀ ಬಸವರಾಜ ರಾಯರೆಡ್ಡಿ:- ಮಾನ್ಯ ಅಧ್ಯಕ್ಷರೇ, ಎಲ್ಲಾ ಸದಸ್ಯರಿಗೂ ಸಮಾನಾವಕಾಶ ಸಿಗುವಂತೆ ಇನ್ನು ಮುಂದಾದರೂ ತಾವು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಆಯಿತು ಸರಿಪಡಿಸೋಣ.

(ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ)

ವಿಷಯ:- ಸಾರಿಗೆ ದರವನ್ನು ಹೆಚ್ಚಿಸಿರುವ ಬಗ್ಗೆ.

* ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ನಾವು ಮತ್ತು ಎಸ್‌ಜೆಪಿ ಯವರು ಸೇರಿ ಅದನ್ನು ಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ತಮ್ಮಲ್ಲಿ ನಿಲುವಳಿ ಸೂಚನೆಯ ಬಗ್ಗೆ ಯಾರ್ಯಾರು ನೋಟೀಸ್ ಕೊಟ್ಟಿದ್ದಾರೆ ಎಂಬುದನ್ನು ದಯಮಾಡಿ ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಬಸ್ ಪ್ರಯಾಣ ದರವನ್ನು ಜಾಸ್ತಿ ಮಾಡಿದ್ದರ ಬಗ್ಗೆ ನಿಲುವಳಿ ಸೂಚನೆಯ ಮೂಲಕ ಚರ್ಚೆ ಮಾಡಬೇಕೆಂದು ಕೋರಿ, ನಾನು ಒಂದು ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಇದರ ಬಗ್ಗೆ ಇನ್ನೂ ಯಾರ್ಯಾರ ನೋಟೀಸ್‌ಗಳು ಇವೆ ಎಂಬುದನ್ನು ತಾವುಗಳು ಹೇಳಬೇಕು. ಹಾಗೆಯೇ ನಿಲುವಳಿ ಸೂಚನೆಯ ಮೂಲಕ ಈ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ. ವಿಧಾನ ಸಭೆಯ ಅಧಿವೇಶನವು ಸೇರಲಿರುವುದು ಗೊತ್ತಿದ್ದರೂ ಕೂಡ ದರ ಹೆಚ್ಚಿಗೆ ಮಾಡಿದ್ದಾರೆ. ಇದರಿಂದ ಜನ ಸಾಮಾನ್ಯರು ಬದುಕುವುದಕ್ಕೆ ಸಾಧ್ಯವಿದೆಯೇ? ಈ ಸರ್ಕಾರದ ಉದ್ದೇಶ ಏನು? ಪ್ರಜಾತಂತ್ರದ ವ್ಯವಸ್ಥೆಯ ಬಗ್ಗೆ ಇವರಿಗೆ ವಿಶ್ವಾಸ ಇಲ್ಲವೆ? ಸಾರಿಗೆ ಸಂಸ್ಥೆಯಲ್ಲಿ ಆಗುತ್ತಿರುವ ಸೋರಿಕೆಯನ್ನು ಕಡಿಮೆ ಮಾಡುತ್ತೇವೆ, ದರ ಹೆಚ್ಚಳವನ್ನು ಮಾಡುವುದಿಲ್ಲ ಎಂದು ಸಚಿವರು ಭರವಸೆಯನ್ನು ಕೊಟ್ಟಿದ್ದರು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಇದು ಈ ಸದನಕ್ಕೆ ಮಾಡಿದ ಅಗೌರವ. ನಾಳೆ ಸರ್ಕಾರದ ಮೇಲೆ ಹಕ್ಕುಚ್ಯುತಿ ನಿರ್ಣಯವನ್ನು ತರುತ್ತೇವೆ. ಬರೀ ನಿಲುವಳಿ ಸೂಚನೆ ಒಂದೇ ಅಲ್ಲ. ಸರ್ಕಾರ ಈ ಸದನಕ್ಕೆ ತಂದಿರುವ ಅಪಮಾನವೆಂದು ಹೇಳುತ್ತಿದ್ದೇನೆ. ಸನ್ಮಾನ್ಯ ರಾಜ್ಯಪಾಲರು ಈ ಸದನವನ್ನು ಕರೆದ ನಂತರ ಈ ಬಸ್ ದರ ಏರಿಕೆ ಪ್ರಕಟ ಮಾಡುವುದು, ಯಾರೋ ಒಬ್ಬ ಅಧಿಕಾರಿ ಇದನ್ನು ಮಾಡುವುದು, ಇದು ಯಾವ ನೀತಿ?

ಶ್ರೀ ಸಿ. ಬೈರೇಗೌಡ:- ನಿಲುವಳಿ ಸೂಚನೆ ಯಾರ್ಯಾರದು ಇದೆ ಸ್ವಾಮಿ? ನಾನೂ ಸಹ ನಿಲುವಳಿ ಸೂಚನೆ ಕೊಟ್ಟಿದ್ದೆ ಏನಾಗಿದೆ ಅದು?

(ಗೊಂದಲ)

ಅಧ್ಯಕ್ಷರು:- ನಿಲುವಳಿ ಸೂಚನೆಯನ್ನು ಎಲ್ಲರೂ ಕಳುಹಿಸಿದ್ದಾರೆ. ಈಗ ದೇಶಪಾಂಡೆಯವರು ಮಾತನಾಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನೂ ನಿಲುವಳಿ ಸೂಚನೆ ಕಳಿಸಿದ್ದೇನೆ, ನಮ್ಮದೇನಾಗಿದೆ ಹೇಳಿ ಸ್ವಾಮಿ?

ಅಧ್ಯಕ್ಷರು:- ನಾನು ಎಲ್ಲರಿಗೂ ಅವಕಾಶ ಕೊಡುತ್ತೇನೆ. ಮೊದಲು ವಿರೋಧ ಪಕ್ಷದ ನಾಯಕರು ಹೇಳಲಿ. ತಮಗೂ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ತಮ್ಮನ್ನು ಕನ್ವಿನ್ಸ್ ಮಾಡುವುದಕ್ಕೆ ಹೊರಟಿರುವುದು ಏನೆಂದರೆ ನಾನು ಮೊದಲು ನಿಲುವಳಿ ಸೂಚನೆ ಕಳಿಸಿದ್ದೆ. ದಯಮಾಡಿ ಮೊದಲು ನನಗೆ ಚರ್ಚೆಗೆ ಅವಕಾಶಮಾಡಿಕೊಡಿ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಯಡಿಯೂರಪ್ಪನವರೂ ನಿಲುವಳಿಸೂಚನೆ ಕಳುಹಿಸಿದ್ದಾರೆ. ನಾನು ಅವರ ಗಮನಕ್ಕೆ ತರುತ್ತಾ ಇದ್ದೇನೆ. ನಾನು ನಿನ್ನೆ ಸದನ ಅಡ್‌ಜರ್ನ್ ಆದ ತಕ್ಷಣ ಇಮಿಡಿಯೇಟಾಗಿ ಕಳಿಸಿದ್ದೇನೆ. ಈ ಸಮಸ್ಯೆಯಲ್ಲಿ ನಮ್ಮಲ್ಲಿ ಏನೂ ಭಿನ್ನಾಭಿಪ್ರಾಯ ಇಲ್ಲ. ಬಹಳ ದೊಡ್ಡ ಗದಾಪ್ರಹರ ಈ ಸರ್ಕಾರ ಈ ರಾಜ್ಯದ ಬಡ ಜನರ ಮೇಲೆ ಪ್ರಯಾಣಿಕರ ಮೇಲೆ ಮಾಡಿದೆ. ಒಂದು ಕಡೆ ಸರ್ಕಾರ ಹೇಳಿತು, ಮಾನ್ಯ ಸಚಿವರು ಒಂದು ಹೇಳಿಕೆ ಕೊಟ್ಟಿರು ಇಲ್ಲ ನಾವು ಬಸ್‌ದರ ಏರಿಸುವುದಿಲ್ಲ ಫಿಲ್‌ಫರೇಜ್ ೨೧ ಪರ್ಸೆಂಟಿದೆ, ಇನ್‌ಫಿಶಿಯನ್ಸಿ ಇದೆ, ಅಡ್ಮಿನಿಸ್ಟ್ರೇಶನ್ ಸರಿಪಡಿಸುತ್ತೇವೆ ಮತ್ತು ಬಸ್ ದರ ಏರಿಸುವುದಿಲ್ಲ ಎಂದು ಹೇಳಿಕೆ ಕೊಟ್ಟಿರು. ಅದನ್ನು ನಾವು ಸ್ವಾಗತ ಮಾಡಿದೆವು. ಹಾಗೆ ಏಕೆ ಸ್ವಾಗತ ಮಾಡಿದೆ ಎಂದು ಇವತ್ತು ನನ್ನ ಮನಸ್ಸಿಗೆ ನೋವಾಗುತ್ತಿದೆ. ಹಾಗಾಗಿ ಇವತ್ತು ನೀವು ಕೊಟ್ಟ ಹೇಳಿಕೆ ಬೇಜವಾಬ್ದಾರಿ ಎಂದು ಹೇಳಬೇಕಾಗುತ್ತದೆ ಅಥವಾ ನೀವು ಕೆ.ಎಸ್.ಆರ್.ಟಿ.ಸಿ.ಯ ಫಂಕ್ಷನಿಂಗ್ ಏನು ಎಂದು ತಿಳಿಯದೆಯೇ ಸ್ಟೇಟ್‌ಮೆಂಟ್ ಕೊಟ್ಟಹಾಗಾಗುತ್ತದೆ. ಅದಕ್ಕೆ ವಿವರಣೆ ನೀವು ಕೊಡಬೇಕಾಗುತ್ತದೆ ನಾನಲ್ಲ. ಎಫಿಶಿಯನ್‌ಸಿ ಇಂಪ್ರೂವ್ ಮಾಡುತ್ತೇವೆ, ಫಿಲ್‌ಫರೇಜ್ ಕಡಿಮೆ ಮಾಡುತ್ತೇವೆಂದು ಹೇಳಿ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಇವತ್ತು ರ್‍ಯಾಂಪೆಟ್ ಕರಪ್ಶನ್ ಇದೆ, ಫಿಲ್‌ಫರೇಜಿದೆ, ಲೆಥಾರ್ಜ್ ಇದೆ, ಇನ್‌ಫಿಶಿಯನ್ಸ್ ಮತ್ತು ಮಾಲ್ ಅಡ್ಮಿನಿಸ್ಟ್ರೆಶನ್ ಇದೆ, ಅದನ್ನು ಪ್ರಯಾಣಿಕರ ಮೇಲೆ ಹಾಕಿದಿರಿ ಏನು ಅಧಿಕಾರ ನಿಮಗಿದೆ, What moral right you have or legal right you have to transfer this burden on commuters? ನಿಮ್ಮ ಕಡೆಯಿಂದ ಏನು ಪ್ರಯತ್ನ ಆಗಿದೆ. ನನಗೆ ನೆನಪಿದೆ. ಇಲ್ಲಿ ಬೇರೆ ಸರ್ಕಾರ ಬಂದಿಲ್ಲ, ಕಳೆದ ಮೂರುಕಾಲು ವರ್ಷದಿಂದ ಕಾಂಗ್ರೆಸ್ ಸರ್ಕಾರ ಇದೆ. ಶ್ರೀ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿ ಇದ್ದಾಗ ಒಮ್ಮೆ, ಬಸ್ ರೇಟ್ಸ್ ರಿವೈಸ್ ಆಯಿತು. ಅದು ೬-೫-೯೦ಕ್ಕೆ ೨೬.೪ ರಷ್ಟು ಜಾಸ್ತಿಯಾಯಿತು.

ಶ್ರೀ ಬಿ. ರಾಜುಗೌಡ:- ಒಂದು ಕ್ರಿಯಾಲೋಪ. ಕೆ.ಎಸ್.ಆರ್.ಟಿ.ಸಿ.ಯವರು ಬಸ್ ಪ್ರಯಾಣದರವನ್ನು ಜಾಸ್ತಿ ಮಾಡಿದ್ದು ಸರಿಯಲ್ಲವೆಂದು ರಾಜ್ಯದ ಮುಖ್ಯ ನ್ಯಾಯಾಲಯದಲ್ಲಿ ವಿರೋಧಪಕ್ಷದ ಉಪನಾಯಕರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರು ಒಂದು ಸಾರ್ವಜನಿಕ ಹಿತಾಸಕ್ತಿ ಪಿಟಿಶನ್ ಫೈಲ್ ಮಾಡಿದ್ದಾರೆ. ಈ ವಿಚಾರ ಕೋರ್ಟ್ ಮುಂದೆ ಇರುವಾಗ ಈ ಸಮಸ್ಯೆಯನ್ನು ಇಲ್ಲಿ ಚರ್ಚೆ ಮಾಡಲಿಕ್ಕೆ ಬರುತ್ತದೆಯೇ? ಬರುವುದಿಲ್ಲವೆಂದು ನನಗನ್ನಿಸುತ್ತದೆ. ದಯಮಾಡಿ, ರಾಜ್ಯದ ಮುಖ್ಯ ನ್ಯಾಯಾಲಯದಲ್ಲಿ ಆ ಸಾರ್ವಜನಿಕ ಹಿತಾಸಕ್ತಿ ಪಿಟಿಶನ್‌ನ್ನು ಅವರು ವಿಥ್‌ಡ್ರಾ ಮಾಡದೆ ಇರುವುದರಿಂದ ಈ ಪ್ರಶ್ನೆಯನ್ನು ಇಲ್ಲಿ ಚರ್ಚೆ ಮಾಡುವುದು ಸಾಧ್ಯವಿಲ್ಲ, ಇದು ಸಬ್‌ಜ್ಯುಡೀಸಾಗುತ್ತದೆಂದು ನನ್ನ ಅಭಿಪ್ರಾಯ, ಆದುದರಿಂದ ದಯಮಾಡಿ ತಾವು ಇದನ್ನು ತೀರ್ಮಾನ ಮಾಡಬೇಕು.

೧೨.೩೫ ಪಿ.ಎಂ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಪಾಪ ಮಾನ್ಯ ರಾಜುಗೌಡರಿಗೆ ಯಾರೋ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ನಾನು ಪತ್ರಿಕೆಗಳಲ್ಲಿ ಏನು ಹೇಳಿದ್ದೇನೆಂದರೆ, ಅಸೆಂಬ್ಲಿ ನಡೆಯುತ್ತಿದೆ, ಅಸೆಂಬ್ಲಿಯಲ್ಲಿ ಇದರ ಬಗ್ಗೆ ನಾವು ಹೋರಾಟ ಮಾಡುತ್ತೇವೆ, ಇಲ್ಲಿ ಆಗದೇ ಹೋದರೆ ಅದು ಆದ ನಂತರ ಹೈಕೋರ್ಟಿಗೆ ಹೋಗುತ್ತೇವೆ ಎನ್ನತಕ್ಕಂಥ ಮಾತನ್ನು ನಾನು ಹೇಳಿದ್ದೇನೆಯೇ ಹೊರತು ಇನ್ನು ಹೈಕೋರ್ಟಿಗೆ ಹೋಗಿಲ್ಲ. ಮಾನ್ಯ ಅಧ್ಯಕ್ಷರೇ, ನನಗೆ ಒಂದು ಅರ್ಥ ಆಗದೇ ಇರತಕ್ಕಂಥದ್ದು ಮಾನ್ಯ ಮಂತ್ರಿಗಳು ಇದರ ಬಗ್ಗೆ...

ಶ್ರೀ ವಾಟಾಳ್ ನಾಗರಾಜ್:- ಈ ತರಹ ವಸ್ತುಸ್ಥಿತಿಯನ್ನು ರಾಜುಗೌಡರು ತಿಳಿದುಕೊಂಡರೆ ನಮ್ಮ ಪರಿಸ್ಥಿತಿ ಏನು?

ಶ್ರೀ ಬಿ. ರಾಜುಗೌಡ:- ಪತ್ರಿಕೆಯಲ್ಲಿ ನೋಡಿದೆ. ಅದಕ್ಕೆ ಕೇಳಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈ ಸಂದರ್ಭದಲ್ಲಿ ನಾನು ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ. It is a very important matter ನಾವು ಸದನದಲ್ಲಿ ಡಿಸ್ಕಸ್ ಮಾಡುತ್ತಿದ್ದೇವೆ. ಇಡೀ ರಾಜ್ಯದಲ್ಲಿ ಇದರ ಬಗ್ಗೆ ಗಲಭೆ ಆಗುತ್ತಿದೆ. ಒಬ್ಬ ಕೆ.ಎಸ್.ಆರ್.ಟಿ.ಸಿ. ಆಫೀಸರ್‌ನ್ನೂ ನಾನು ಇಲ್ಲಿ ನೋಡುತ್ತಿಲ್ಲ. ನನಗೆ ಇದು ಅರ್ಥವಾಗುತ್ತಿಲ್ಲ. ಇದು ಯಾವ ತರಹದಲ್ಲಿ ಇವರು ಮಾಡುತ್ತಾರೆ. ನಮ್ಮ ಚರ್ಚೆಗೆ ಅರ್ಥವೇ ಇಲ್ಲವೇನೊ, ನಾವು ಈ ಗೌರ್ನಮೆಂಟಿಗೆ ಏಕೆ ಸಜೆಷನ್ ಕೊಡಬೇಕು ಎಂದು ಅನಿಸುತ್ತದೆ.

SREE M. VEERAPPA MOILY:- They are waiting just here only. They are in the lobby.

* ಶ್ರೀ ಆರ್.ವಿ. ದೇಶಪಾಂಡೆ:- ಹಾಗಾಗಿ ಸನ್ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ೬-೫-೯೦ ಕ್ಕೆ ನಿಮ್ಮ ಸರ್ಕಾರ ೨೬.೪ ಪರ್ಸೆಂಟ್ ಬಸ್ ಫೇರನ್ನು ರೈಜ್ ಮಾಡಿತ್ತು. ಆದರೆ ನಂತರ ಮಾನ್ಯ ಬಂಗಾರಪ್ಪ ನವರು ಮುಖ್ಯ ಮಂತ್ರಿಯಾಗಿದ್ದಾಗ ಬಸ್ ಫೇರ್ಸ್ ಪುನಃ ೧೦-೧೨ ಪರ್‌ಸೆಂಟ್ ಹೆಚ್ಚು ಮಾಡಬೇಕು ಎಂದು ಪ್ರಯತ್ನ ಆಯಿತು ಯಾರು ಬಂಗಾರಪ್ಪನವರ ವಿರುದ್ಧ ಮೆಮೊರಾಂಡಂ ಕೊಟ್ಟು ಇವತ್ತು ಬಂಗಾರಪ್ಪನವರನ್ನು ಮನೆಗೆ ಕಳುಹಿಸಿ ಯಾರು ಬಂಗಾರಪ್ಪನವರ ಸ್ಥಾನದಲ್ಲಿ ಬಂದಿದ್ದಾರೆ, ಆ ಮುಖ್ಯಮಂತ್ರಿಗಳಿಗೆ ಮತ್ತು ಸಾರಿಗೆ ಸಚಿವರಿಗೆ ನಾನು ಕೇಳುತ್ತಿದ್ದೇನೆ, ಆ ಸಮಯದಲ್ಲಿ ತಾವು ಏನು ಮಾಡಿದಿರಿ, ಸನ್ಮಾನ್ಯ ಹಿರಿಯ ಸಚಿವರಾದಂಥ ರಂಗನಾಥ್‌ರವರು ಇಲ್ಲಿದ್ದಾರೆ, ಹಾರ್‍ನಳ್ಳಿ ರಾಮಸ್ವಾಮಿಯವರು ಇಲ್ಲಿ ಕಾಣಿಸುತ್ತಿಲ್ಲ. ನೀವು ಕೂಡ ಇದನ್ನು ವಿರೋಧ ಮಾಡಿದಿರಿ. ನೀವು ಆ ಸಮಯದಲ್ಲಿ ಹೇಳಿದಿರಿ ಇದು ಪಕ್ಷದಲ್ಲಿ ಚರ್ಚೆಯಾಗಿಲ್ಲ, ಬಸ್ ಫೇರ್ ರಿವಿಷನ್ ಮಾಡುವ ಅವಶ್ಯಕತೆ ಇಲ್ಲ, ಎಫಿಸಿಯೆನ್ಸಿ ಇಂಪ್ರೂವ್ ಮಾಡಿ, ಫಿಲ್‌ಫರೇಜ್ ಕಡಿಮೆ ಮಾಡಿ ಎಂದು ಹೇಳಿದಿರಿ. ಹಾಗಾದರೆ ಇವತ್ತು ನಿಮ್ಮ ಮಾತು ಎಲ್ಲಿ ಹೋಯಿತು? ನಾನು ಪತ್ರಿಕೆ ಮುಖಾಂತರ ತಿಳಿದುಕೊಂಡಿದ್ದೇನೆ. ಕೆಲವು ಸ್ನೇಹಿತರ ಮುಖಾಂತರ ತಿಳಿದುಕೊಂಡಿದ್ದೇನೆ. ಇವತ್ತು ಸಹ ಅದು ನಿಮ್ಮ ಇಂಟರ್‌ನಲ್ ಮ್ಯಾಟರ್. ಆದರೆ ಅದು ಇವತ್ತು ಪಾರ್ಟಿಯಲ್ಲಿ ಚರ್ಚೆಯಾಗಿಲ್ಲ. ಫಾರ್ ದಿ ಫಸ್ಟ್ ಟೈಮ್ ಕೆ.ಎಸ್.ಆರ್.ಟಿ.ಸಿ.ಯಾಗಲಿ, ಕೆ.ಇ.ಬಿ. ಯಾಗಲಿ, ಅದರಲ್ಲಿ ಯಾವುದೇ ಒಂದು ದರ ಹೆಚ್ಚು ಆಗಬೇಕಾದರೆ ಕ್ಯಾಬಿನೆಟ್‌ನಲ್ಲಿ ಡಿಸ್ಕಷನ್ ಆಗಬೇಕಾಗುತ್ತದೆ. ಆ ಕ್ರಮವನ್ನು ನೀವು ತೆಗೆದುಕೊಂಡಿಲ್ಲ. ನನಗೆ ಆಶ್ಚರ್ಯವಾಗುತ್ತದೆ; ಏಕೆಂದರೆ, ತಾವು ನಂತರ ಸ್ಟೇಟ್‌ಮೆಂಟನ್ನು ಮಾಡಿದಿರಿ. ಮುಂಚೆ ಮಾಡುವುದಿಲ್ಲ ಎಂದು ಹೇಳಿದಿರಿ. ಮತ್ತೊಮ್ಮೆ ಬೀದರ್‌ನಲ್ಲಿ ಏನು ಹೇಳಿದಿರಿ ಎಂದರೆ:

"Speaking to newsmen here, Mr. Khandre clarified that the hike, however, would be of a small scale as the Government's priority was to prevent pilferage in the management of the KSRTC in the State".

ಇದು ನಿಮ್ಮ ಸ್ಟೇಟ್‌ಮೆಂಟ್ ಅಂದರೆ ೨೫ ಪರ್‌ಸೆಂಟ್ ಎನ್ನುವುದು ಸ್ಮಾಲೋ ಅಥವಾ ನೀವು ಸ್ಮಾಲ್ ಮಾಡುವುದಿತ್ತು, ಕೆ.ಎಸ್.ಆರ್.ಟಿ.ಸಿ. ಎಂ.ಡಿ ನಿಮಗೆ ಹೇಳದೆ ಕೇಳದೆ ಮಾಡಿದ್ದಾರೆಯೇ ಎನ್ನುವುದು ಇಲ್ಲಿ ಗೊತ್ತಾಗಬೇಕು. ಇಲ್ಲಿ ನಿಮ್ಮ ಇಂಟೆನ್‌ಷನ್ ನೋಡಿದರೆ, ಮುಂಚೆ ಮಾಡುವುದಿಲ್ಲ, ಫಿಲ್‌ಫರೇಜ್ ನಿಲ್ಲಿಸುತ್ತೇನೆ, ಎಫಿಸಿಯೆನ್ಸಿ ತರುತ್ತೇನೆ, ಅಡ್ಮಿನಿಸ್ಟ್ರೇಷನ್‌ನಲ್ಲಿ ಎಫಿಸಿಯೆನ್ಸಿ ತರುತ್ತೇನೆ ಎಂದು ಹೇಳಿದಿರಿ. ಆದಾದನಂತರ ಮೊನ್ನೆ ಅಂದರೆ ಜನವರಿ ಏಂತ್‌ನಲ್ಲಿ ಬೀದರ್‌ನಲ್ಲಿ ಏನು ಹೇಳಿದಿರಿ ಎಂದರೆ, ಸ್ಮಾಲ್ ಇನ್‌ಕ್ರೀಸ್ ಮಾಡುವುದು ಪರಿಶೀಲನೆಯಲಿದೆ ಎಂದು ಹೇಳಿದಿರಿ. ಅಂದರೆ ೨೫ ಪರ್‌ಸೆಂಟ್ ಏನು ರೈಜ್ ಆಗಿದೆ, ಇದು

ನಿಮ್ಮ ದೃಷ್ಟಿಯಲ್ಲಿ ಸಣ್ಣದೇನು? ಇದು ಸ್ಮಾಲ್ ಇಲ್ಲ, ಇದು ಹೆಚ್ಚು ಇದೆ ಎನ್ನುವ ಅಭಿಪ್ರಾಯಕ್ಕೆ ತಾವು ಬಂದರೆ, ಹಾಗಾದರೆ ನಿಮ್ಮನ್ನು ಕನ್‌ಸಲ್ಟ್ ಮಾಡದೆ ಎಂ.ಡಿ. ಕೆ.ಎಸ್.ಆರ್.ಟಿ.ಸಿ. ಯವರು ಅನೌನ್ಸ್ ಮಾಡಿದ್ದಾರೇನು? ಇದಕ್ಕೆ ಸ್ಪಷ್ಟೀಕರಣ ಸರ್ಕಾರದಿಂದ ಬರಬೇಕಾಗುತ್ತದೆ. ಇವತ್ತು ರಾಜ್ಯದ ಜನರು ಬಹಳ ಕಷ್ಟದಲ್ಲಿದ್ದಾರೆ. ರೈತರು ಬಹಳ ಕಷ್ಟದಲ್ಲಿದ್ದಾರೆ. ಭೀಕರವಾದ ಬರಗಾಲ ಇದೆ. ಅದರ ನಂತರ ನೆರೆಹಾವಳಿ ಇವತ್ತು ರೈತ ಏನು ಬೆಳೆಯನ್ನು ಬೆಳೆಯುತ್ತಾನೆ ಅದಕ್ಕೆ ಸರಿಯಾದ ಬೆಲೆ ಇಲ್ಲ. ರೈತ ಇಷ್ಟೊಂದು ಕಷ್ಟದಲ್ಲಿದ್ದಾಗ, ರಾಜ್ಯದ ಜನ ಕಷ್ಟದಲ್ಲಿದ್ದಾಗ ಇಂಥ ಒಂದು ದೊಡ್ಡ ಗದಾಪ್ರಹಾರವನ್ನು ತಾವೇನು ಮಾಡಿದಿರಿ, ಅದು ಬಹಳ ಕೆಟ್ಟ ಕೆಲಸ ಮಾಡಿದ್ದೀರಿ, ಪಾಪದ ಕೆಲಸವನ್ನು ತಾವು ಮಾಡಿದ್ದೀರಿ. ನಿಮಗೆ ಆ ಅಧಿಕಾರ ಇಲ್ಲ. ಕೆ.ಎಸ್.ಆರ್.ಟಿ.ಸಿ. ಎಫಿಷಿಯೆನ್ಸಿ ಇಂಪ್ರೂವ್ ಮಾಡುವ ಬಗ್ಗೆ ಕಾರ್ಯಕ್ರಮ ಹಾಕಿಕೊಂಡು, ಹೌದು ನಾವು ಇಂಥ ಕಾರ್ಯಕ್ರಮ ಹಾಕಿ ಕೊಂಡಿದ್ದೇವೆ ಎಂದು ಹೇಳಿ, ಐದಾರು ತಿಂಗಳಲ್ಲಿ ತಾವು ಈ ಫಿಲ್‌ಫರೇಜನ್ನು ನಿಲ್ಲಿಸಿ. ಫಿಲ್‌ಫರೇಜ್ ಯಾವಾಗಲೂ ಇರಲಿಲ್ಲ ಎಂದು ನಾನು ಹೇಳುವುದಿಲ್ಲ. ನಾವು ಅಧಿಕಾರದಲ್ಲಿದ್ದಾಗ ನಮ್ಮ ಕಾಲದಲ್ಲಿಯೂ ಸಹ ಫಿಲ್‌ಫರೇಜ್ ಇತ್ತು. ೩-೪ ಪರ್‌ಸೆಂಟ್ ಫಿಲ್‌ಫರೇಜ್ ಇತ್ತು. ಅದು ಈಗ ಎಷ್ಟಾಗಿದೆ ಅಂದರೆ ಶೇಕಡ ೨೧ ರಷ್ಟಾಗಿದೆ. ಇದನ್ನು ಮಾನ್ಯ ಮಂತ್ರಿಗಳೇ ಅಡ್ಮಿಟ್ ಮಾಡಿಕೊಂಡಿದ್ದಾರೆ. ನನ್ನ ಲೆಕ್ಕದ ಪ್ರಕಾರ ಶೇಕಡ ೩೦ ಕ್ಕಿಂತ ಹೆಚ್ಚು ಇದೆ. ನಿಮ್ಮ ೫೬೦ ಕೋಟಿ ರೂಪಾಯಿ ಟರ್ನ್‌ಓವರ್ ಮೇಲೆ ಪಿಲ್‌ಫರೇಜ್ ಅನ್ನು ಶೇಕಡ ೩-೪ ಕ್ಕೆ ಇಳಿಸಿದರೆ ೧೦೦ ರಿಂದ ೧೨೦ ಕೋಟಿ ರೂಪಾಯಿಗಳಷ್ಟು ಸರಿದೂಗಿಸಬಹುದು. ಅದು ಬಿಟ್ಟು ತಾವು ಇವೊತ್ತು ಸಾಮಾನ್ಯ ಜನತೆಯ ಮೇಲೆ ಭಾರ ಹೊರಿಸಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಬಹಳ ಜಾಣರು, ಬಡ್ಜೆಟ್ ಅಧಿವೇಶನಕ್ಕೆ ಮುಂಚೆ, ಬಡ್ಜೆಟ್ ಅಧಿವೇಶನವನ್ನು ಮುಂದೆ ಇಟ್ಟುಕೊಂಡು ಇಂತಹ ಪರಿಸ್ಥಿತಿಯಲ್ಲಿ ೨೦೦ ಕೋಟಿ ರೂಪಾಯಿಯ ಭಾರವನ್ನು ಜನರ ಮೇಲೆ ಹಾಕಿದ್ದು ಸರಿಯೆ? ಇನ್ನು ನಿಮ್ಮ ಬಡ್ಜೆಟ್ ಏನು ಎಂಬುದು ನನಗೆ ಗೊತ್ತು. ನೀವು ನಿಮ್ಮ ಬಡ್ಜೆಟ್‌ನಲ್ಲಿ ಪುನಃ ಸಾಕಷ್ಟು ಟ್ಯಾಕ್ಸ್ ಜನರ ಮೇಲೆ ಹಾಕುತ್ತೀರಿ, ಇದರ ಬಗ್ಗೆ ನನಗೆ ಸಂಶಯವಿಲ್ಲ. ಏಕೆಂದರೆ ಆ ಸಲುವಾಗಿಯೇ ನೀವು ಕೇಂದ್ರ ಸರ್ಕಾರ ಬಡ್ಜೆಟ್‌ನ್ನು ಮಂಡಿಸುವುದಕ್ಕೆ ಮುಂಚೆ ನಿಮ್ಮ ಬಡ್ಜೆಟ್‌ನ್ನು ಮಂಡಿಸಲು ನಿರ್ಧರಿಸಿದ್ದೀರಿ. ಕೇಂದ್ರ ಸರ್ಕಾರದವರು ಟ್ಯಾಕ್ಸ್ ಹಾಕುವುದಕ್ಕೆ ಮುಂಚೆ ನೀವು ಟ್ಯಾಕ್ಸ್ ಹಾಕಲು ಪ್ರಯತ್ನ ಮಾಡುತ್ತಿದ್ದಿರಿ. ನಮ್ಮ ಬಡ್ಜೆಟ್ ಅಧಿವೇಶನ ಇದ್ದಾಗ ತಾವು ೧೪೦ ಕೋಟಿ ರೂಪಾಯಿ ಎಂದು ಏನು ಹೇಳಿದ್ದೀರಿ ಅದು ಕೇವಲ ೧೪೦ ಕೋಟಿಗೆ ನಿಲ್ಲುವುದಿಲ್ಲ It will go beyond Rs. 200 crores ಇಷ್ಟು ದೊಡ್ಡ ಭಾರವನ್ನು ರಾಜ್ಯದ ಜನತೆಯ ಮೇಲೆ ನೀವು ಹಾಕಿದ್ದೀರಿ. ಈ ಕ್ರಮಸರಿಯೆ? ನಿಮಗೆ ನೈತಿಕ ಅಧಿಕಾರ ಇದೆಯೆ? ಈ ಪ್ರಶ್ನೆಗೆ ತಾವು ಉತ್ತರ ಕೊಡಬೇಕಾಗುತ್ತದೆ. ರಾಜ್ಯ ಸರ್ಕಾರದ ಬಡ್ಜೆಟ್ ಬರುವುದಕ್ಕೆ ಮುಂಚೆ ಇಂತಹ ಕ್ರಮ ತೆಗೆದುಕೊಂಡಿದ್ದು ಸರಿಯೆ? ತಾವು ಈ ದರವನ್ನು ಏನು ಹೈಕ್ ಮಾಡಿದ್ದೀರಿ, ಅದನ್ನು ತಕ್ಷಣವೇ ವಿಥ್‌ಡ್ರಾ ಮಾಡಬೇಕಾಗಿದೆ. ಇಲ್ಲವಾದರೆ ನಾವು ಸದನದ ಒಳಗೆ ಹಾಗೂ ಹೊರಗೆ ನಮ್ಮ ನಮ್ಮ ಕಾರ್ಯಕ್ರಮಗಳನ್ನು ಹಾಕಿಕೊಂಡು ಅಜಿಟೇಷನ್ ಪ್ರಾರಂಭ ಮಾಡಬೇಕಾಗುತ್ತದೆ. ತಮಗೆಲ್ಲಾ ಗೊತ್ತಿದೆ. ಈಗಾಗಲೇ ವಿದ್ಯಾರ್ಥಿಗಳು, ಸಾಮಾನ್ಯ ಜನರು ಮತ್ತು ಎಲ್ಲಾ ರಾಜಕೀಯ ಪಕ್ಷಗಳು ಇದನ್ನು ವಿರೋಧ ಮಾಡಿದ್ದಾರೆ. ನಿಮ್ಮ ಪಕ್ಷದಲ್ಲಿಯೂ ಸಹ ಇದಕ್ಕೆ ಸಾಕಷ್ಟು ವಿರೋಧ ಇದೆ. ಅಷ್ಟೇ ಅಲ್ಲ, ನಿಮ್ಮ ಮಂತ್ರಿಮಂಡಲದಲ್ಲಿಯೂ ಇದಕ್ಕೆ ವಿರೋಧವಿದೆ. ಹೀಗೆ ಇದ್ದಾಗ ಯಾವುದೇ ವಿಚಾರವಿಲ್ಲದೆ ಯುನಿಲ್ಯಾಟರಲ್ ಆಗಿ, ಆರ್‌ಬಿಟ್ರೇರಿಯಾಗಿ ನೀವು ಮಾಡಿದ್ದುದು ಸರಿಏನು? ಸಾರಿಗೆ ದರ ಹೈಕ್ ಮಾಡಬೇಕಾದರೆ ನೀವು ವಿರೋಧ ಪಕ್ಷದವರ ಜೊತೆಗೆ ಸಮಾಲೋಚನೆ ಮಾಡಿದ್ದೀರಾ? ಈ ಹಿಂದೆ ಮಾನ್ಯ ಅಜೀಜ್ ಸೇಠ್‌ರವರು ಸಾರಿಗೆ ಸಚಿವರಿದ್ದಾಗ ವಿರೋಧಪಕ್ಷದವರ ಜೊತೆಗೆ ಮಾತನಾಡಬೇಕೆಂದು

ತಾವೇ ಒತ್ತಾಯ ಮಾಡಿದ್ದಿರಿ. ಹಾಗೆಯೇ ಶಾಸಕರುಗಳ ಜೊತೆಗೂ ಸಮಾಲೋಚನೆ ಮಾಡಬೇಕೆಂದು ಹೇಳಿದ್ದಿರಿ. ನಿಮಗೆ ವಿರೋಧ ಪಕ್ಷದವರ ಜೊತೆಗೆ ಮಾತನಾಡುವುದಕ್ಕೆ ಏನು ತೊಂದರೆಯಾಗಿತ್ತು. ಇವೊತ್ತು ಏನಾಗಿದೆಯೆಂದರೆ, ಕೆ.ಎಸ್.ಆರ್.ಟಿ.ಸಿ. ಒಂದು ವೈಟ್ ಎಲಿಫೆಂಟ್ ಆಗಿದೆ, ಬಿಳಿ ಆನೆಯಾಗಿದೆ. ಇದಕ್ಕೆ ಎಷ್ಟು ಹಾಕಿದರೂ ಕಡಿಮೆಯೇ. ಈಗ ನನ್ನ ಹತ್ತಿರ ಇದ್ದ ಫಿಗರ್ಸ್ ಪ್ರಕಾರ ನಿಮ್ಮ ಫ್ಲೀಟ್ ಸ್ಟ್ರೆಂತ್ ೯೩೪೯ ನಿಮ್ಮಲ್ಲಿ ಅಷ್ಟು ಬಸ್ಸುಗಳು ಇವೆ. ಹಾಗೆಯೇ ಈ ಸಂಸ್ಥೆಯಲ್ಲಿ ೫೮,೫೩೫ ಜನ ಕೆಲಸ ಮಾಡುತ್ತಿದ್ದಾರೆ. ಮತ್ತು ಪ್ರತಿದಿನವೂ ೫೫ ಲಕ್ಷ ಪ್ರಯಾಣಿಕರು ಪ್ರಯಾಣ ಮಾಡುತ್ತಿದ್ದಾರೆ. ಇವೊತ್ತು ಕೆ.ಎಸ್.ಆರ್.ಟಿ.ಸಿ. ಯಾರ ಸಲುವಾಗಿ ಇದೆ? ಅಲ್ಲಿರುವ ಎಂಪ್ಲಾಯೀಸ್ ಸಲುವಾಗಿ ಇದೆಯೋ, ಅಲ್ಲಿಯ ಹಿರಿಯ ಅಧಿಕಾರಿಗಳ ಸಲುವಾಗಿ ಇದೆಯೋ ಅಥವಾ ಹಣ ಮಾಡಲು ಅವಕಾಶ ಮಾಡಲಿಕ್ಕೆ ಈ ಸಂಸ್ಥೆ ಇದೆಯೋ ಈ ಪ್ರಶ್ನೆಗಳಿಗೆ ಸರ್ಕಾರದಿಂದ ನಾನು ಉತ್ತರವನ್ನು ಅಪೇಕ್ಷಿಸುತ್ತೇನೆ. ಇವೊತ್ತು ತಾವು ಈ ಕ್ಷೇತ್ರವನ್ನು ಮನೊಪಲಿ ಮಾಡಿಕೊಂಡಿದ್ದೀರಿಎಂದು ನಾನು ಹೇಳಿದೆ. ಇದರ ಅರ್ಥ ತಾವು ಪ್ರೈವೇಟ್ಯೆಸೇಶನ್ ಮಾಡಿ ಎಂದು ಹೇಳುತ್ತಿಲ್ಲ. ನ್ಯಾಶನಲೈಸೇಶನ್‌ನಲ್ಲಿ ತಮಗೆ ವಿಶ್ವಾಸ ಇದೆ. ಆದರೆ ನಿಮ್ಮ ಈ ಕ್ರಮದಿಂದ ಜನಸಾಮಾನ್ಯರಿಗೆ ಮತ್ತು ಪ್ರಯಾಣಿಕರಿಗೆ ವಿಶ್ವಾಸ ಹೋಗಿ ಬಿಟ್ಟಿದೆ. ಏಕೆಂದರೆ, ಬಸ್ ಓಡಿಸುವುದರಲ್ಲಿ ಎಫಿಶಿಯನ್ಸಿ ಇಲ್ಲ. ಬಸ್‌ಗಳ ಸ್ವಚ್ಛತೆ ಇಲ್ಲ. ವೇಳೆಗೆ ಸರಿಯಾಗಿ ಬಸ್ ಓಡಿಸುವುದಿಲ್ಲ. ಮನಸ್ಸು ಬಂದಾಗ ರೂಟ್ ಶುರು ಮಾಡುತ್ತೀರಿ, ಮನಸ್ಸು ಬಂದಾಗ ಬಸ್ ರೂಟ್ಸ್ ಕ್ಯಾನ್ಸಲ್ ಮಾಡುತ್ತೀರಿ. ಇಂತಹ ಪರಿಸ್ಥಿತಿಯಲ್ಲಿ ಕೆ.ಎಸ್.ಆರ್.ಟಿ.ಸಿ. ಇದೆ. ತಾನು ಮಾಡಿದ ಪಾಪವನ್ನು ನೀವು ಪ್ರಯಾಣಿಕರಿಗೆ ಟ್ರಾನ್ಸ್‌ಫರ್ ಮಾಡಲು ಹೇಗೆ ಸಾಧ್ಯ? ಆದ್ದರಿಂದ ತಾವು ಒಂದು ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಇಲ್ಲದಿದ್ದರೆ ನಿಮಗೆ ಕೆ.ಎಸ್.ಆರ್.ಟಿ.ಸಿ. ನಡೆಸುವುದಕ್ಕೆ ಆಗುವುದಿಲ್ಲ ಎಂದು ಹೇಳಿ ಬಿಡಿ ಅದನ್ನು ಮುಚ್ಚಬೇಕಾಗುತ್ತದೆ. ಬೇರೆ ಮಾರ್ಗವಿಲ್ಲ. ಆದರೆ ಪ್ರತಿ ಸಾರಿ ಬಸ್ ದರಗಳನ್ನು ಏರಿಸುವುದು ಸೂಕ್ತವಲ್ಲ. ನೀವು ಬಸ್ ದರಗಳನ್ನು ಏರಿಸುವುದಕ್ಕೆ ಕಾರಣ ಏನ್ನು ಕೊಟ್ಟಿದ್ದೀರೀರೆಂದು ಹೇಳಿದರೆ ಟಯರ್ ದರ ಹೆಚ್ಚಾಗಿದೆ, ಡೀಸೆಲ್ ದರ ಹೆಚ್ಚಾಗಿದೆ, ಫ್ಯೂಯಿಲ್ ದರ ಹೆಚ್ಚಾಗಿದೆ ಎಂದು ಹೇಳಿದ್ದೀರಿ. ಈ ದರಗಳು ಯಾವಾಗ ಹೆಚ್ಚು ಆಯಿತು? ಇವೊತ್ತು ಇದು ಹೆಚ್ಚಾಯಿತೆ? ೩ ತಿಂಗಳ ಹಿಂದೆ ಈ ದರಗಳು ಹೆಚ್ಚಾಯಿತೇ? ಯಾವಾಗ ಹೆಚ್ಚಾಯಿತು ಎಂಬುದನ್ನು ತಿಳಿಸಿ. ಈ ದರಗಳು ಇವೊತ್ತು ಹೆಚ್ಚಾಗಿಲ್ಲ. ಪುನಃ ಬಜೆಟ್ ಇದೆ. ಆ ಬಜೆಟ್‌ನಲ್ಲಿ ಮತ್ತೆ ಪೆಟ್ರೋಲ್ ಡೀಸೆಲ್ ಬೆಲೆ ಹೆಚ್ಚು ಮಾಡುತ್ತಾರೆ. ಹಾಗಾದರೆ ಪುನಃ ಹೆಚ್ಚು ಮಾಡುತ್ತೀರೊ? ಹಾಗಾಗಿ ನೀವು ಕೆ.ಎಸ್.ಆರ್.ಟಿ.ಸಿ.ಯಲ್ಲಿ ಎಫಿಶಿಯೆನ್ಸಿ ಇಂಪ್ರೂವ್ ಮಾಡಲಿಕ್ಕೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಮತ್ತು ಪಿಲ್‌ಫರೇಜ್ ಕಡಿಮೆ ಮಾಡುವುದಕ್ಕೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಕೆ.ಎಸ್.ಆರ್.ಟಿ.ಸಿ.ಯಲ್ಲಿ ದೊಡ್ಡ ರೋಗ ಅಂದರೆ ಇನ್‌ಡಿಸಿಪ್ಲಿನ್. ಆ ಇನ್‌ಡಿಸಿಪ್ಲಿನ್ ಅನ್ನು ಹೋಗಲಾಡಿಸಿ ಡಿಸಿಪ್ಲಿನ್ ತರಲಿಕ್ಕೆ ಪ್ರಯತ್ನ ಮಾಡಿಲ್ಲ. ಕರಪ್‌ಶನ್ ಆಗುತ್ತಿದೆ, ಅದನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡಲಿಲ್ಲ. ಇದನ್ನು ಮಾಡದೇ ಮನಸ್ಸು ಬಂದಹಾಗೆ ರಾತ್ರಿ ಏಕಾಏಕಿ ನೀವು ೨೩ ಪರ್ಸೆಂಟ್ ಹೆಚ್ಚು ಮಾಡಿದ್ದೇವೆಂದು ಹೇಳಿದರೆ ನಾವು ಕೇಳಲಿಕ್ಕೆ ಸಿದ್ಧವಿಲ್ಲ. ಯಾವ ವಿರೋಧ ಪಕ್ಷಗಳು ಕೇಳಲಿಕ್ಕೂ ಸಿದ್ಧವಿಲ್ಲ. ನಾಳೆ ಜನರೂ ಸಹ ನಿಮಗೆ ಸರಿಯಾದ ಪಾಠವನ್ನು ನಿಮಗೆ ಕಲಿಸುತ್ತಾರೆ. ನಾನು ಈಗಾಗಲೇ ಹೇಳಿದಾ ಹಾಗೆ ನಾಡಿನ ಜನ ಬಹಳ ಕಷ್ಟದಲ್ಲಿದ್ದಾರೆ, ಬಹಳ ತೊಂದರೆಯಲ್ಲಿದ್ದಾರೆ. ಹಾಲಿನ ದರ ಹೆಚ್ಚಾಯಿತು, ಗ್ಯಾಸ್ ದರ ಹೆಚ್ಚಾಯಿತು ಒಂದು ಕಡೆ ಬೆಲೆ ಏರಿಕೆಯನ್ನು ಕಡಿಮೆ ಮಾಡುತ್ತೇವೆಂದು ಹೇಳಿ ಬೆಲೆಗಳು ಗಗನಕ್ಕೆ ಹೋಗುತ್ತಿದೆ. ಸಾಮಾನ್ಯ ಜನ, ಈ ರಾಜ್ಯದ ರೈತರು, ಕೂಲಿಕಾರರು, ಮಧ್ಯಮವರ್ಗದ ಜನ ಇದನ್ನು ಹೇಗೆ ತಡೆದುಕೊಳ್ಳುವುದಕ್ಕೆ ಸಾಧ್ಯವಿದೆ? ಹಾಗಾಗಿ ಇದನ್ನು ತಕ್ಷಣ ತಾವು ವಾಪಸ್ಸು ಪಡೆದುಕೊಳ್ಳಬೇಕಾಗುತ್ತದೆ. ನಾನು

ಕೆ.ಎಸ್.ಆರ್.ಟಿ.ಸಿ. ವಿಚಾರದಲ್ಲಿ ಈಗಾಗಲೇ ಒಂದು ಸಲಹೆಯನ್ನು ಕೊಟ್ಟಿದ್ದೇನೆ. ಅದೇನೆಂದರೆ ತಾವು ತಕ್ಷಣ ಹೈಕ್ ವಿತ್‌ಡ್ರಾ ಮಾಡಿ ಒಂದು ಹೌಸ್ ಕಮಿಟಿ ಮಾಡಿ ಇದರ ಬಗ್ಗೆ ಎಲ್ಲಾ ಕಾಂಪ್ರೆಹೆನ್ಸೀವ್ ಸ್ಟಡಿ ಆಗಲಿ, ಕೆ.ಎಸ್.ಆರ್.ಟಿ.ಸಿ.ಯಲ್ಲಿ ಸಮಸ್ಯೆಗಳೇನಿವೆ ಆ ಸಮಸ್ಯೆಗಳನ್ನು ಬಗೆಹರಿಸಬೇಕಾದರೆ ಯಾವ ತರಹ ಕ್ರಮ ತೆಗೆದು ಕೊಳ್ಳಬೇಕಾಗುತ್ತದೆ, ಅದನ್ನು ಡಿಸೈಡ್ ಮಾಡಬೇಕಾಗುತ್ತದೆ. ಪ್ರತಿ ಹಂತದಲ್ಲಿಯೂ ನಾವು ರಿವಿಜನ್ ಮಾಡುತ್ತಿದ್ದರೆ, If bus fares revision is the answer when are we going to improve the efficiency, ಫಿಲ್‌ಫಿರೇಜ್ ಯಾವತರಹ ಕಡಿಮೆ ಮಾಡುವುದು. ಇದು ಸುಲಭದ ಮಾರ್ಗ. ಯಾವುದೇ ಕ್ರಮ ತೆಗೆದುಕೊಳ್ಳದೆ ಪ್ರತಿ ವರ್ಷಕ್ಕೆ ತಾವು ದರವನ್ನು ಹೆಚ್ಚು ಮಾಡುತ್ತಾ ಹೋದರೆ ಕೆ.ಎಸ್.ಆರ್.ಟಿ.ಸಿ.ಗೆ ತೊಂದರೆ ಏನು ಇಲ್ಲ. ಅಲ್ಲಿಯ ಜನರಿಗೂ ಏನೂ ತೊಂದರೆ ಇಲ್ಲ. ಅವರು ಇಂಪ್ರೂವ್ ಮಾಡುವುದಕ್ಕೂ ಮನಸ್ಸು ಕೊಡುವುದಿಲ್ಲ ಹಾಗಾಗಿ ಒಂದು ಕಮಿಟಿ ರಚನೆಯಾಗಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ:- ಈಗ ಪ್ರತಿವರ್ಷ ಜಾಸ್ತಿ ಮಾಡಬೇಕೆಂದು ಹೇಳುತ್ತೀರೋ.

ಶ್ರೀ ಆರ್.ವಿ. ದೇಶಪಾಂಡೆ:- ಜಾಸ್ತಿ ಮಾಡಬೇಕೆಂದು ಹೇಳಿಲ್ಲ; ಮಾಡಬೇಡಿ ಎಂದು ಹೇಳಿದ್ದುದು ಎಫಿಷಿಯನ್ಸ್ ತರುತ್ತೇವೆ ಎಂದು ಹೇಳುತ್ತಾರೆಯೇ ವಿನಃ ಪ್ರತಿಸಾರಿ ಹೆಚ್ಚು ಮಾಡಿಕೊಂಡು ಹೋದರೆ ಹೇಗೆ? ನೀವು ನಮಗೆ ಕಷ್ಟ ಆಗಿದೆ, ಡಿ.ಎ. ಹೆಚ್ಚಾಗಿದೆ, ಟೈರ್ ದರ ಹೆಚ್ಚಾಗಿದೆ ಎಂದು ಹೇಳಬಹುದು ಈ ಉತ್ತರವನ್ನು ಕೇಳಲಿಕ್ಕೆ ನಾವು ತಯಾರಾಗಿಲ್ಲ. ಹೆಚ್ಚು ಮಾಡಿರಿ ಎಂದು ನಾವು ಹೇಳಿಲ್ಲ. Irrational increases in fares at politically comfortable intervals cannot be the answer. ಪ್ರತಿಯೊಂದು ಪೊಲಿಟಿಕಲ್ ಇಂಟರ್‌ವಲ್ಸ್‌ಗೆ, ನಿಮಗೆ ಬೇಕಾದರೆ ದರವನ್ನು ಹೆಚ್ಚು ಮಾಡುತ್ತಾ ಹೋದರೆ ಅದನ್ನು ಜನ ಸಹಿಸುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ಇವತ್ತು ಅದನ್ನು ತಾವು ತಕ್ಷಣ ವಿತ್‌ಡ್ರಾ ಮಾಡಬೇಕು. ಮತ್ತು ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಬೇಕು. ನಮ್ಮ ನ್ಯಾಷನಲ್ ಟ್ರಾನ್ಸ್‌ಪೋರ್ಟೇಷನ್ ಪ್ಲಾನಿಂಗ್ ಅಂಡ್ ರೀಸರ್ಚ್ ಸೆಂಟರ್ ಮತ್ತು ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ರೋಡ್ ಟ್ರಾನ್ಸ್‌ಪೋರ್ಟ್ ಇವರು ಕೆ.ಎಸ್.ಆರ್.ಟಿ.ಸಿ ಯನ್ನು ಇನ್‌ಡೆಪ್ತ್ ಸ್ಟಡಿಮಾಡಿ ಅವರು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆ ವರದಿ ಏನು ಎನ್ನುವುದು ಯಾರಿಗೂ ಗೊತ್ತಾಗುವುದಿಲ್ಲ. ಆ ವರದಿ ನಮಗೆ ಗೊತ್ತಾಗಬೇಕು. ಅಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಯಾವ ಪ್ರಕಾರ ಇನ್‌ಎಫಿಷಿಯನ್ಸಿ ಇದೆ, ಯಾವ ಪ್ರಕಾರ ಅಡ್ಮಿನಿಸ್ಟ್ರೇಷನ್ ಸುಧಾರಣೆ ಮಾಡಬೇಕು ಎಂದು ಇದೆ. ಅದು ನಾಡಿನ ಜನರಿಗೆ ಗೊತ್ತಾಗಬೇಕಾಗುತ್ತದೆ. ಆ ದೃಷ್ಟಿಯಿಂದ ಇವತ್ತು ಏನು ಹೈಕ್ ಮಾಡಿದ್ದೀರಿ ನಿಜವಾಗಿ ಹೇಳಬೇಕಾದರೆ ಅದೊಂದು ಪಾಪದ ಕೆಲಸ. ಇದನ್ನು ಯಾರು ಸಹಿಸುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ತಕ್ಷಣ ಇದನ್ನು ತಾವು ವಿತ್‌ಡ್ರಾ ಮಾಡಬೇಕು. ಮತ್ತು ನಾನೇನು ಸಲಹೆಯನ್ನು ಕೊಟ್ಟಿದ್ದೇನೆಂದರೆ, ತಾವು ಎರಡು ಸದನದ ಸದಸ್ಯರುಗಳನ್ನು ಒಳಗೊಂಡ ಹೌಸ್ ಕಮಿಟಿಯನ್ನು ಮಾಡಿ, ಅದರಲ್ಲಿ ಎಕ್ಸ್‌ಪರ್ಟ್ಸ್ ಇರಲಿ, ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಅದರ ರೆಕಮೆಂಡೇಷನ್ ಬಂದನಂತರ ಯಾವ ಪ್ರಕಾರ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೊ ಅದನ್ನು ತೆಗೆದುಕೊಳ್ಳಬೇಕು. ಇಷ್ಟು ಹೇಳಿ ಈ ಪ್ರಿಲಿಮಿನರಿ ಸಬ್‌ಮಿಷನ್ ಮಾಡಲಿಕ್ಕೆ ತಾವು ನನಗೆ ಅವಕಾಶವನ್ನು ಕೊಟ್ಟಿರುವುದಕ್ಕೆ ತಮಗೆ ಧನ್ಯವಾದಗಳು. ಈ ನಿಲುವಳಿ ಸೂಚನೆಯನ್ನು ತಾವು ಅಲೋ ಮಾಡಿ ಇದು ಬಹಳ ಗಂಭೀರವಾದಂತಹ ಸಮಸ್ಯೆಯಾಗಿದೆ. ಇದನ್ನು ರಾಜ್ಯದ ಜನತೆಯ ಹಿತದೃಷ್ಟಿಯಿಂದ ನಾವು ಎತ್ತಿದ್ದೇನೆ. ಇದರ ಬಗ್ಗೆ ಇನೂ ವಿವರವಾಗಿ ಚರ್ಚೆ ಮಾಡಲಿಕ್ಕೆ ತಾವು ಅವಕಾಶವನ್ನು ಕೊಡಬೇಕು. ಏಕೆಂದರೆ, ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಅಂಕಿ ಅಂಶಗಳು ತಮಗೆ ಗೊತ್ತು ಮಾನ್ಯ ಸಿಂಧ್ಯರವರು ಈ ಇಲಾಖೆಯ ಮಂತ್ರಿಯಾಗಿದ್ದರು. ಅವರು ಬಹಳ ದಕ್ಷ ಮಂತ್ರಿಯಾಗಿ ಇಲ್ಲಿ

ಕೆಲಸ ಮಾಡಿದ್ದಾರೆ. ಅವರಿಗೆ ಸಾಕಷ್ಟು ಅನುಭವ ಇದೆ. ಆ ಅನುಭವ ಲಾಭ ನಮಗೆ ಆಗಬೇಕು. ಹಾಗಾಗಿ ನಾನು ಡಿಟೈಲ್ ಸ್ಟ್ಯಾಟಿಸ್ಟಿಕ್ಸ್‌ಗೆ ಹೋಗಿಲ್ಲ. ಅದರ ಬಗ್ಗೆ ಅವರು ಪ್ರಸ್ತಾಪ ಮಾಡುತ್ತಾರೆ. ಇಷ್ಟು ಹೇಳಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):- ಸನ್ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯ ಮೂಲಕ ಕೆ.ಎಸ್.ಆರ್.ಟಿ.ಸಿ.ಯ ಬಗ್ಗೆ ಮಾತನಾಡುತ್ತಿದ್ದೇನೆ. ಕೆ.ಎಸ್.ಆರ್.ಟಿ.ಸಿ. ಬಸ್ಸಿನ ದರವನ್ನು ೨೨ ರಿಂದ ೨೫ ಪರ್ಸೆಂಟ್‌ವರೆಗೆ ಏರಿಸಿರುವುದನ್ನು ವಾಪಸ್ ಪಡೆಯಬೇಕು, ಜನರು ಅನೇಕ ಸಂಕಷ್ಟಗಳ ಮಧ್ಯೆ ತೊಳಲಾಡುತ್ತಿದ್ದಾರೆ. ಸನ್ಮಾನ್ಯ ದೇಶಪಾಂಡೆಯವರು ಹೇಳಿದಂತೆ ಒಂದು ಕಡೆ ನೆರೆಹಾವಳಿ ಇನ್ನೊಂದು ಕಡೆ ಬರಗಾಲದಿಂದ ರೈತನು ಬೆಳೆದಂಥ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಸಾಮಾನ್ಯ ರೈತ ಸಾರಿಗೆ ಬಸ್ಸಿನಲ್ಲಿ ತಾನು ಬೆಳೆದಂಥ ತರಕಾರಿ ಮತ್ತು ದವಸಧಾನ್ಯಗಳನ್ನು ಮಾರಲು ಹೋಗುವವನೂ ಸಹ ಸಂಕಷ್ಟ ಪಡತಕ್ಕ ಪರಿಸ್ಥಿತಿ ಇದೆ. ಈ ಸಂದರ್ಭದಲ್ಲಿ ಹೊಸದಾಗಿ ಮುಖ್ಯಮಂತ್ರಿಗಳಾಗಿ ಈ ಸರ್ಕಾರದ ಲೋಪದೋಷಗಳನ್ನು ಮತ್ತು ಹಿಂದೆ ಆದಂಥ ಅನೇಕ ತಪ್ಪುಗಳನ್ನು ಸರಿಪಡಿಸಿ ಜನರಿಗೆ ಬೇಕಾದಂಥ ಹೆಚ್ಚಿನ ಸವಲತ್ತುಗಳನ್ನು ಒದಗಿಸುವ ಕಡೆ ವಿಶೇಷವಾದಂಥ ಗಮನವನ್ನು ಹರಿಸುತ್ತಾರೆಂದು ನಾವೆಲ್ಲರೂ ಭಾವಿಸಿದ್ದೆವು. ಸನ್ಮಾನ್ಯ ಅಧ್ಯಕ್ಷರೆ, ನಾನು ಕೆಲವು ವಿಚಾರಗಳನ್ನು ಮಾತ್ರ ಹೇಳಬಯಸುತ್ತೇನೆ. ಅದೇನೆಂದರೆ, ತಮಗೆ ಗೊತ್ತಿರುವ ಹಾಗೆ, ಜನವರಿ ತಿಂಗಳಿನಲ್ಲಿ ಅಧಿವೇಶನ ಸೇರಿತ್ತು. ಆಗ ಕೆ.ಎಸ್.ಆರ್.ಟಿ.ಸಿ.ಯನ್ನು ನೋಡತಕ್ಕಂಥ ಸನ್ಮಾನ್ಯ ಸಚಿವರು ಇದರಲ್ಲಿ ಅನೇಕ ಲೋಪದೋಷಗಳಿವೆ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಸೋರಿಕೆಯಾಗುತ್ತಿದೆ, ಅವೆಲ್ಲವುಗಳನ್ನು ಸರಿಪಡಿಸಲು ಪ್ರಯತ್ನ ಮಾಡಿ ದಕ್ಷವಾದಂಥ ವ್ಯವಸ್ಥೆ ಮಾಡುತ್ತೇವೆ ಎನ್ನತಕ್ಕ ಭರವಸೆಯನ್ನು ಕೊಟ್ಟಿದ್ದರು. ಆಗ ಸಾರಿಗೆ ದರವನ್ನು ಜಾಸ್ತಿ ಮಾಡತಕ್ಕ ಪ್ರಸ್ತಾಪವೇ ಬರಲಿಲ್ಲ. ಬಜೆಟ್ ಅಧಿವೇಶನವನ್ನು ನಾವು ಸೇರುತ್ತಿದ್ದೇವೆ ಆದರೆ ಜನರಿಂದ ಆಯ್ಕೆಯಾದಂಥ ಸದನವನ್ನು, ವಿಧಾನ ಮಂಡಲವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ನೀವು ಮನಸೊ ಇಚ್ಛೆ ಎಂಟು ದಿನಕ್ಕೆ ಮೊದಲು ಸಾರಿಗೆ ದರವನ್ನು ಜಾಸ್ತಿ ಮಾಡುವುದಾದರೆ ಈ ಸದನದ ಅಗತ್ಯ ಇದೆಯೇನು? ಇವತ್ತು ಆ ಇಲಾಖೆಯಲ್ಲಿ ಏನು ಲೋಪದೋಷಗಳಿವೆ, ಎಲ್ಲಿ ಸೋರಿ ಹೋಗುತ್ತಿದೆ, ಎಲ್ಲಿ ಲೂಟಿಯಾಗುತ್ತಿದೆ ಎನ್ನುವುದನ್ನು ನಾನು ಹೇಳತಕ್ಕಂಥ ಅಗತ್ಯವಿಲ್ಲ. ಸಾರಿಗೆ ಸಚಿವರೇ ಈ ಸದನದಲ್ಲಿ ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದಾರೆ. ಬಸ್ಸಿಗೆ ಬಾಡಿಯನ್ನು ಕಟ್ಟಿಸಲು ಕಳಿಸತಕ್ಕ ಸಂದರ್ಭದಲ್ಲಿ ಒಂದು ಬಸ್ಸಿಗೆ ಸುಮಾರು ೫೦ ಸಾವಿರಕ್ಕಿಂತ ಹೆಚ್ಚು ಕಾಂಟ್ರಾಕ್ಟ್ ಮಾಡಿಕೊಂಡು ಲೂಟಿ ಮಾಡತಕ್ಕ ಪ್ರಯತ್ನ ಮೊದಲು ನಡೆಯುತ್ತಿತ್ತು, ಅಂಥ ಕಾಂಟ್ರ್ಯಾಕ್ಟ್‌ನ್ನು ರದ್ದು ಮಾಡಿದ್ದೇವೆ ಎಂದು ಹೇಳಿದ್ದಾರೆ. ನೀವು ಮೇಲ್ಮನೆಯಲ್ಲಿ ಸುಮಾರು ೧೧೮ ಕೋಟಿ ರೂಪಾಯಿ ಈ ಇಲಾಖೆಯಲ್ಲಿ ಸೋರಿ ಹೋಗುತ್ತಿದೆ ಎನ್ನತಕ್ಕ ಮಾತನ್ನು ಹೇಳಿದ್ದೀರಿ. ನಾನು ನಿಮ್ಮನ್ನು ಸರ್ಕಾರವನ್ನು ಅಧ್ಯಕ್ಷರ ಮೂಲಕ ಕೇಳಿಕೊಳ್ಳುವುದೇನೆಂದರೆ, ಮಾನ್ಯ ಭೀಮಣ್ಣ ಖಂಡ್ರೆಯವರು ಆ ಭಾಗದಿಂದಲೇ ಬಂದಂಥ ಜನ, ಯಾವುದಾದರೂ ಒಂದು ಲೈನ್‌ನಲ್ಲಿ, ಒಂದು ಬಸ್ಸಿನಲ್ಲಿ ೫೦-೫೫ ಜನ ಪ್ರಯಾಣ ಮಾಡಬೇಕಾಗುತ್ತದ. ಅದರಲ್ಲಿ ೧೫೦ಕ್ಕಿಂತ ಹೆಚ್ಚು ಜನ ಪ್ರಯಾಣಮಾಡುವುದನ್ನು ಪ್ರತಿನಿತ್ಯ ಟಾಪ್ ಮೇಲೆ ಕುಳಿತುಕೊಂಡು ಹೋಗುವುದನ್ನು ತಾವು ನೋಡುತ್ತಿದ್ದೀರಿ. ಆದರೆ ಸಮಯಕ್ಕೆ ಸರಿಯಾಗಿ ಬಸ್ಸುಗಳಿಲ್ಲ, ಸ್ವಚ್ಛತೆ ಇಲ್ಲ, ಸಮಯಕ್ಕೆ ಸರಿಯಾಗಿ ತಲುಪುವುದಿಲ್ಲ. ಈ ಎಲ್ಲಾ ಪರಿಸ್ಥಿತಿ ವಿಚಿತ್ರವಾಗಿರಬೇಕಾದರೆ ಈ ಸಾರಿಗೆ ಇಲಾಖೆಯಲ್ಲಿ ಇರತಕ್ಕ ಲೋಪದೋಷಗಳನ್ನು ಸರಿಪಡಿಸಿ ಸಮಯಕ್ಕೆ ಸರಿಯಾಗಿ ಒಳ್ಳೆಯ ಬಸ್ಸುಗಳನ್ನು ಬಿಟ್ಟು ಜನರಿಗೆ ಸರಿಯಾದ ಅನುಕೂಲಗಳನ್ನು ಮಾಡಿಕೊಡುವುದರ ಬಗ್ಗೆ ಯೋಚನೆ ಮಾಡುವುದರ ಬದಲಾಗಿ ನಾವು ಬಸ್ಸುಗಳನ್ನು ಕೊಂಡು ಕೊಳ್ಳಬೇಕು, ಅದಕ್ಕಾಗಿ ಸಾರಿಗೆ ದರವನ್ನು ಹೆಚ್ಚು ಮಾಡುತ್ತೇವೆಂದು ಹೇಳತಕ್ಕದ್ದು ಎಷ್ಟರ ಮಟ್ಟಿಗೆ ಸರಿಯಾಗುತ್ತದೆ? ನೀವು ಸಾರಿಗೆ ಇಲಾಖೆಯ ಮಂತ್ರಿಗಳಾಗಿ ಅಲ್ಲಿ ಆಗತಕ್ಕ ಸರಿತಪ್ಪುಗಳನ್ನು ನೋಡದೆ ಏಕಾಏಕಿ

ಜನರ ಮೇಲೆ ಈ ರೀತಿಯಾಗಿ ಭಾರವನ್ನು ಹಾಕತಕ್ಕದ್ದರಿಂದ ನಿಮ್ಮ ಸರ್ಕಾರಕ್ಕೆ ಗೌರವ ಬರುತ್ತದೆಯೆ? ಜನರು ಇದನ್ನು ನಂಬುತ್ತಾರೆಯೆ? ಇದರ ಬಗ್ಗೆ ತಾವು ಯೋಚನೆ ಮಾಡಬೇಕಾಗಿದೆ. ಇವತ್ತು ಹೆಚ್ಚು ಕಡಿಮೆ ನಿಮ್ಮ ಹತ್ತಿರ ೯ ಸಾವಿರ ಬಸ್ಸುಗಳಿವೆ ಎಂದು ಹೇಳುತ್ತೀರಿ. ಇದರಲ್ಲಿ ಸುಮಾರು ೨೩೦೦ ಕಿಂತ ಹೆಚ್ಚು ಬಸ್ಸುಗಳು ಪ್ರತಿವರ್ಷ ಅಪಘಾತಕ್ಕೆ ಈಡಾಗುತ್ತವೆಂದು ನೀವೆ ಒಪ್ಪಿಕೊಂಡಿದ್ದೀರಿ. ಇವತ್ತು ಖಾಸಗಿಯವರು ಬಸ್ಸುಗಳನ್ನು ಓಡಿಸುತ್ತಾರೆ, ಅದರಲ್ಲಿ ಏಕೆ ಬಸ್ಸುಗಳು ಅಪಘಾತಕ್ಕೆ ಈಡಾಗುವುದಿಲ್ಲವೆಂದು ಕೇಳುತ್ತೇನೆ, ಅವರಲ್ಲಿ ಹೇಗೆ ಲಾಭದಾಯಕವಾಗಿ ನಡೆಸುತ್ತಾರೆ? ಎರಡು ಬಸ್ಸುಗಳನ್ನು ಮೂರು ವರ್ಷ ಸರಿಯಾಗಿ ನಡೆಸಿದರೆ ಒಂದು ಹೊಸ ಬಸ್ಸನ್ನು ಕೊಂಡುಕೊಳ್ಳತಕ್ಕ ಶಕ್ತಿ ಅವರಿಗೆ ಇರಬೇಕಾದರೆ, ನೀವು ಸಮಯಕ್ಕೆ ಸರಿಯಾಗಿ ಬಸ್ಸುಗಳನ್ನು ಓಡಿಸದೆ, ಬರೀ ಫೇರ್‌ನ್ನು ಜಾಸ್ತಿ ಮಾಡಿ ಜನರನ್ನು ಸುಲಿಗೆ ಮಾಡತಕ್ಕ ಕೆಲಸವನ್ನು ಏಕೆ ಮಾಡುತ್ತಿದ್ದೀರಿ? ನನಗೆ ಬಂದಿರತಕ್ಕ ಖಚಿತವಾದ ಮಾಹಿತಿಯನ್ನು ಕೊಡುತ್ತೇನೆ, ತಾವು ಅದರ ಬಗ್ಗೆ ರೆಕಾರ್ಡ್‌ನ್ನು ತರಿಸಿ ನೋಡಿ. ಹಿಂದಿನ ವರ್ಷ ಮದ್ರಾಸ್‌ನಿಂದ ಸುಮಾರು ೫ ಕೋಟಿ ರೂಪಾಯಿ ಬೆಲೆ ಬಾಳತಕ್ಕ ೫೦೦ಕ್ಕೂ ಹೆಚ್ಚು ಟೈರುಗಳನ್ನು ಖರೀದಿ ಮಾಡಿದ್ದಾರೆ. ಲೆಕ್ಕದಲ್ಲಿ ಖರೀದಿ ಮಾಡಿದ್ದೇವೆಂದು ತೋರಿಸಿದ್ದಾರೆ. ಆದರೆ ನಿಮ್ಮ ಗೋಡೌನ್‌ನಲ್ಲಿ ಅದರ ಸ್ಟಾಕ್ ಬರಲಿಲ್ಲ. ಕಂಡಕ್ಟರ್ ಮತ್ತು ಡ್ರೈವರ್‌ಗಳಿಂದ ಬಂತು ಕೊಟ್ಟು ತೆಗೆದುಕೊಂಡೆವು ಎನ್ನತಕ್ಕ ರೆಕಾರ್ಡ್‌ನ್ನು ಮಾಡಿ ಇಟ್ಟುಕೊಂಡಿರಿ. ಈ ರೀತಿಯಾಗಿ ಒಂದೇ ಒಂದು ಸಂದರ್ಭದಲ್ಲಿ ಟೈರುಗಳನ್ನು ಖರೀದಿ ಮಾಡಿರತಕ್ಕದ್ದು ಹೌದೊ ಅಥವಾ ಇಲ್ಲವೊ? ಆ ಟೈರುಗಳು ಉಪಯೋಗ ಆಗಿದೆಯೋ ಅಥವಾ ಇಲ್ಲವೊ? ಕಂಡಕ್ಟರ್ ಮತ್ತು ಡ್ರೈವರ್‌ಗಳನ್ನು ಸರಿಯಾದ ರೀತಿಯಲ್ಲಿ, ಯೋಗ್ಯರಾದವರನ್ನು, ಪ್ರಾಮಾಣಿಕರನ್ನು, ನಿಪುಣರನ್ನು ಆಯ್ಕೆ ಮಾಡುತ್ತೀರಾ, ಅದೂ ಕೂಡ ಇಲ್ಲ, ೩೫-೫೦ ಸಾವಿರವನ್ನು ಕೊಟ್ಟು ತೆಗೆದುಕೊಂಡಿರತಕ್ಕದ್ದು ನಮಗೆಲ್ಲರಿಗೂ ಗೊತ್ತಿರತಕ್ಕ ಸಂಗತಿ. ಇದರಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ, ಯೋಗ್ಯರಾದ ಡ್ರೈವರ್‌ಗಳನ್ನು ನೀವು ಆಯ್ಕೆ ಮಾಡಿಕೊಳ್ಳದ್ದಿರೆ ಅಪಘಾತ ನಿಶ್ಚಿತ. ಪ್ರತಿ ವರ್ಷ ೯ ಸಾವಿರ ಬಸ್ಸುಗಳಲ್ಲಿ ಸುಮಾರು ೨೩೦೦ ಕ್ಕೂ ಹೆಚ್ಚು ಬಸ್ಸುಗಳು ಅಪಘಾತಕ್ಕೆ ಈಡಾಗುತ್ತವೆ, ಅಂಥ ಬಸ್ಸುಗಳು ಆ ಸಮಯದಲ್ಲಿ ಸಂಪೂರ್ಣವಾಗಿ ನಿಂತು ಹೋಗುತ್ತವೆ, ಅದರಿಂದ ನಷ್ಟವಾಗುತ್ತದೆ. ಇದರ ಪರಿಣಾಮವನ್ನು ತಡೆಯುವುದಕ್ಕೆ ವಿಶೇಷವಾದಂಥ ಯೋಜನೆಯನ್ನು, ವ್ಯವಸ್ಥೆಯನ್ನೇನಾದರೂ ಮಾಡಿದ್ದೀರ? ನೀವೆ ಹೇಳಿಕೊಳ್ಳುವ ಪ್ರಕಾರ ೬೦೦-೬೫೦ ಕೋಟಿ ವ್ಯವಹಾರದಲ್ಲಿ ಪಿಲ್‌ಫರೇಜ್ ೨೫ ಪರ್‌ಸೆಂಟ್ ಗಿಂತ ಹೆಚ್ಚಾದರೆ ಅದು ೧೨೦ ಕೋಟಿಗೂ ಮೀರಿದರೆ ಯಾವ ಕಾಲಕ್ಕೆ ಇದು ಲಾಭದಾಯಕವಾಗಿ ನಡೆಯುವುದಕ್ಕೆ ಸಾಧ್ಯವಾಗುತ್ತದೆ? ನನಗೆ ಗೊತ್ತಿರುವ ಪ್ರಕಾರ, ಈ ವರ್ಷ ಸುಮಾರು ೧೮೦ ಕೋಟಿಗಿಂತ ಹೆಚ್ಚು ನಷ್ಟವಾಗಿದೆ. ಅದಕ್ಕಾಗಿ ಸಾರಿಗೆ ದರವನ್ನು ಜಾಸ್ತಿ ಮಾಡಿ ಪ್ಯಾಚ್‌ಅಪ್ ಮಾಡತಕ್ಕ ಪ್ರಯತ್ನವನ್ನು ತಾವು ಮಾಡುತ್ತಿದ್ದೀರಿ, ಈ ರೀತಿ ನಷ್ಟ ಏಕೆ ಆಗುತ್ತದೆ? ಖಾಸಗಿಯವರು ಒಂದು ಲೀಟರ್‌ಗೆ ಬೇರೆ ರೀತಿಯಾಗಿ ಮೈಲೇಜನ್ನು ಕೊಡುತ್ತಾರೆ, ಅವರಲ್ಲಿ ಟೈರ್ ೧೦೦೦ ಕಿ.ಮೀ. ಓಡುತ್ತದೆ, ಆದರೆ ನಿಮ್ಮಲ್ಲಿ ಏಕೆ ಕಡಿಮೆ ಓಡುತ್ತದೆ? ಏಕೆ ಸರಿಯಾಗಿ ಮೈಲೇಜ್ ಸಿಗುತ್ತಾ ಇಲ್ಲ? ಡೀಸೆಲ್ ಹಾಕಿ ತೆಗೆದುಕೊಳ್ಳತಕ್ಕದ್ದರಲ್ಲಿ ಲೂಟಿಯಾಗುತ್ತಿರುವುದು ನಿಮಗೆ ಗೊತ್ತಿದೆಯೆ? ಅದನ್ನು ಪರಿಶೀಲನೆ ಮಾಡತಕ್ಕ ಪ್ರಯತ್ನ ಮಾಡಿದ್ದೀರ? ತಾವು ಸ್ವಲ್ಪ ಪ್ರಾಮಾಣಿಕರಾಗಿದ್ದೀರಿ, ಆ ಇಲಾಖೆಗೆ ಹೋಗಿ ಅದನ್ನು ಪರಶೀಲನೆ ಮಾಡಿ. ಸರಿಯಾದ ತಜ್ಞರನ್ನು ನೇಮಕ ಮಾಡಿಕೊಂಡು ಲೋಪದೋಷವನ್ನು ಸರಿಪಡಿಸತಕ್ಕ ಪ್ರಾಮಾಣಿಕವಾದ ಪ್ರಯತ್ನವನ್ನು ತಾವು ಮಾಡದದೆ, ಈ ರೀತಿಯಾಗಿ ಏಕಾ ಏಕಿ ಸಾರಿಗೆ ದರವನ್ನು ಜಾಸ್ತಿ ಮಾಡಿರತಕ್ಕದ್ದು ನಿಜವಾಗಿಯೂ ಸಹ ದೊಡ್ಡ ಅಪರಾಧವಾಗುತ್ತದೆ. ನೀವು ಏನು ಬಿಡಿಭಾಗಗಳನ್ನು ಖರೀದಿಸುತ್ತಿರೋ ಅದರ ಬಗ್ಗೆ ಇರುವ ಇನ್‌ವೆಂಟರಿ ರೆಕಾರ್ಡ್‌ನ್ನು ತರಿಸಿ ನೋಡಿ. ನಿಮ್ಮಲ್ಲಿ ಎಷ್ಟು ಕೋಟಿ ರೂಪಾಯಿಗಳ ಬಿಡಿಭಾಗಗಳು ಅನಗತ್ಯವಾಗಿ

ಗೋಡೌನ್‌ಗಳಲ್ಲಿ ಬಿದ್ದಿದೆ, ಏತಕ್ಕಾಗಿ ಆ ರೀತಿ ಖರೀದಿ ಮಾಡುತ್ತೀರಿ? ಅದರ ಅಗತ್ಯವಿದೆಯೋ? ಎಲ್ಲಿಂದ ಖರೀದಿ ಮಾಡುತ್ತೀರಿ? ಹೇಗೆ ಸ್ಟಾಕ್ ಇಟ್ಟಿದ್ದೀರಿ? ಇದು ಒಂದು ರೀತಿಯಲ್ಲಿ ಬಿಳಿಯಾನೆಯಾಗಿದೆ, ಪ್ರತಿಯೊಂದು ಬಾಬಿನಲ್ಲೂ ಲೋಪ, ಲೂಟಿ ನಡೆಯುತ್ತಿದೆ, ಯಾವುದೇ ಸಾರಿಗೆ ಬಸ್ಸಿನಲ್ಲಿ ಚೆಕ್ ಮಾಡತಕ್ಕ ವ್ಯವಸ್ಥೆ ಇಲ್ಲ, ಕಂಡಕ್ಟರ್ ಮತ್ತು ಡ್ರೈವರ್‌ಗಳು ಮಾಡಿದಂತೆ ನಡೆಯುತ್ತಿದೆ. ಹಿಂದಿನ ಸಾರಿಗೆ ಸಚಿವರಾದ ಅಜೀಜ್‌ಸೇಠ್‌ರವರೇ ಸ್ವತಃ ನನ್ನ ಇಲಾಖೆಯಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ ಅದನ್ನು ಕಂಟ್ರೋಲ್ ಮಾಡಲು ಆಗುತ್ತಿಲ್ಲವೆಂದು ಹೇಳಿದ್ದರು. ಖಾಸಗಿಯವರು ಮಂಗಳೂರಿನಿಂದ ಉಡುಪಿಗೆ ಬಸ್ಸುಗಳನ್ನು ಓಡಿಸುತ್ತಾರೆ, ಅವರು ಎಷ್ಟು ಸ್ವಚ್ಛ ಮತ್ತು ಒಳ್ಳೆಯ ಬಸ್ಸುಗಳನ್ನು ಓಡಿಸುತ್ತಾರೆ; ಅದನ್ನು ತಾವು ಕೂಡ ಹೋಗಿ ನೋಡಿಕೊಂಡು ಬನ್ನಿ. ನಮ್ಮ ಸರ್ಕಾರಿ ಬಸ್ಸುಗಳು ಸಹ ಅಲ್ಲಿ ಹೋಗುತ್ತವೆ, ನನಗೆ ಗೊತ್ತಿರುವ ಹಾಗೆ, ಖಾಸಗಿಯವರು ೪೫ ನಿಮಿಷದಲ್ಲಿ ಮಂಗಳೂರಿನಿಂದ ಉಡುಪಿಗೆ ನಿಗದಿ ಮಾಡಿದ ಸಮಯಕ್ಕೆ ಸರಿಯಾಗಿ ತಲುಪಿಸುತ್ತಾರೆ. ಅವರ ದರ ೧೦ ರಿಂದ ೧೧ ರೂಪಾಯಿ ಇರುತ್ತದೆ. ನಮ್ಮ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಲ್ಲಿ ೨೦ ರೂಪಾಯಿ ಇರುತ್ತದೆ, ಅಷ್ಟು ಇದ್ದರೂ ಸಹ ಇದರಲ್ಲಿ ನಷ್ಟವಾಗುತ್ತಿದೆ. ಈಗ ತಾವು ಏನು ಹೊಸದಾಗಿ ಬಸ್ಸುಗಳನ್ನು ಖರೀದಿ ಮಾಡುತ್ತೇವೆಂದು ಘೋಷಣೆ ಮಾಡಿದ್ದೀರೋ ದಯಮಾಡಿ ಜನರ ನಾನು ಪರವಾಗಿ ಕೈಮುಗಿದು ಹೇಳುತ್ತೇನೆ. ಹೊಸದಾಗಿ ಬಸ್ಸುಗಳನ್ನು ಖರೀದಿ ಮಾಡಬೇಡಿ, ಈಗ ಇರತಕ್ಕ ಬಸ್ಸುಗಳನ್ನೇ ಸರಿಯಾದ ರೀತಿಯಲ್ಲಿ ಓಡಿಸಿ, ಎಲ್ಲಿ ಖಾಸಗಿ ಮಾಲೀಕರುಗಳು ಕಾಂಪೀಟ್ ಮಾಡುತ್ತಾರೋ ನಮ್ಮ ಸರ್ಕಾರದ ಕೆಲವು ಷರತ್ತುಗಳನ್ನು ಒಪ್ಪಿಕೊಂಡು ಬಸ್ಸುಗಳನ್ನು ಓಡಿಸಲು ಸಿದ್ಧರಾಗಿದ್ದಾರೋ ಅವರಿಗೆ ಅವಕಾಶ ಮಾಡಿಕೊಡಿ. ಯಾವುದನ್ನು ಮಾಡುವುದಕ್ಕೆ ಜನ ಮುಂದೆ ಬರುವುದಿಲ್ಲವೊ, ಯಾವುದನ್ನು ಮಾಡುವುದಕ್ಕೆ ಜನರಿಂದ ಸಾಧ್ಯವಾಗುವುದಿಲ್ಲವೊ ಅಂಥವುಗಳನ್ನು ಸರ್ಕಾರ ನಡೆಸಿ ಜನರಿಗೆ ಅನುಕೂಲ ಮಾಡಿಕೊಡತಕ್ಕದ್ದೇ ಹೊರತು ಎಲ್ಲವನ್ನೂ ಸರ್ಕಾರವೇ ಮಾಡತಕ್ಕ ಪ್ರಯತ್ನವನ್ನು ತಾವು ಮಾಡುತ್ತಿದ್ದೀರಿ. ಇದನ್ನು ಕೈಬಿಡಬೇಕಾಗುತ್ತದೆ. ಯಾವ ಬಸ್ಸುಗಳು ಹಾಳಾಗಿವೆ ಎಂದು ಮಾರಾಟ ಮಾಡಲು, ಗುಜರಿಗೆ ಹಾಕಲು ಕಳಿಸುತ್ತೀರೋ ಅದರ ಬಗ್ಗೆ ಯಾವತ್ತಾದರೂ ಕೂಡ ಪರಿಶೀಲನೆ ಮಾಡಿದ್ದೀರಾ ಎಂದು ತಮ್ಮಲ್ಲಿ ಈ ಸಂದರ್ಭದಲ್ಲಿ ನಾನು ಒತ್ತಾಯಮಾಡಿ ಕೇಳುತ್ತೇನೆ. ಮಾರಾಟ ಮಾಡದಿದ್ದ ಉಪಯೋಗವಿಲ್ಲವೆಂದು ಹೇಳಿ ಪ್ರತಿ ವರ್ಷವೂ ಇಂಥ ಬಸ್ಸುಗಳನ್ನು ಗುಜರಿಗೆ ಕಳಿಸುತ್ತಿದ್ದೀರಿ. ಅದೇ ಬಸ್ಸುಗಳನ್ನು ಖಾಸಗಿ ಬಸ್ಸುಗಳ ಮಾಲಿಕರು ಮತ್ತು ಕೆಲವು ಸಂಸ್ಥೆಗಳವರು ಕೊಂಡುಕೊಂಡು ರಿಪೇರಿ ಮಾಡಿಸಿ ಹತ್ತಾರು ವರ್ಷಗಳ ಕಾಲ ನಡೆಸುತ್ತಿರತಕ್ಕ ನೂರಾರು ಉದಾಹರಣೆಗಳನ್ನು ನಾನು ನಿಮಗೆ ಕೊಡುತ್ತೇನೆ. ಬೇರೆ ಬಸ್ಸುಗಳ ಮಾಲೀಕರೊಂದಿಗೆ ಮತ್ತು ಗುಜರಿಯವರೊಂದಿಗೆ ಮಾತನಾಡಿಕೊಂಡು ೫ ಲಕ್ಷ ಬೆಲೆ ಬಾಳತಕ್ಕ ಬಸ್ಸುಗಳನ್ನು ಕಂಡಮ್ ಎಂದು ರೆಕಾರ್ಡ್ ಮಾಡಿಸಿಕೊಂಡು ೧-೨ ಲಕ್ಷಕ್ಕೆ ಕೊಟ್ಟಿರತಕ್ಕದನ್ನು ಸಾವಿರಾರು ಉದಾಹರಣೆಗಳೊಂದಿಗೆ ದಾಖಲೆ ಮೂಲಕ ಕೊಡಲು ನಾನು ಸಿದ್ಧನಾಗಿದ್ದೇನೆ. ಈ ರೀತಿಯಾಗಿ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಸೋರಿಕೆಯಾಗುತ್ತಿದೆ. ದಯಮಾಡಿ ಹೊಸದಾಗಿ ಬಸ್ಸುಗಳನ್ನು ಕೊಳ್ಳತಕ್ಕ ಪ್ರಯತ್ನವನ್ನು ಮಾಡಬೇಡಿ. ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕಾದರೆ ದಯಮಾಡಿ ನೀವು ಸಾರಿಗೆ ದರದಲ್ಲಿ ಏನು ಏರಿಕೆ ಮಾಡಿದ್ದೀರಿ ಅದನ್ನು ತಕ್ಷಣ ವಾಪಸ್ ಪಡೆಯಿರಿ. ಒಂದು ಪೈಸೆಯನ್ನು ಹೆಚ್ಚು ಮಾಡಬೇಡಿ. ಇವತ್ತಿನ ದಯನೀಯ ಪರಿಸ್ಥಿತಿಯಲ್ಲಿ, ಜನರು ಸಂಕಷ್ಟದಲ್ಲಿ ಸಿಲುಕಿರುವ ಸಂದರ್ಭದಲ್ಲಿ ಸಾರಿಗೆ ದರವನ್ನು ಜಾಸ್ತಿ ಮಾಡುವುದನ್ನು ಭಾರತೀಯ ಜನತಾ ಪಕ್ಷವು ವಿರೋಧ ಮಾಡುತ್ತದೆ. ಜನರ ಅಭಿಪ್ರಾಯವನ್ನು ತಾವು ಕೇಳಿದ್ದೀರಿ. ರಾಜ್ಯದ ಉದ್ದಗಲಕ್ಕೂ ಚಳುವಳಿ, ಸತ್ಯಾಗ್ರಹ, ಹೋರಾಟವಾಗುತ್ತಿದೆ. ಎಲ್ಲೂ ಸಹ ಜನರು ತಮ್ಮ ಸಂಯಮವನ್ನು ಮೀರಿ ವರ್ತನೆಮಾಡಿ ಬೆಂಕಿ ಹಚ್ಚಿ ಇತರೇ ರಾಜ್ಯಗಳಲ್ಲಿ ನಡೆದಂತೆ ಇಲ್ಲಿ ನಡೆಯುವ ಹಾಗೆ, ಘಟನೆಗಳಿಗೆ ಅವಕಾಶ ಮಾಡಿಕೊಡದ ಹಾಗೆ ಅವರ

ಕೈಕಾಲು ಕಟ್ಟಿ ಬೇಡಿಕೊಂಡಿದ್ದೇವೆ. ಅದಕ್ಕಾಗಿ ನಾನು ಸರ್ಕಾರಕ್ಕೆ, ಈ ರಾಜ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ನೀವು ನಮ್ಮ ಜೊತೆಯಲ್ಲಿ ಚರ್ಚೆ ಮಾಡಬೇಡಿ ಸದನ ಇದೆ, ಇಲ್ಲಿ ಬಹಿರಂಗವಾಗಿ ಚರ್ಚೆ ಮಾಡೋಣ ಕಿವಿಯಲ್ಲಿ ಮಾತನಾಡುವುದೇನೂ ಇಲ್ಲ. ಅಗತ್ಯ ಇದೆ, ಇಂತಹ ಕಾರಣಕ್ಕೋಸ್ಕರ ನಾವು ಸಾರಿಗೆ ದರವನ್ನು ಜಾಸ್ತಿ ಮಾಡಿದ್ದೇವೆಂದು ನಮ್ಮನ್ನು ಕನ್ವಿನ್ಸ್ ಮಾಡಿ. ಇಲ್ಲವೇ, ನಾವು ಮನ ಬಂದಂತೆ ಸರ್ವಾಧಿಕಾರ ಪ್ರವೃತ್ತಿಯನ್ನು ಇಟ್ಟುಕೊಂಡಿರತಕ್ಕಂಥ ಜನ ಯಾವ ರೀತಿ ಬೇಕಾದರೂ ಅಧಿಕಾರ ನಡೆಸುತ್ತೇವೆಂದು ಹೇಳಿದರೆ ಅದು ನಿಮ್ಮ ಹಣೆಬರಹ. ಆ ರೀತಿ ಇದ್ದರೆ ನಾವು ಅದನ್ನು ಬೇಡವೆಂದು ಹೇಳುವುದಿಲ್ಲ. ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ ೨೨ ರಿಂದ ೨೫ ಪರ್ಸೆಂಟ್‌ವರೆಗೆ ಏನು ಸಾರಿಗೆ ದರವನ್ನು ಏರಿಕೆ ಮಾಡಿದ್ದೀರಿ ಅದನ್ನು ಸಂಪೂರ್ಣವಾಗಿ ವಾಪಸ್ ತೆಗೆದು ಕೊಳ್ಳಬೇಕು, ಇಲ್ಲದಿದ್ದರೆ ನಮ್ಮದೇ ಆದಂತಹ ರೀತಿಯಲ್ಲಿ ಪ್ರತಿಭಟನೆ ಮಾಡಬೇಕಾಗುತ್ತದೆ. ಜನ ಬೀದಿಗೆ ಇಳಿದು ಹೋರಾಟ ಮಾಡುವಂತಹ ಅನಿವಾರ್ಯ ಪ್ರಸಂಗ ಕಳೆದ ೧೦-೧೨ ದಿವಸಗಳಿಂದ ಉಂಟಾಗಿದೆ.. ರಾಜ್ಯದಾದ್ಯಂತ ಸಾವಿರಾರು ಜನರು ಬೀದಿಗೆ ಇಳಿದು ಹೋರಾಟಮಾಡಿ ಜೈಲಿಗೆ ಹೋಗಿದ್ದಾರೆ. ಈ ನಿಮ್ಮ ನಿಲುವಿನಿಂದ ಸಾಮಾನ್ಯ ಪ್ರಯಾಣಿಕರಿಗೆ ಶ್ರೀ ಸಾಮಾನ್ಯನಿಗೆ ತೊಂದರೆಯಾಗಿದೆ. ನೀವು ಏನೋ ಸ್ವಲ್ಪ ಒಳ್ಳೆಯ ಆಡಳಿತ ಕೊಡಬಹುದೆಂದು ನಾವು ಅಂದುಕೊಂಡಿದ್ದೆವು. ಆದರೆ ಅದು ವಿಫಲವಾಯಿತು. ಯಾರೋ ಒಬ್ಬರಿಗೆ ಹತ್ತಾರು ವರುಷಗಳ ನಂತರ ಒಂದು ಗಂಡುಮಗುವಾಯಿತು, ಬಂದು ಬಳಗವೆಲ್ಲಾ ನೋಡುವುದಕ್ಕೆ ಬಂದರಂತೆ ಅವರು ನೋಡಿದ ಮೇಲೆ ಅದು ನಿಮ್ಮ ತಾತನ ಹಾಗೆ, ಮುತ್ತಾತನ ಹಾಗೆ ಕಾಣುತ್ತದೆಂದು ಹೇಳಿದರಂತೆ ಈಗ ನಿಮ್ಮನ್ನು ನೋಡಿದರೆ ಹಾಗೇ ಅನಿಸುತ್ತದೆ. ಅದು ನೆನಪಿಗೆ ಬರುತ್ತದೆ. ಈಗ ನಿಮ್ಮನ್ನು ನೋಡಿದರೆ ಹಿಂದೆ ಹೇಗೆ ಇತ್ತೋ ಅದರಲ್ಲಿ ಏನೂ ಬದಲಾವಣೆ ಕಾಣುವುದಿಲ್ಲ. ನಾವು ಇಂದೂ ಅದನ್ನೆ ನೋಡುತ್ತಿದ್ದೇವೆ. ನೀವೇ ಹೇಳಿದ್ದೀರಿ, ಇಲ್ಲಿ ಈಗ ನಡೆಯುವ ಆಡಳಿತ ವೈಖರಿ ಸರಿ ಇಲ್ಲ ಬದಲಾವಣೆ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿರಿ. ನಾವು ಹೋರಾಟ ಮಾಡಿದೆವು. ಕುಳಿತಿರಬೇಕಾದರೆ, ಮುಖ್ಯ ಮಂತ್ರಿಗಳು ಅಲ್ಲಿ ಕುಳಿತಿರಬೇಕಾದರೆ, ಸಾರಿಗೆ ಸಚಿವರು ಅಲ್ಲಿ ಕುಳಿತಿರಬೇಕಾದರೆ ನಾವು ಎಷ್ಟು ಬಡಿದಾಡಿದ್ದೇವೆ? ಈಗ ಅನಿಸುತ್ತದೆ ಬಂಗಾರಪ್ಪನವರೇ ಇದ್ದಿದ್ದರೆ ಆ ಪುಣ್ಯಾತ್ಮ ಏನೋ ಕೂಗಾಡುತ್ತಿದ್ದ, ಕಿರಿಚುತ್ತಿದ್ದ ಅವರಿಂದಲೇ ಏನಾದರೂ ಮಾಡಿಸಿಕೊಳ್ಳಬಹುದಾಗಿತ್ತು ಎಂದು. ನಿಮ್ಮನ್ನು ತಂದು ನಮ್ಮ ಹಣೆಬರಹ ಹೀಗಾಯಿತಲ್ಲ ಎಂದು ಯೋಚನೆ ಮಾಡುವ ಸ್ಥಿತಿಗೆ ನಮಗೆ ಬಂದಿದೆ. ನಾವು ಅಂದುಕೊಂಡಿದ್ದೇ ಬೇರೆ, ಅದು ಆದದ್ದೇ ಬೇರೆ. ಈಗಲಾದರೂ ಹೇಳಿದಂತೆ ಸರಿಯಾಗಿ ನಡೆದುಕೊಳ್ಳುವ ರೀತಿಯಲ್ಲಿ ಪ್ರಯತ್ನ ಮಾಡಿ. ನಿಮ್ಮ ನಿಮ್ಮಲ್ಲಿ ಮೇಜರ್ ಆಪರೇಷನ್ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ಜನರಿಗೆ ಏನಾದರೂ ಒಳ್ಳೆಯ ಕೆಲಸ ಮಾಡುವುದಕ್ಕೆ ವಿಶೇಷವಾದ ಗಮನ ಕೊಡಿ. ಇಲ್ಲವಾದಲ್ಲಿ ಜನರ ಶಾಪಕ್ಕೆ ಗುರಿಯಾಗುತ್ತೀರಿ. ಹೆಚ್ಚು ದಿವಸ ಅಧಿಕಾರದಲ್ಲಿ ಉಳಿಯುವುದಿಲ್ಲ. ಸರಿ ಇದ್ದರೆ ಆ ಇಲಾಖೆಯನ್ನು ನಡೆಸಿ ಇಲ್ಲವಾದಲ್ಲಿ ರಾಜೀನಾಮೆ ಕೊಟ್ಟು ಹೊರಗೆ ಬನ್ನಿ. ಯಡಿಯೂರಪ್ಪನವರೇ ಇದು ಸಾಧ್ಯವಿಲ್ಲ ಎಲ್ಲಿ ನೋಡಿದರೂ ತಿಮಿಂಗಲಗಳು ಕುಳಿತಿವೆ. ನಾನೇನು ಮಾಡಲಿ, ಮೊಯಿಲಿಯವರು ನನ್ನನ್ನು ಅಲ್ಲಿಗೆ ತಳ್ಳಿದ್ದಾರೆಂದು ಹೇಳಿ. ಬೇರೆ ಯಾರಿಗಾದರೂ ಆ ಇಲಾಖೆಯನ್ನು ಕೊಟ್ಟು ಹೊರಗೆ ಬನ್ನಿ. ಸರಿಮಾಡಿ, ಇಲ್ಲದಿದ್ದರೆ ರಾಜೀನಾಮೆ ಕೊಡಿ. ನಿಮ್ಮ ಕೈಯಲ್ಲಿ ಸರಕಾರ ನಡೆಸುವುದಕ್ಕಾಗುವುದಿಲ್ಲ, ಏಕೆಂದರೆ ಇಂದಿನ ಪರಿಸ್ಥಿತಿ ಕೈಮೀರಿ ಹೋಗಿದೆ. ಜನರಿಗೆ ಒಳ್ಳೆಯ ಆಡಳಿತ ಕೊಡುವುದಕ್ಕಾಗುವುದಿಲ್ಲ. ಈಗಲಾದರೂ ಜನರ ಪ್ರೀತಿ, ವಿಶ್ವಾಸ ಗಳಿಸಬೇಕೆಂಬ ಅಪೇಕ್ಷೆ ಇದ್ದರೆ ಏರಿಸಿರುವ ಈ ಸಾರಿಗೆ ದರವನ್ನು ಸಂಪೂರ್ಣವಾಗಿ ವಾಪಸು ಪಡೆಯಬೇಕೆಂದು ಜನರ ಪರವಾಗಿ ಒತ್ತಾಯ ಮಾಡಿ, ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಸಿ. ಬೈರೇಗೌಡ (ವೇಮಗಲ್):- ಮಾನ್ಯ ಅಧ್ಯಕ್ಷರೇ, ಈಗಾಗಲೆ ಬಸ್ ದರವನ್ನು ಏರಿಕೆ ಮಾಡಿರುವುದರಲ್ಲಿ ವಿಪುಲವಾದ ಚರ್ಚೆಯಾಗಿದೆ. ನಾನು ಅದೆಲ್ಲವನ್ನೂ ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ಬಸ್ ಪ್ರಯಾಣ ದರವನ್ನು ಏರಿಕೆ ಮಾಡಿರತಕ್ಕಂಥದ್ದು ಇದು ಪ್ರಥಮ ಅಲ್ಲ. ನನಗೆ ಗೊತ್ತಿರುವ ಮಟ್ಟಿಗೆ, ೧೯೪೮-೪೯-೫೦ರಲ್ಲಿ ಸರಕಾರದ ಮೂಲಕ ಬಸ್‌ಗಳನ್ನು ಓಡಿಸತಕ್ಕಂತಹ ವ್ಯವಸ್ಥೆ ಪ್ರಾರಂಭವಾಯಿತು. ಸುಮಾರು ೩೦-೩೨ ವರುಷಗಳಿಂದ ಇದು ನಡೆಯುತ್ತಾ ಬಂದಿದೆ. ಅಲ್ಲಿಂದ ಇಲ್ಲಿಯವರೆಗೆ ಒಂದು ಸಾರಿ ಅಲ್ಲ ಹತ್ತಾರು ಸಾರಿ ಬಸ್‌ನ ಪ್ರಯಾಣ ದರವನ್ನು ಪುನರ್-ವಿಮರ್ಶೆ ಮಾಡಲಾಗಿದೆ. ಈ ಏರಿಕೆ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಈಗ ನಾವು ಇಲ್ಲಿ ವಿರೋಧ ಪಕ್ಷದಲ್ಲಿ ಕುಳಿತ್ತಿದ್ದೇವೆ. ನಮ್ಮ ಸರಕಾರವಿದ್ದಾಗಲೂ ಸಹ ೨-೩ ಸಾರಿ ಬಸ್‌ನ ಪ್ರಯಾಣ ದರವನ್ನು ಏರಿಕೆ ಮಾಡಲೇಬೇಕಾಗಿರತಕ್ಕಂತಹ ಪರಿಸ್ಥಿತಿ ಒದಗಿ ಬಂದಿತ್ತು. ಆಗ ಈ ಕಡೆ ಕುಳಿತ್ತಿದ್ದಂತಹ ಬಹಳ ಜನ ಸದಸ್ಯರು ಜೋರಾಗಿ ಮಾತನಾಡಿದರು. ಆಗ ಮಾನ್ಯ ವೀರಪ್ಪ ಮೊಯಿಲಿಯವರು ವಿರೋಧ ಪಕ್ಷದ ನಾಯಕರಾಗಿದ್ದರು. ಆಗ ಎಲ್ಲರೂ ಬಹಳ ಜೋರಾಗಿ ಕೂಗಾಡಿರತಕ್ಕಂಥಾದ್ದನ್ನು ನಾವು ಅಲ್ಲಿ ಕುಳಿತು ಕೇಳಿದ್ದೇವೆ. ಇವತ್ತು ಆ ಸರದಿ ನಮಗೆ ಬಂದಿದೆ. ಅಂದರೆ ಪರಿಸ್ಥಿತಿ ಏನೆಂದರೆ, ಯಾರೆ ಸರಕಾರ ನಡೆಸಿದರೂ ಕೂಡ ಈ ದರ ಏರಿಕೆ ಮಾಡುತ್ತ ಇರತಕ್ಕಂಥಾದ್ದು ಅನಿವಾರ್ಯವೆಂದು ನಾನು ಹೇಳುತ್ತೇನೆ. ಹಾಗೆ ಹೇಳಿದ ಮಾತ್ರಕ್ಕೆ, ಯದ್ವಾತದ್ವ ಬಸ್‌ನ ಪ್ರಯಾಣ ದರವನ್ನು ಏರಿಸಬೇಕೆಂಬ ಅರ್ಥ ಅಲ್ಲ. ವಾಸ್ತವಾಂಶವನ್ನು ಗಮನಿಸಿ ಏರಿಕೆಯನ್ನು ಮಾಡಬೇಕಾಗುತ್ತದೆ. ಪ್ರತಿಯೊಂದು ಸರಕಾರಕ್ಕೂ ಕೂಡ ವಿರೋಧ ಪಕ್ಷದಲ್ಲಿ ಕುಳಿತಿರತಕ್ಕಂತಹ ಸದಸ್ಯರುಗಳು ಇಲ್ಲಿ ಹಣ ಸೋರುತ್ತಿದೆ, ಅದನ್ನು ತಡೆಗಟ್ಟಿ ಎಂದು ಹೇಳುತ್ತಾರೆ. ನನ್ನ ಸ್ನೇಹಿತರಾದಂತಹ ಮಾನ್ಯ ಸಿಂಧ್ಯರವರು ಸಾರಿಗೆ ಮಂತ್ರಿಗಳಾಗಿದ್ದಾಗ ಈ ಸಂಸ್ಥೆಯನ್ನು ನಾನು ಲಾಭಕ್ಕೆ ತರದಿದ್ದರೆ ರಾಜೀನಾಮೆ ಕೊಡುತ್ತೇನೆಂದು ಒಂದು ಸವಾಲನ್ನು ಒಂದು ಸಲ ಅವರು ಹಾಕಿದ್ದರು. ಮಾನ್ಯ ಸಿಂಧ್ಯ ಅವರ ಕಾಲದಲ್ಲಿ ಸ್ವಲ್ಪ ಮಟ್ಟಿಗೆ ಸುಧಾರಣೆ ಕಂಡಿತ್ತು. ಆದರೆ ಅವರು ಮಾಡಿದ್ದುದು ಏನೆಂದರೆ, ಪುನಃ ದರವನ್ನು ಏರಿಸಿದ್ದುದು. ವಾಸ್ತವಾಂಶ, ಪರಿಸ್ಥಿತಿ ಹೀಗೆ ಇದೆ. ಇದಕ್ಕೆ ಮೂಲ ಇರತಕ್ಕಂಥಾದ್ದು ಏನೆಂದರೆ, ಈ ವ್ಯವಸ್ಥೆ ಇದೆಯಲ್ಲ, ಸೋರಿಕೆ ವ್ಯವಸ್ಥೆ ಇದನ್ನು ಸರಿಪಡಿಸಬೇಕು. ಇದು ಎಲ್ಲಾ ಸರಕಾರಗಳಿದ್ದಾಗಲೂ ನಡೆಯುತ್ತದೆ. ಸೋರಿಕೆ ಇಲ್ಲವೆಂದು ಯಾರೂ ಕೂಡ ಧೈರ್ಯವಾಗಿ ಹೇಳತಕ್ಕಂತಹ ಪರಿಸ್ಥಿತಿ ಇವತ್ತಿನ ದಿವಸ ಇಲ್ಲ. ಮುಖ್ಯವಾಗಿ ಅಲ್ಲಿ ಡ್ರೈವರ್, ಕಂಡಕ್ಟರ್ಸ್ ಆಯ್ಕೆ ನಡೆಯುತ್ತದೆ. ಅಲ್ಲಿ ಯಾವ ಸರಕಾರ ಇದ್ದಾಗ ಭ್ರಷ್ಟಾಚಾರ ನಡೆದಿಲ್ಲ ಎಲ್ಲಾ ಸರಕಾರಗಳು ಇದ್ದಾಗಲೂ ಭ್ರಷ್ಟಾಚಾರ ನಡೆದಿದೆ. ಇದಕ್ಕೆ ಕಾರಣವೇನೆಂದರೆ, ನಾವುಗಳನೇಕರು ಕೂಡ ಕಾರಣರಿದ್ದೇವೆ. ನಾವು ಕೆಲವರು ಶಿಫಾರಸ್ ಮಾಡಿರತಕ್ಕಂಥವರು ಕೂಡ ಇದ್ದೇವೆ. ಕೆಲವರದು ಅಲ್ಲಿ ಶಿಫಾರಸ್ಸಿನಿಂದ ಆಯ್ಕೆ ಆಗುತ್ತದೆ: ಕೆಲವರದು ಅಲ್ಲಿ ಹಣದ ಶಿಫಾರಸ್ಸಿನಿಂದ ಆಯ್ಕೆಯಾಗುತ್ತದೆ ಎಂದರೆ ಅಲ್ಲಿನ ಅಧಿಕಾರಿಗಳೇನು ಚಳ್ಳೆಹಣ್ಣು ತಿನ್ನುತ್ತಾ ಇರುತ್ತಾರೆಯೇ? ಅವರು ಇವರದು ಮಾತು ನಡೆಯುವಾಗ ನಾವು ನಮ್ಮ ಕೈ ಬೆಚ್ಚಗೆ ಮಾಡಿಕೊಳ್ಳೋಣ. ನಮಗೆ ಏನು ಬೇಕಾಗುತ್ತದೆ ಅದನ್ನು ನಾವು ಮಾಡಿಕೊಳ್ಳೋಣ ಎನ್ನತಕ್ಕಂತಹ ಪರಿಸ್ಥಿತಿ. ಒಂದು ರೀತಿಯಾದಂತಹ ಪೈಪೋಟಿ ನಡೆಯುತ್ತಾ ಇದೆ. ಈ ಪೈಪೋಟಿಯಿಂದ ಒಬ್ಬೊಬ್ಬ ಕಂಡಕ್ಟರ್ ಆಗಿರುವಂತಹವನು, ಡ್ರೈವರ್ ಆಗಿರುವಂತಹವನು ಮೂವತ್ತು, ನಲ್ವತ್ತು, ಐವತ್ತು ಸಾವಿರದವರೆಗೂ ಅಲ್ಲಿ ಲಂಚ ಕೊಟ್ಟು ಅವನು ಅಲ್ಲಿ ಆಯ್ಕೆ ಆಗುತ್ತಾನೆ ಎಂದರೆ, ಅವನು ಅಲ್ಲಿ ಸರಿಯಾಗಿರಬೇಕು, ಅವನೇನೂ ಕೈಯಲ್ಲಿ ಹಣ ಮುಟ್ಟಬಾರದು ಎಂದು ಹೇಳುವುದು ಇದು ನನ್ನ ಪ್ರಕಾರ ಮೂರ್ಖತನವಾಗುತ್ತದೆ. ಆದುದರಿಂದ ಈಗ ಈ ವ್ಯವಸ್ಥೆಯೇ ಈ ರೀತಿಯಾಗಿದೆ. ಈ ವ್ಯವಸ್ಥೆಯನ್ನು ಸರಿಪಡಿಸಬೇಕಾಗಿರತಕ್ಕಂತಹ ವಿಷಯದಲ್ಲಿ ಎಲ್ಲಾ ಸರ್ಕಾರಗಳು ಕೂಡ ವಿಫಲವಾಗಿವೆ ಎನ್ನತಕ್ಕಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದು

ಡಿಗ್ರಿ ಹೆಚ್ಚುಕಡಿಮೆಯಾಗಿರಬಹುದು ಅಷ್ಟೇ. ಆದರೆ ವಿಫಲವಾಗಿದೆ ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ. ಆದುದರಿಂದ ಇವತ್ತಿನದಿವಸ ದೇಶದಲ್ಲಿ ಒಂದು ಹೊಸದಾದಂಥಹ, ಆರ್ಥಿಕವಾದಂಥಹ ನೀತಿ, ವಾತಾವರಣ ಸೃಷ್ಟಿಯಾಗುತ್ತದೆ. ಅದು ಏನು? ಸರಳೀಕರಣ, ಲಿಬರೈಸೇಷನ್ ಎನ್ನತಕ್ಕಂಥಾದ್ದು ಪ್ರಾರಂಭವಾಗುತ್ತದೆ. ಅನೇಕ ಖಾಸಗಿ ಮತ್ತು ಸರ್ಕಾರಿ ಸೌಮ್ಯದ ಕಾರ್ಖಾನೆಗಳು ಇವೆ. ಸರ್ಕಾರಿ ಸೌಮ್ಯದ ಸಂಸ್ಥೆಗಳು ಏನಿವೆ ಅವು ಇವತ್ತಿನ ದಿವಸ ಖಾಸಗೀಕರಣವಾಗುತ್ತಾ ಇವೆ. ಆದರೆ ದುರಾದೃಷ್ಟ, ಈಗ ಏನಾಗುತ್ತಿದೆಯೆಂದರೆ, ಯಾವುದನ್ನೂ ಖಾಸಗೀಕರಣ ಮಾಡಬೇಕೋ ಅದನ್ನು ಬಿಟ್ಟು ಬೇರೆಯದನ್ನು ಖಾಸಗೀಕರಣ ಮಾಡತಕ್ಕಾಂಥದ್ದು ಇದೆ. ಎಲ್ಲಾ ಬಿಟ್ಟು ಬಂಗಿ ನೆಟ್ಟ ಎನ್ನತಕ್ಕಂತಹ ರೀತಿಯಲ್ಲಿ ಆಗುತ್ತಿದೆ. ಸರ್ಕಾರ ಎಂದರೆ ಅದು ಕೇಂದ್ರ ಸರ್ಕಾರ ಇರಬಹುದು ಅಥವಾ ರಾಜ್ಯಸರ್ಕಾರ ಇರಬಹುದು. ಇವರು ಯಾವುದನ್ನು ಸರಳೀಕರಣ ಮಾಡಬೇಕೋ, ಯಾವುದನ್ನು ಖಾಸಗೀಕರಣ ಮಾಡಬೇಕೋ ಅದನ್ನು ಮಾಡುತ್ತಾ ಇಲ್ಲ. ಇವತ್ತಿನದಿವಸ ಬೇರೆಯದನ್ನು ಮಾಡತಕ್ಕಂತಹ ರೀತಿಯಲ್ಲಿ, ಅದನ್ನು ಕೂಡ ದುರುಪಯೋಗ ಮಾಡತಕ್ಕ ರೀತಿಯಲ್ಲಿ ಮಾಡುತ್ತಿದ್ದಾರೆ. ಆದರೆ ಇವತ್ತಿನ ದಿವಸ ನಾನು ಸಲಹೆ ಮಾಡತಕ್ಕಂಥಾದ್ದು ಏನೆಂದರೆ, ಈ ಕೆಎಸ್‌ಆರ್‌ಟಿಸಿಯನ್ನು ಯಾರು ನಡೆಸಿದರೂ, ಯಾವ ಸರ್ಕಾರ ನಡೆಸಿದರೂ ಕೂಡ ಅದರಲ್ಲಿ ಸೋರಿಕೆಯನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಸೋರಿಕೆ ಆಗತಕ್ಕಂಥಾದ್ದು ನಿಜ. ಆದುದರಿಂದ ಇದನ್ನು ತತ್‌ಕ್ಷಣವೇ ಕಿತ್ತು ಬಿಸಾಕತಕ್ಕಂಥಾದ್ದು ಒಳ್ಳೆಯದು. ಏಕೆಂದರೆ ಇದರಲ್ಲಿ ನಾವೆಲ್ಲರೂ ಕೂಡ ತಪ್ಪಿತಸ್ಥರು ಇದ್ದೇವೆ. ಇಲ್ಲಿ ಇರತಕ್ಕಂಥವರು ಎಲ್ಲರೂ ಕೂಡ ತಪ್ಪಿತಸ್ಥರಿದ್ದಾರೆ, ಒಂದಲ್ಲ ಒಂದು ರೀತಿಯಲ್ಲಿ ನಾವು ತಪ್ಪನ್ನು ಮಾಡಿದ್ದೇವೆ. ಕೆಲವರು ಹಣ ತೆಗೆದುಕೊಂಡು ತಪ್ಪಿತಸ್ಥರು ಆಗಿರಬಹುದು, ಕೆಲವರು ನಮ್ಮಂತಹವರು ಶಿಫಾರಸ್ಸು ಮಾಡಿ ನಾವು ಕೂಡ ತಪ್ಪಿತಸ್ಥರಾಗಿದ್ದೇವೆ. ಆದುದರಿಂದ ಇಂತಹ ಪರಿಸ್ಥಿತಿ ಬಂದು ಒದಗಬೇಕಾಗಿದ್ದರೆ ನಾವೆಲ್ಲರೂ ಕೂಡ ತಪ್ಪಿತಸ್ಥರು ಆಗಿದ್ದೇವೆ. ಇದನ್ನು ಸರಿಯಾದಂತಹ ರೀತಿಯಲ್ಲಿ, ವ್ಯವಸ್ಥಿತವಾದಂತಹ ರೀತಿಯಲ್ಲಿ ನಡೆಸತಕ್ಕಂಥಾದ್ದು ಸಾಧ್ಯವಿಲ್ಲ ಎನ್ನುವುದು ಕಳೆದ ೩೦-೩೫ ವರ್ಷಗಳಿಂದ ಸಾಬೀತಾಗಿದೆ. ಆದ್ದರಿಂದ ತತ್‌ಕ್ಷಣ ಇದನ್ನು ಖಾಸಗೀಕರಣ ಮಾಡತಕ್ಕಂಥಾದ್ದನ್ನು ನೋಡಿರಿ. ಮಾನ್ಯ ವೀರೇಂದ್ರ ಪಾಟೀಲರು ಇಲ್ಲಿ ಮುಖ್ಯಮಂತ್ರಿಯವರಾಗಿದ್ದಾಗ ಒಂದು ಸಲಹೆ ಕೊಟ್ಟರು. ದೆಹಲಿಯಲ್ಲಿ ಯಾವರೀತಿ ಸಾರಿಗೆ ವ್ಯವಸ್ಥೆಯನ್ನು ನಡೆಸುತ್ತಿದ್ದಾರೆ. ಅದೇ ರೀತಿ ಇಲ್ಲಿ ಜಾರಿಗೆ ತರುತ್ತೇವೆ ಎನ್ನುವ ಮಾತನ್ನು ಹೇಳಿದರು. ಮಾನ್ಯ ರಂಗನಾಥ್‌ರವರು ಕೂಡ ಆ ಸಂದರ್ಭದಲ್ಲಿ ಸಚಿವರಾಗಿದ್ದರು; ಅದು ಎಲ್ಲಿ ಹೋಯಿತೋ ಗೊತ್ತಿಲ್ಲ, ಏಕೆ ಆ ಕೆಲಸ ಆಗಲಿಲ್ಲವೋ ಗೊತ್ತಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್:- ಪೂರ್ತಿ ತೆಗೆದು ಬಿಡಿ ಎಂದು ಹೇಳುತ್ತೀರ?

ಶ್ರೀ ಸಿ. ಬೈರೇಗೌಡ:- ಹೌದು, ಅದು ಸ್ಪಷ್ಟವಾದದ್ದು. ಅದು ಒಂದು ಸಾರಿ ಅಲ್ಲ, ಏಕೆಂದರೆ ಇಲ್ಲಿ ಈ ವ್ಯವಸ್ಥೆ ಏನು ಇದೆ ಇದನ್ನು ಸರಿಪಡಿಸುವುದಕ್ಕೆ ಸಾಧ್ಯವೇ ಇಲ್ಲ. ನಾಳೆ ಮಾನ್ಯ ರಂಗನಾಥ್‌ರವರನ್ನು..........

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ನನಗೆ ಆಶ್ಚರ್ಯವಾಗುತ್ತದೆ. ಏಕೆಂದರೆ, ಮಾನ್ಯ ಬೈರೇಗೌಡರು ನುರಿತಂಥ ಒಬ್ಬ ಅನುಭವಿ ರಾಜಕಾರಣಿಗಳು. ಜೊತೆಗೆ ಅವರು ಮಾರ್ಕ್ಸಿಸ್ಟ್ ಪಾರ್ಟಿ ಹಿನ್ನೆಲೆಯಲ್ಲಿ ಬಂದವರು. ಅವರು ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ನನಗೆ ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡಬೇಕು ಎಂದು ಹೇಳುತ್ತಿದ್ದವರು. ಕೋಲಾರ ಜಿಲ್ಲೆಯನ್ನು ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡಬೇಕು ಎಂದು ಅವರು ಮಂತ್ರಿಮಂಡಲದಲ್ಲಿ ಇರುವಾಗ ಅಷ್ಟೇ ಅಲ್ಲ, ನಮ್ಮ ಸರ್ಕಾರ ಇರುವವರೆಗೂ ನಮ್ಮ ಜೊತೆಯಲ್ಲಿ ಇರುವವರೆಗೂ ವಾದ ಮಾಡುತ್ತಾ ಇದ್ದರು. ಈಗ ಅದನ್ನು ಸಂಪೂರ್ಣವಾಗಿ

ಖಾಸಗಿಯವರಿಗೆ ಕೊಟ್ಟಿಬಿಡಿ ಎಂದು ಹೇಳುತ್ತಿರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಏಕೆಂದರೆ, ನಾನು ಏನು ಹೇಳುತ್ತೇನೆಂದರೆ, ಮಾನ್ಯ ಬೈರೇಗೌಡರಲ್ಲಿ ಈಗ ವಿನಂತಿ ಮಾಡತಕ್ಕಂಥಾದ್ದು ಏನೆಂದರೆ, ನೆಗಡಿ ಬರುತ್ತದೆ ಎಂದು ಮೂಗು ಕೊಯ್ದುಕೊಳ್ಳುವುದು ಸರಿಯಲ್ಲ.

ಶ್ರೀ ಸಿ. ಬೈರೇಗೌಡ:- ನೀವು ನಿನ್ನೆ ಪತ್ರಿಕೆ ಓದಿ ನನ್ನ ಕ್ಷೇತ್ರದಲ್ಲಿ ಇಬ್ಬರು ಸತ್ತಿದ್ದಾರೆ. ಇದಕ್ಕೆ ಕಾರಣವೇನು? ಕೋಲಾರದಿಂದ ಬೆಂಗಳೂರಿಗೆ ಬರತಕ್ಕಂತಹ ರಸ್ತೆಯಲ್ಲಿ ಆಕ್ಸಿಡೆಂಟ್ ಆಗಿ ಇಬ್ಬರು ಸತ್ತಿದ್ದಾರೆ. ಬಸ್ಸು ಸಿಗಲಿಲ್ಲ, ಯಾವುದೋ ಲಾರಿ ಬಂತು ಅದರಲ್ಲಿ ಅವರು ಹತ್ತಿದ್ದಾರೆ. ಎಷ್ಟು ಕಡೆ ಆಕ್ಸಿಡೆಂಟ್ ಆಗುತ್ತಾ ಇದೆ. ಪ್ರತಿ ದಿವಸ ಹತ್ತು. ಹದಿನೈದು ಜನ ಸಾಯುತ್ತಾ ಇದ್ದಾರೆ. ನಿನ್ನೆ ದಿವಸದಿಂದ ಮೂರು ಜನ ಸತ್ತಿದ್ದಾರೆ, ಇವತ್ತಿನ ದಿವಸ ೧೦-೧೫ ಜನಕ್ಕೆ ಗಾಯವಾಗಿದೆ. ಅವರೆಲ್ಲ ಕೂಲಿ ಮಾಡಿ ಜೀವನ ಮಾಡತಕ್ಕಂಥವರು. ಈ ರೀತಿ ಏಕಾಗುತ್ತದೆಯೆಂದರೆ, ಬಸ್ ವ್ಯವಸ್ಥೆ ಸರಿ ಇಲ್ಲ. ಎಷ್ಟು ಸಂಖ್ಯೆಯಲ್ಲಿ ಬಸ್ಸುಗಳನ್ನು ಓಡಿಸಬೇಕಾಗಿತ್ತೋ ಅಷ್ಟು ಅಲ್ಲಿ ಓಡಿಸುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಈ ಕಾರಣದಿಂದಲೇ ಯಾವುದೋ ಟೆಂಪೋ ಸಿಕ್ಕಿದರೆ ಟೆಂಪೋನಲ್ಲಿ ಹೋಗುತ್ತಾರೆ. ಲಾರಿ ಸಿಕ್ಕಿದರೆ ಲಾರಿಯಲ್ಲಿ ಹೋಗುತ್ತಾರೆ. ನಿನ್ನೆ ಮೂರು ಜನ ಸತ್ತಿದ್ದಾರೆ. ಅವರು ಬಸ್ ಸಿಗಲಿಲ್ಲವೆಂದು ಲಾರಿಯಲ್ಲಿ ಹತ್ತಿದರು ಮನೆ ಬಿಟ್ಟು ಐದು ಆರು ಮೈಲಿ ಬಂದ ತಕ್ಷಣ ಆಕ್ಸಿಡೆಂಟ್ ಆಯಿತು, ಅವರು ಸತ್ತಿದ್ದಾರೆ.

ಇದು ಪ್ರತಿ ದಿವಸ ನಡೆಯುತ್ತದೆ. ಇದನ್ನು ಒಂದು ಸರಿಯಾದಂಥ ರೀತಿಯಲ್ಲಿ, ವ್ಯವಸ್ಥಿತವಾದಂಥ ರೀತಿಯಲ್ಲಿ ನಡೆಸುವುದಕ್ಕಾಗುತ್ತಿಲ್ಲ. ಇದರಲ್ಲಿ ನೀವು ವಿಫಲವಾಗಿದ್ದೀರಿ ಎಂಬ ಕಾರಣಕೋಸ್ಕರ ನಾನು ಹೇಳುತ್ತಿದ್ದೇನೆ. ನಾವು ಸಮಾಜವಾದರಿಂದ, ಮಾರ್ಕ್ಸ್‌ವಾಗಿ ಕಮ್ಯುನಿಸ್ಟ್ ಪಕ್ಷದ ಬೆಂಬಲದಿಂದ ನಾನು ಈ ಸದನದಲ್ಲಿ ಪ್ರತಿನಿಧಿಯಾಗಿರತಕ್ಕದ್ದು ನಿಜ. ಆದರೂ ಸಹ ಇವತ್ತಿ ದಿವಸ ವಾಸ್ತಾವಾಂಶವನ್ನು ಗಮನಿಸಿದರೆ ನೂರಾರು ಕೋಟಿ ರೂಪಾಯಿಗಳು ನಷ್ಟವಾಗುತ್ತಿದೆ. ಇವತ್ತಿನ ದಿವಸ ನಾವು ಬಡ್ಜಟರಿ ಸಪೋರ್ಟ್‌ನ್ನು ಅದಕ್ಕೆ ಕೊಡುತ್ತೇವೆ ಎಂದರೆ ಯಾವುದಕ್ಕೋಸ್ಕರ, ಯಾವ ಕಾರಣಕ್ಕೋಸ್ಕರ ಇವತ್ತು ನೀರಾವರಿಗೆ ಆದ್ಯತೆ ಕೊಡಬೇಕಾಗಿದೆ. ಇವತ್ತು ಪಂಪ್‌ಸೆಟ್‌ಗಳಿಗೆ ವಿದ್ಯುತ್ ಇಲ್ಲ, ಅದಕ್ಕೆ ಆದ್ಯತೆ ಕೊಡಬೇಕಾಗಿದೆ ಅದಕ್ಕೆ ಕೊಡಬೇಕಾದಂಥ ಆದ್ಯತೆಯನ್ನು, ಅದಕ್ಕೆ ಕೊಡಬೇಕಾದಂಥ ಹಣವನ್ನು ಇಂಥಾದ್ದಕ್ಕೆ ಕೊಟ್ಟು ಇದರಿಂದ ಜನಕ್ಕೆ ಪ್ರಯೋಜನ ಕೂಡ ಇಲ್ಲ, ಸರ್ಕಾರಕ್ಕೆ ಲಾಭ ಕೂಡ ಇಲ್ಲ. ಇಂಥ ಕೆಲಸ ಏಕೆ ಮಾಡಬೇಕಾಗಿದೆ? ಆದ್ದರಿಂದ ಇದನ್ನು ಮುಂದುವರೆಸಿಕೊಂಡು ಹೋಗುವುದರಲ್ಲಿ ಅರ್ಥ ಇಲ್ಲ. ಇದು ಎಲ್ಲದರಲ್ಲೂ ವಿಫಲವಾಗಿದೆ. ನೀವೂ ಕೂಡ ವಿಫಲರಾಗಿದ್ದೀರಿ. ಒಂದು ವರ್ಷದಲ್ಲಿ ೨-೩ ಸಾರಿ ಈ ದರವನ್ನು ವಿಮರ್ಶೆ ಮಾಡಿರತಕ್ಕಂಥದ್ದು ಇದೆ. ಆದುದರಿಂದ ಇದನ್ನು ಕಿತ್ತು ಬಿಸಾಕತಕ್ಕದ್ದು ಅತಿ ಅವಶ್ಯಕವಾಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ಯಾರಿಗೆ, ಯಾವರೀತಿ ಕೊಡಬೇಕು ಎನ್ನತಕ್ಕ ವ್ಯವಸ್ಥೆಯನ್ನು ಮಾಡಿ ಎಂದು ಕೇಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್:- ಸಣ್ಣ ಕಿರಾಣಿ ಅಂಗಡಿಯನ್ನು ಮುಚ್ಚುವ ಹಾಗೆ ಇದನ್ನು ಮುಚ್ಚುವುದಕ್ಕಾಗುತ್ತದೆಯೇ?

ಶ್ರೀ ಸಿ. ಬೈರೇಗೌಡ:- ಸ್ವಾಮಿ. ಇದನ್ನು ತಾವು ಏಕೆ ಹೇಳಲಿಲ್ಲ ನೀವು ಸುಜುಕಿ, ಮಾರುತಿ, ಉದ್ಯೋಗ್ ಅನ್ನು ಖಾಸಗೀಕರಣ ಮಾಡಿದ್ದೀರಲ್ಲ, ಆ ಮಾತನ್ನು ಏಕೆ ಹೇಳಲಿಲ್ಲ. ಲಾಭ ಮಾಡತಕ್ಕಂಥದನ್ನು ಖಾಸಗೀಕರಣ ಮಾಡಿದ್ದೀರಿ. ಅದು ಬೇರೆ ಯಾರು ಮಾಡಲಿಲ್ಲ.

ನಿಮ್ಮ ಪಕ್ಷದವರೆ ಮಾಡಿರತಕ್ಕಂಥದ್ದು. ಇವತ್ತು ಸೈಲ್ ಅನ್ನು ಖಾಸಗೀಕರಣ ಮಾಡುವಂಥ ಪ್ರಯತ್ನದಲ್ಲಿದ್ದೀರಿ. ಮುಖ್ಯವಾದಂಥ ಇಂಡಸ್ಟ್ರೀಸ್‌ನ್ನು ಖಾಸಗೀಕರಣ ಮಾಡತಕ್ಕ ಪ್ರಯತ್ನ ಪಡುತ್ತಿದ್ದೀರಿ. ಲಾಭದಾಯಕವಾಗಿ ನಡೆಯುತ್ತಿರತಕ್ಕದ್ದನ್ನು ಖಾಸಗೀಕರಣಮಾಡತಕ್ಕ ಪ್ರಯತ್ನಪಡುತ್ತಿದ್ದೀರಿ . ನೂರಾರು ಕೋಟಿ ರೂಪಾಯಿಗಳ ನಷ್ಟ ಅನುಭವಿಸುತ್ತಿದ್ದರೂ ಏಕೆ ಇದನ್ನು ಇಟ್ಟುಕೊಂಡಿದ್ದೀರಿ. ಯಾವ ಲಾಭಕ್ಕೋಸ್ಕರ, ಯಾವ ಪುರುಷಾರ್ಥಕ್ಕೋಸ್ಕರ, ಇವತ್ತಿನ ದಿವಸ ಇಟ್ಟುಕೊಂಡಿದ್ದೀರಿ ಎಂಬುದು ಅರ್ಥವಾಗುತ್ತಿಲ್ಲ. ದಯಮಾಡಿ ಇದರ ಬಗ್ಗೆ ನೀವು ಅತಿ ಜರೂರಾಗಿ ತೀರ್ಮಾನ ತೆಗೆದು ಕೊಳ್ಳಬೇಕೆಂಬ ಮಾತನ್ನು ಹೇಳಿ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ವಾಟಾಳ್ ನಾಗರಾಜ್‌ರವರೇ ಎರಡು ನಿಮಿಷ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ):- ಎರಡೇ ನಿಮಿಷ ಆದರೆ ಕುಳಿತೇಬಿಡುತ್ತೇನೆ. ಬರೀ ಭಾಷಣದಲ್ಲಿಯೇ ಮುಗಿಯುವುದಿಲ್ಲ ಇಲ್ಲಿ ನಮ್ಮ ಕಾರ್ಯಕ್ರಮಗಳು ಇವೆ. ಸರ್ಕಾರದವರು ಏರಿಸಿರುವ ಬಸ್ ದರವನ್ನು ಹಿಂತೆಗೆದುಕೊಳ್ಳದಿದ್ದರೆ ನಾವು ಅಷ್ಟು ಸುಲಭವಾಗಿ ಹೊರಗಡೆ ಹೋಗುತ್ತೇವೆ ಎಂದು ತಿಳಿದುಕೊಳ್ಳಬೇಡಿ. ನಮಗೆ ಅಧ್ಯಕ್ಷರ ಬಗ್ಗೆ ಅಪಾರ ಗೌರವಇದೆ. ಮಾನ್ಯ ಅಧ್ಯಕ್ಷರೇ, ಈ ಬಸ್ಸಿನ ಪ್ರಯಾಣಿಕರ ದರವನ್ನು ಏರಿಸಿರುವ ನೀತಿ ಏನಿದೆ ಇದು ಪ್ರತಿ ವರ್ಷ ಒಂದು ರೀತಿಯಲ್ಲಿ ಏರಿಸಬೇಕು ದರವನ್ನು ಏರಿಸಬೇಕಾದ್ದು ನಮ್ಮ ಸಿದ್ಧಾಂತ ನಮ್ಮ ನೀತಿ, ನಮ್ಮ ತತ್ವ ಎನ್ನುವ ರೀತಿಯಾಗಿದೆ. ಶ್ರೀ ವೀರೇಂದ್ರಪಾಟೀಲರು ಅಧಿಕಾರಕ್ಕೆ ಬಂದಾಗ ಈ ದರವನ್ನು ಏರಿಸುವುದು ಪ್ರಾರಂಭವಾಯಿತು. ಅಂದರೆ ಅದರ ಹಿಂದೆ ಇರಲಿಲ್ಲ ಎಂದಲ್ಲ. ಹಿಂದೆ ಇದ್ದ ಮುಖ್ಯಮಂತ್ರಿಗಳ ಕಾಲದಲ್ಲೂ ಸಹ ದರವನ್ನು ಏರಿಸಿಕೊಂಡು ಬಂದಿದ್ದಾರೆ. ಏರಿಸಿರತಕ್ಕ ಬಸ್ ಪ್ರಯಾಣಕರದರವನ್ನು ಇಳಿಸಿದ್ದೇವೆ ಎನ್ನತಕ್ಕದು ಒಂದು ಆದರ್ಶವಾದಂಥ ಮಂತ್ರಿಮಂಡಲವನ್ನೂ ಸಹ ನಾನು ಇದುವರೆಗೆ ನೋಡಲಿಲ್ಲ. ರಾಷ್ಟ್ರೀಕರಣ ನೀತಿಯನ್ನು ನಾನು ಒಪ್ಪುತ್ತೇನೆ. ಈ ವ್ಯವಸ್ಥೆ ನಿಜವಾಗಿಯೂ ಮೆಚ್ಚತಕ್ಕಂಥದ್ದು. ಈ ರಾಷ್ಟ್ರೀಕರಣದ ವ್ಯವಸ್ಥೆ ಏನು ಇದೆ ಆ ವ್ಯವಸ್ಥೆಯ ದಾರಿಯನ್ನು ನಾವು ತಪ್ಪಿಸುತ್ತಿದ್ದೇವೆ. ನಾನು ರಾಷ್ಟ್ರೀಕರಣವನ್ನು ವಿರೋಧ ಮಾಡುವುದಿಲ್ಲ. ಸಮಾಜವಾದಿ ಸಿದ್ಧಾಂತ, ಸಮತಾವಾದ ಸಿದ್ಧಾಂತ ಈ ಒಂದು ಹಿನ್ನಲೆಯನ್ನು ಇಟ್ಟು ಕೊಂಡಿರತಕ್ಕವರು, ಎಡಪಂಥೀಯ ಚಿಂತನೆ ಇಟ್ಟುಕೊಂಡಿರುವವರು ಸಾಮಾನ್ಯವಾಗಿ ನಾವು ರಾಷ್ಟ್ರೀಕರಣವನ್ನು ಒಪ್ಪಲೇಬೇಕಾಗಿದೆ. ರಾಷ್ಟ್ರೀಕರಣವನ್ನು ಒಪ್ಪಬೇಕು ಎಂದರೆ ಇದು ಒತ್ತಾಯ, ಒತ್ತಡದಿಂದ ಒಪ್ಪತಕ್ಕಂಥದ್ದಲ್ಲ. ಇದರಲ್ಲಿ ಪ್ರಮುಖವಾದಂಥ ನೀತಿ ಅಡಕವಾಗಿದೆ. ಆದರೆ ಈ ರಾಷ್ಟ್ರೀಕರಣದ ವ್ಯವಸ್ಥೆ ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಡೆದುಕೊಂಡಿರುವ ರೀತಿ ಇವೆರಡನ್ನು ಹೋಲಿಕೆ ಮಾಡಿದಾಗ ರಾಷ್ಟ್ರೀಕರಣಕ್ಕೆ ಅಪಚಾರಮಾಡುವಂಥ ವ್ಯವಸ್ಥೆ ಇವತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಇದೆ. ನಾನು ಈ ಬಗ್ಗೆ ಹೇಳಿದೆ ಸುಮಾರು ೧೦ ವರ್ಷಗಳ ಇದರ ಸಮಗ್ರ ಆಡಳಿತವನ್ನು ನೀವು ಒಬ್ಬ ಶ್ರೇಷ್ಠ ಹೈಕೋರ್ಟ್ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆ ಮಾಡಿಸಿ. ತನಿಖೆ ಮಾಡಿಸುವುದರಿಂದ ಅಲ್ಲಿ ನಡೆದಿರತಕ್ಕಂಥ ಅಕ್ರಮಗಳು, ಭ್ರಷ್ಟಚಾರಗಳು, ಅನ್ಯಾಯಗಳು ಹೊರಗಡೆ ಬರುತ್ತದೆ. ಇವೆಲ್ಲವನ್ನು ನೋಡಿದಾಗ ಬೆಲೆ ಏರಿಕೆ ಪ್ರಶ್ನೆ ಬರುವುದಿಲ್ಲ. ಒಂದು ವೇಳೆ ಬೆಲೆ ಏರಿಸಬೇಕಾದರೆ ಕೆಲವು ವೈಜ್ಞಾನಿಕವಾದಂಥ ವಿಧಾನಗಳು ಇವೆ. ಏಕ್‌ದಂ ಒಂದೇ ಸಲ ಶೇಕಡ ೨೫ ರಷ್ಟು ದರವನ್ನು ಯಾವ ಆಧಾರದ ಮೇಲೆ ಏರಿಸಿದ್ದೀರಿ ಎಂದು ನಾನು ಮಂತ್ರಿಗಳನ್ನು ನೇರವಾಗಿ ಕೇಳುತ್ತಿದ್ದೇನೆ. ಶೇಕಡ ೨೫ ರಷ್ಟು ಏರಿಸುವುದಕ್ಕೆ ಕಾರಣ ಏನು? ನಿಮ್ಮ ಸಿದ್ಧಾಂತ ಏನು? ನಿಮ್ಮ ತತ್ವ ಏನು? ಏಕದಂ ೧೦೦ಕ್ಕೆ ೨೫ರಷ್ಟು ಬಸ್ ಪ್ರಯಾಣ ದರವನ್ನು ಏರಿಸಿದರೆ ಯಾರು ಕೊಡತಕ್ಕಂಥವರು. ಇವತ್ತು ಬೆಲೆ ಏರಿಕೆ ಗಗನಕ್ಕೆ ಏರಿದೆ ಪ್ರತಿನಿತ್ಯ ರಾತ್ರಿ ಮಲಗಿ

ಬೆಳಿಗ್ಗೆ ಕಣ್ಣು ಬಿಟ್ಟಾಗ ಬೆಲೆ ಏರಿಕೆಯ ಹೊರೆ ಹೊತ್ತು ಜನಸಾಮಾನ್ಯನ ಬೆನ್ನುಮೂಳೆ ಮುರಿದು ನೆಲ ಕಚ್ಚುತ್ತಿರುವಾಗ ಮತ್ತೆ ಬಸ್ ಪ್ರಯಾಣ ದರ ಏರಿಸಿರುವುದು ಸರಿಯಲ್ಲ. ಭೀಮಣ್ಣಖಂಡ್ರೆಯವರೇ, ನಿಮಗೆ ಅದೃಷ್ಟ ಸರಿಯಾಗಿಲ್ಲ. ನಿಮಗೆ ಬೇರೆ ಇಲಾಖೆ ಸಿಕ್ಕಿದ್ದರೆ ಬಹಳ ಚೆನ್ನಾಗಿತ್ತು. ನನಗೆ ನಿಜವಾಗಲೂ ನಿಮ್ಮ ಬಗ್ಗೆ ಕರುಣೆ ಇದೆ. ಬಹಳ ದಿವಸದ ನಂತರ ನೀವು ಮಂತ್ರಿಗಳಾಗಿದ್ದೀರಿ. ನಿಮಗೆ ಸಿಕ್ಕಿರುವುದು ಯಮಲೋಕ. ಈ ಸಾರಿಗೆ ಸಂಸ್ಥೆ ಯಮಲೋಕ ಇದ್ದಹಾಗೆ. ಸಾರಿಗೆ ಬಸ್ಸುಗಳು ಸಹ ಯಮಲೋಕ ಇದ್ದಹಾಗೆ. ಬಸ್ಸುಗಳಿಗೆ ಏಕೆ ಕೆಂಪು ಬಣ್ಣ ಹಚ್ಚಿದ್ದಾರೆ ಎಂದರೆ ಅದು ಕಾಕತಾಳೀಯ. ಅದರ ಉದ್ದೇಶ ಬೇರೆ ಯಾವುದೋ ಇರಬಹುದು. ಕೆಂಪು ಬಣ್ಣ ಕೆಟ್ಟ ಅಪಘಾತದ ಸಂಕೇತ. ಬಸ್ಸಿನಲ್ಲಿ ಕುಳಿತಿರತಕ್ಕ ಪ್ರಯಾಣಿಕರು ಯಮನ ಮರ್ಜಿಯಲ್ಲಿ ಹೋಗಬೇಕು. ಯಾವ ಘಳಿಗೆಯಲ್ಲಿ ಯಮ ಬೇಡ ಎಂದು ಹೇಳಿದರೆ ಆ ಬಸ್ಸು ಯಾವುದೋ ಗೋಡೆಗೆ ಹೊಡೆಯುತ್ತದೆ. ಇಲ್ಲವೆಂದರೆ ಗಂಭೀರವಾಗಿ ಹೋಗುತ್ತಿರುತ್ತದೆ. ಬಸ್ಸಿನ ಒಳಗಡೆ ಕುಳಿತಿರುವಂಥ ಪ್ರಯಾಣಿಕರು ಪ್ರಯಾಣ ಮಾಡುವಾಗ ಬಸ್ಸನ್ನು ಹತ್ತಿ ಕೆಳಗೆ ಇಳಿಯುವವರೆಗೂ ಯಮನ ಕೈಯಲ್ಲಿ ತಮ್ಮ ಉಸಿರನ್ನು ಕೊಟ್ಟಿರುತ್ತಾರೆ. ಯಾವ ಘಳಿಗೆಗೆ ನಾವು ಮನೆಗೆ ಹೋಗುತ್ತೇವೆ ಎಂಬ ಭಯ ಇದೆ. ಇದರಲ್ಲಿ ಅನುಮಾನವೇ ಇಲ್ಲ. ಆದುದರಿಂದ ತಾವು ಈ ಯಮಲೋಕಕ್ಕೆ ಅಧಿಪತಿಯಾಗಬಾರದಿತ್ತು. ಇವತ್ತಿನ ಪರಿಸ್ಥಿತಿಯಲ್ಲಿ ರಸ್ತೆ ರಸ್ತೆಯಲ್ಲಿ ಆಗುತ್ತಿರುವ ಅಪಘಾತಗಳ ಬಗ್ಗೆ ನಾನು ತಮಗೆ ಹೇಳುತ್ತಿದ್ದೇನೆ. ಈ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬಗ್ಗೆ ಈ ಬಸ್ಸುಗಳಿಂದ ಇಡೀ ರಾಜ್ಯದಲ್ಲಿ ನಡೆಯುತ್ತಿರತಕ್ಕಂಥ ಅಪಘಾತಗಳು ಬಹುಶಃ ಬೇರೆ ಯಾವ ವಾಹನಗಳಿಂದ ನಡೆದಿಲ್ಲ ಎನ್ನುವುದು ಅಂಕಿಅಂಶಗಳಿಂದ ರುಜುವಾತಾಗಿದೆ. ಇದನ್ನು ತಡೆಹಿಡಿಯುವುದಕ್ಕೆ ನಿಮ್ಮಲ್ಲಿ ಏನಾದರೂ ವ್ಯವಸ್ಥೆ ಇದೆಯೇ? ಇದುವರೆಗೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ? ಇದರ ಪರಿಶೀಲನೆಗೆ ತಜ್ಞರ ಸಮಿತಿಯನ್ನು ನೇಮಕ ಮಾಡಿದ್ದೀರಾ? ಕರ್ನಾಟಕದಲ್ಲಿ ಓಡಾಡುವಂತಹ ಸಾರಿಗೆ ಸಂಸ್ಥೆಯ ಬಸ್‌ಗಳಿಗೂ ಬ್ರೇಕೆ ಇಲ್ಲ. ಬ್ರೇಕೆ ಇಲ್ಲದೆ ಓಡಿಸುವಂತಹ ನಿಸ್ಸೀಮರು ನೀವಾಗಿದ್ದೀರಿ. ಇದು ಒಳ್ಳೆಯದಲ್ಲ. ನಾನು ಅನೇಕ ಕಡೆ ನೋಡಿದ್ದೇನೆ. ಮಾನ್ಯ ಸಿಂಧ್ಯರವರೇ, ನಾನು ಮೊನ್ನೆ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ಅಧ್ಯಯನ ಪ್ರವಾಸದಲ್ಲಿ ನೇಪಾಳಕ್ಕೆ ಹೋಗಿದ್ದೆ. ಅಲ್ಲಿ ರಸ್ತೆ ರಸ್ತೆಯಲ್ಲೂ ವಿದ್ಯುತ್ ಬಸ್ಸುಗಳು ಓಡುತ್ತವೆ; ತಾವು ಅದನ್ನು ಗಮನಿಸಿ, ವಿದ್ಯುತ್ ಬಸ್ಸುಗಳು ಮದ್ರಾಸ್‌ನಲ್ಲೂ ಇವೆ. ನಮ್ಮ ರಾಜ್ಯದಲ್ಲೂ ಅದರಲ್ಲೂ ಬೆಂಗಳೂರು ಮೈಸೂರಿನಂಥ ದೊಡ್ಡ ದೊಡ್ಡ ರಸ್ತೆಗಳಲ್ಲಿ ಈ ಸಾರಿಗೆ ಸಂಸ್ಥೆಯ ಮೂಲಕ ವಿದ್ಯುತ್ ಬಸ್‌ಗಳನ್ನು ಓಡಿಸುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು. ಇದರಿಂದ ಹೊಗೆ ತೊಂದರೆ ಇರುವುದಿಲ್ಲ, ಪರಿಸರ ಮಾಲಿನ್ಯದ ತೊಂದರೆ ಇರುವುದಿಲ್ಲ. ಇದರಿಂದ ಯಾವ ತೊಂದರೆಗಳು ಇಲ್ಲ. ಇಂಥ ಒಂದು ಒಳ್ಳೆಯ ಕೆಲಸವನ್ನು ಮಾಡಿ. ನೇಪಾಳಕ್ಕೆ ಶ್ರೀ ಅನಂತಕೃಷ್ಣರವರು ಬಂದಿದ್ದರು. ನಾನು ತಮಗೆ ಒಂದು ವಿಷಯವನ್ನು ಹೇಳುತ್ತೇನೆ. ಈ ಬಸ್ಸಿನ ದರವನ್ನು ಏರಿಸುವಂತಹ ಒಂದೇ ನಿರ್ಧಾರ ಅಲ್ಲ. ಇವತ್ತು ನಾವು ಮಾಡಿದ್ದೇ ಸರಿ ಎಂದು ಸರ್ಕಾರ ಪ್ರತಿಷ್ಠೆಯ ಮೇಲೆ ಕುಳಿತಿದ್ದರೆ ನಾವು ನಮ್ಮ ಪ್ರತಿಷ್ಠೆ ಎನ್ನುವುದಕ್ಕೆ ಹೋಗುವುದಿಲ್ಲ. ನಾವು ಜನರ ಪರವಾಗಿ ತೀವ್ರವಾದಂತಹ ಚಳುವಳಿಯನ್ನು ಮಾಡಬೇಕಾಗಿದೆ, ಹೋರಾಟ ಮಾಡಬೇಕಾಗಿದೆ. ರಸ್ತೆ ರಸ್ತೆಗಳಲ್ಲಿ ಈಗಾಗಲೇ ಪ್ರಾರಂಭವಾಗಿದೆ. ಈ ಪ್ರಾರಂಭದ ಸಂಕೇತ ಮುಂದುವರಿಯಬಾರದು. ರಾಜ್ಯಸರ್ಕಾರ ಈ ಕೂಡಲೆ ಈ ಬಸ್ಸು ದರವನ್ನು ಏರಿಸಿರುವುದನ್ನು ಹಿಂತೆಗೆದುಕೊಳ್ಳಬೇಕು. ಮಾನ್ಯ ಅಧ್ಯಕ್ಷರೇ, ತಮಗೆ ಹೇಳುತ್ತಿದ್ದೇನೆ. ಹಿಂದೆ ಶ್ರೀಮಾನ್ ಬಂಗಾರಪ್ಪನವರ ಸರ್ಕಾರ ಇದ್ದಾಗ ದರ ಏರಿಸುತ್ತಾರೆ ಎಂಬ ಪ್ರಶ್ನೆ ಬಂತು. ಆಗಲೂ ನಾನು ಇದೆ ಸದನದಲ್ಲಿ ಕೇಳಿದ್ದೇನೆ. ಸಾರಿಗೆ ದರವನ್ನು ಏರಿಸುವುಕ್ಕೆ ಮುಂಚಿತವಾಗಿ ವಿರೋಧಪಕ್ಷದ ಮುಖಂಡರುಗಳ ಜೊತೆ ಮಾತನಾಡಬೇಕು ಎಂದು ಹೇಳಿದೆವು. ಆ ಭರವಸೆಯನ್ನು ಕೊಟ್ಟಿರು. ಆ ಭರವಸೆಯನ್ನು ಈ ಸದನದಲ್ಲಿ ಕೊಟ್ಟ ನಂತರ ಆ

ಭರವಸೆಯನ್ನು ಈಡೇರಿಸಲಿಲ್ಲ. ಶ್ರೀ ಮಾನ್ ಭೀಮಣ್ಣ ಖಂಡ್ರೆಯವರು ಏಕಾಏಕಿ ಈ ಬಸ್ ದರವನ್ನು ಏರಿಸಿದ್ದಾರೆ. ಆದರೆ ನನಗೆ ಅನಿಸುತ್ತದೆ, ಈ ಬಸ್ ದರ ಏರಿಕೆಯ ದಿವಸ ಓದಿದೆ. ಯಾರೋ ಹರೋಹರ ಎನ್ನತಕ್ಕಂತ ಒಬ್ಬ ವ್ಯವಸ್ಥಾಪಕ ನಿರ್ದೇಶಕರು ಪತ್ರಿಕೆಗಳಿಗೆ ಹೇಳಿಕೆ ಕೊಟ್ಟಿದ್ದಾರೆ. ನನಗೆ ಎಷ್ಟು ಆಶ್ಚರ್ಯವಾಯಿತು ಎಂದರೆ ರಾಜ್ಯ ಸರ್ಕಾರ ಇದೆ, ಮಂತ್ರಿಗಳು ಇದ್ದಾರೆ, ಸಚಿವ ಸಂಪುಟ ಇದೆ, ಅವರು ಯಾರು ಈ ಬಗ್ಗೆ ಹೇಳಿಕೆ ಕೊಡದೆ ಒಬ್ಬ ಅಧಿಕಾರಿಗಳ ಕೈಯಲ್ಲಿ ರಾತ್ರೋರಾತ್ರಿ ಕದ್ದು ಪ್ರಕಟಣೆ ಮಾಡಿಸಿ ಬಿಡುಗಡೆ ಮಾಡಿದರಲ್ಲ. ಇದು ನೀತಿಯೇ?

ಎರಡನೆಯದಾಗಿ ಅಧ್ಯಕ್ಷರೆ, ರಾಜ್ಯಪಾಲರು ಈ ಸದನವನ್ನು ಕರೆದಿದ್ದಾರೆ. ಈ ಸದನಕ್ಕೆ ದಿನಾಂಕವನ್ನು ಗೊತ್ತುಪಡಿಸಿದ್ದಾರೆ. ಸದನ ಸೇರತಕ್ಕದ್ದು ಕೇವಲ ೧೨ನೇ ತಾರೀಖು. ಇವರು ಬಸ್ಸು ದರವನ್ನು ಪ್ರಕಟಣೆ ಮಾಡತಕ್ಕಂಥಾದ್ದು ೪ನೇ ತಾರೀಖು ರಾತ್ರಿ. ಇದು ಈ ಸದನಕ್ಕೆ ಮಾಡಿದಂತಹ ಅಪಚಾರ, ಈ ಸದನಕ್ಕೆ ಮಾಡಿದಂತಹ ಅಗೌರವ. ಈ ಸದನದ ಹಕ್ಕಿಗೆ ಚ್ಯುತಿಯನ್ನು ತಂದಿದ್ದಾರೆ. ಮಾನ್ಯ ವೀರಪ್ಪ ಮೊಯಿಲಿಯವರು ಸಂಸದೀಯ ಸಚಿವರಾಗಿ, ಮಾನ್ಯ ಮುಖ್ಯಮಂತ್ರಿಗಳಾಗಿ ನಮ್ಮ ಸರ್ಕಾರ ತೆರೆದ ಪುಸ್ತಕ, ನಮ್ಮಲ್ಲಿ ಬೇರೆ ಮಾತೇ ಇಲ್ಲ, ಈ ಸದನಕ್ಕೆ ಗೌರವ ಕೊಡುತ್ತೇವೆ, ಈ ಸದನಕ್ಕೆ ಮಹತ್ವವಾದ ಶಕ್ತಿ ಇದೆ ಎನ್ನತಕ್ಕಂಥ ಮಾತನ್ನು ಹೇಳಿ, ಹಿಂಬಾಗಿಲಿನಿಂದ ಬಸ್ ದರವನ್ನು ಏರಿಸುವುದರ ಮೂಲಕ ಈ ಸದನಕ್ಕೆ ಅಗೌರವ ಮಾಡಿದ್ದಾರೆ. ಆದ್ದರಿಂದ ನಮ್ಮ ನಿಲುವಳಿ ಸೂಚನೆಯನ್ನು ಸಮಗ್ರವಾಗಿ ಚರ್ಚೆಮಾಡುವುದಕ್ಕೆ ತಾವು ಅವಕಾಶ ಕೊಡಬೇಕು ಎಂದು ಅಧ್ಯಕ್ಷರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಈ ಸರ್ಕಾರ ನಮ್ಮ ಮನವಿಯನ್ನು ಮನ್ನಿಸಿ ಏರಿಸಿರುವ ಬಸ್ ಪ್ರಯಾಣದರವನ್ನು ಹಿಂತೆಗೆದುಕೊಳ್ಳದಿದ್ದರೆ ಈ ಸದನದಲ್ಲಿ ತೀವ್ರವಾಗಿ ಧರಣಿಯನ್ನು ಮಾಡಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳಿ, ಈ ಒಂದು ನಿಲುವಳಿ ಸೂಚನೆಯನ್ನು ಒಪ್ಪಬೇಕೆಂದು ಹೇಳಿ ನನ್ನ ಬೆಂಬಲವನ್ನು ಸೂಚಿಸುತ್ತೇನೆ.

* ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ):- ಸನ್ಮಾನ್ಯ ಅಧ್ಯಕ್ಷರೇ, ನಾನು ಬಹಳ ಕಳಕಳಿಯಿಂದ ತಮ್ಮಲ್ಲಿ ಮಾನವಿಮಾಡಿಕೊಳ್ಳುತ್ತಿದ್ದೇನೆ ಏಕೆಂದರೆ, ಇದು ಬಹಳ ಗಗನವಾದ ಒಂದು ವಿಚಾರ, ಇಡೀ ರಾಜ್ಯದ ನಾಲ್ಕೂವರೆ ಕೋಟಿ ಜನಗಳ ಪೈಕಿ ಪ್ರತಿನಿತ್ಯವೂಸಹಿತ ಸಮಾರು ೬೦ ಲಕ್ಷ ಜನ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಲ್ಲಿ ಪ್ರಯಾಣವನ್ನು ಮಾಡುತ್ತಿದ್ದಾರೆ. ಇಂಥ ವಿಚಾರದ ಬಗ್ಗೆ ನಾವು ಚರ್ಚೆ ಮಾಡುವಾಗ ತಾವು ದಯವಿಟ್ಟು ಸಮಯವನ್ನು ನನಗೆ ಕೊಡಬೇಕೆಂದು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಏಕೆಂದರೆ, ನಮ್ಮ ವೀರಪ್ಪ ಮೊಯ್ಲಿಯವರು, ಬಂಗಾರಪ್ಪನವರು ಈ ಕಡೆ ಸಾಲಿನಲ್ಲಿ ಕುಳಿತುಕೊಂಡಂಥ ಸಂದರ್ಭದಲ್ಲಿ ೪-೫ ಗಂಟೆಗಳ ಕಾಲ ನಿಲುವಳಿ ಸೂಚನೆಯ ಬಗ್ಗೆ ಚರ್ಚೆ ನಡೆದಿದೆ. ಇದು ಬಹಳ ಮಹತ್ತರವಾದ ವಿಚಾರ ಆಗಿರುವುದರಿಂದ ನನಗೆ ಅನುಮತಿಯನ್ನೂ ಕೊಡಲೇಬೇಕೆಂದು ಬಹಳ ವಿನಯದಿಂದ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಇದರ ಜೊತೆಗೆ ನನಗೆ ಬಹಳ ನೋವಾಗುತ್ತಿದೆ. ಈ ಸರ್ಕಾರಕ್ಕೆ ನಮ್ಮ ಅಭಿಪ್ರಾಯಗಳನ್ನು ಹೇಳಬೇಕು ಎಂದು ಇದ್ದಾರಾ ಅಥವಾ ಇವರೆಲ್ಲ ಏನೋ ಹೇಳಿಕೊಂಡು ಹೋಗುತ್ತಾರೆ, ನಾವು ಮಾಡುವುದನ್ನು ಮಾಡುತ್ತೇವೆ ಎನ್ನತಕ್ಕಂಥ ಒಂದು ಭಾವನೆ ಇದೆಯೋ ಏನೋ ನನಗಂತೂ ಅರ್ಥವಾಗುತ್ತಾ ಇಲ್ಲ. ಮೊದಲನೆಯ ಸಾಲಿನಲ್ಲಿ ಎಲ್ಲಾ ಹಿರಿಯ ಮಂತ್ರಿಗಳು ಇರುವಂತಹವರು, ಕೆ.ಹೆಚ್. ರಂಗನಾಥ್‌ರವರು ಮಾತ್ರ ಒಬ್ಬರಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲ ಮತ್ತೆ ನನಗೆ ಏನೂ ಯಾರ ಕಡೆಯಿಂದಲೂ ಶಹಭಾಸ್‌ಗಿರಿ ಬೇಕಾಗಿಲ್ಲ ಅಥವಾ ಯಾವುದೇ ಮರ್ಜಿಯೂ ನನಗೆ ಬೇಕಾಗಿಲ್ಲ. ನನಗೆ ಬಹಳ ನೋವಾಗುತ್ತಿದೆ, ಸ್ವಾಮಿ ಈ ಕೆ.ಎಸ್.ಆರ್.ಟಿ.ಸಿ.ಯಲ್ಲಿ ೮-೯ ಜನ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ಇದ್ದಾರೆ. ಕೊನೇ ಪಕ್ಷ ವಿರೋಧಪಕ್ಷದವರು ಮಾತನಾಡುತ್ತಾರೆ ಎಂದಾಗ ನಾವು ಹೇಳತಕ್ಕ ವಿಚಾರಗಳನ್ನು ಇತರರಿಗೆ ಕೇಳುವುದಕ್ಕೂ ಸೌಜನ್ಯ ಇಲ್ಲ ಅಂದರೆ, ಈ ಅಧಿಕಾರಿಗಳ ಮೇಲೆ ಸರ್ಕಾರಕ್ಕೆ ಏನಾದರೂ ಹಿಡಿತ ಇದೆಯೇ?

ಮಾನ್ಯ ಭೀಮಣ್ಣ ಖಂಡ್ರೆಯವರ ಬಗ್ಗೆ ನನಗೆ ವೈಯಕ್ತಿಕವಾಗಿ ಬಹಳ ಗೌರವ ಇದೆ. ತಾವು ಸಂಸದೀಯ ಪಟುಗಳು, ಬಹಳ ಅನುಭವಸ್ಥರು, ತಾವು ಏನು ಹೇಳಿದರೂ ನಾವು ಕೇಳುತ್ತೇವೆ. ನನಗೆ ವೈಯಕ್ತಿಕವಾಗಿ ಖಂಡ್ರೆಯವರ ಬಗ್ಗೆ ಬಹಳ ಗೌರವ ಇದೆ. ವೈಯಕ್ತಿಕವಾಗಿ ಖಂಡ್ರೆಯವರು ಜನನಾಯಕರಾಗಿದ್ದಾರೆ. ಖಂಡ್ರೆಯವರದು ಏನೂತಪ್ಪಿಲ್ಲ. ದುರ್ದೈವ, ಈ ಇಲಾಖೆ ಈ ಸಂದರ್ಭದಲ್ಲಿ ನಿಮಗೆ ಬಂದಿದೆ. ನಿಮಗೆ ಸುದೈವ ಆಗುತ್ತದೆ. ನೀವು ಮನಸ್ಸು ಮಾಡಿದರೆ ೨ ವರ್ಷಗಳಲ್ಲಿ ನೀವು ಬೀದರ್ ಜಿಲ್ಲೆಯಲ್ಲಿ ಯಾವ ರೀತಿ ಜನ ನಾಯಕರಾಗಿದ್ದೀರಿ, ಇಡೀ ರಾಜ್ಯದಲ್ಲಿ ಆಗತಕ್ಕಂಥ ಸಂದರ್ಭವೇನೂ ಕೂಡ ಬಂದಿದೆ. ನಾನು ಏನು ಹೇಳುತ್ತಾ ಇದ್ದೇನೆ ಎಂದರೆ, ನಿಮಗೆ ತಿಳುವಳಿಕೆ ಇಲ್ಲವೆಂದು ಹೇಳುವುದಿಲ್ಲ. ನಿಮಗೆ ಗ್ರಹಣ ಮಾಡಲಿಕ್ಕೆ ಶಕ್ತಿ ಇಲ್ಲವೆಂದು ಕೂಡ ಹೇಳುವುದಿಲ್ಲ. ನನಗಿಂತ ಎಲ್ಲದರಲ್ಲೂ ಹಿರಿಯರು, ಆದರೆ ನಿಮಗೆ ಕೊಡಬೇಕಾಗಿರತಕ್ಕಂಥ ಮಾಹಿತಿ, ಅಂಕಿ ಅಂಶಗಳನ್ನು ಅಧಿಕಾರಿಗಳು ಕೊಡಬೇಕೇ ವಿನಃ ಯಾರೋ ೪ ಜನ ಇರುತ್ತಾರೆ, ೩ ಜನ ಪಬ್ಲಿಕ್ ರಿಲೇಷನ್ ಆಫೀಸರ್‌ಗಳು ಅಲ್ಲ, ಇಲ್ಲಿ ಬಂದು ಕುಳಿತುಕೊಳ್ಳುವುದು. ಈ ಸದನಕ್ಕೆ ಗೌರವ ಬೇಡವೆ? ಯಾರಾದರೂ ಅಧಿಕಾರಿಗಳು ಇಲ್ಲಿಗೆ ಬರಬೇಕು ಎಂದು ನಾನು ೨ಗಂಟೆ ಹಿಂದೆ ಹೇಳಿದ್ದೇನೆ. ನಾನು ಹೇಳುವುದನ್ನು ಬರೆದುಕೊಳ್ಳುವುದಕ್ಕೆ ಅಲ್ಲ, ನೀವು ಇರುವುದು. ಅವರು ಅದನ್ನು ಕೇಳಬೇಕು, ಬರೆದುಕೊಂಡು ಅದಕ್ಕೆ ನಿಮ್ಮ ಕಡೆಯಿಂದ ಉತ್ತರವನ್ನು ಕೊಡಿಸಬೇಕು. ನನಗೆ ನಿಜಯವಾಗಿಯೂ ಬಹಳ ನೋವಾಗುತ್ತಿದೆ. ಈ ಒಂದು ಧೋರಣೆಯನ್ನು ಖಂಡಿಸಬೇಕಾಗುತ್ತದೆ. ಈ ಅಧಿಕಾರಶಾಹಿ ಧೋರಣೆಯಿಂದಲೇ ಸಾರಿಗೆ ಸಂಸ್ಥೆ ಈ ಒಂದು ದಿವಾಳಿ ಆಗತಕ್ಕಂತಹ ಸಂದರ್ಭ ಬಂದಿರತಕ್ಕಂಥದ್ದು ಎಂದು ನಾನು ಹೇಳುತ್ತೇನೆ. ಈಗಲಾದರೂ ಸಹಿತ ನೀವು ಕರೆಯಿಸಿ ಕೇಳಿ. ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನು ಹೇಳುತ್ತಾ ಇದ್ದೇನೆ. ನೀವು ಬಂದು ನಮ್ಮ ಮಾತುಗಳನ್ನು ಕೇಳಬೇಕು. ಇವತ್ತು ಈ ರಾಜ್ಯದ ಎಲ್ಲ ಪ್ರಮುಖ ಪತ್ರಿಕೆಗಳಲ್ಲೂ ಬರೆದಿದ್ದಾರೆ. ಸಾರಿಗೆ ದರಗಳ ಬಗ್ಗೆ ಬಹಳ ಜೋರಾಗಿ ವಿಧಾನ ಸಭೆಯಲ್ಲಿ ಚರ್ಚೆಯಾಗಬೇಕು, ಇದರ ಬಗ್ಗೆ ಸರ್ಕಾರದ ಧೋರಣೆ ಏನು ಎಂಬುದನ್ನು ತಿಳಿಸಬೇಕು, ಎಂದು ಬರೆದಿದ್ದಾರೆ. ನಮ್ಮ ಮಾತುಗಳನ್ನು ಕೇಳುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಈಗ ಸದನದಲ್ಲಿ ಇಲ್ಲ. ನಮ್ಮ ಈ ನಿಲುವಳಿ ಸೂಚನೆ ಏನಾಗುತ್ತದೆಂಬುದು ನಮಗೆ ಚೆನ್ನಾಗಿ ಗೊತ್ತಿದೆ. ಪ್ರಿಲಿಮಿನರಿ ಸಬ್ಮಿಷನ್‌ನಲ್ಲಿ ನಾವು ಏನು ಹೇಳಿದ್ದೇವೆ ಅದೇ ಮುಖ್ಯವಾಗಿರತಕ್ಕದ್ದು. ಇಲ್ಲಿ ಯಾರ್‍ಯಾರು ಬಂದಿದ್ದಾರೆಂದು ನನಗೆ ಗೊತ್ತಿದೆ.

ಶ್ರೀ ಭೀಮಣ್ಣ ಖಂಡ್ರೆ:- ಇದಕ್ಕೆ ಸಂಬಂಧಪಟ್ಟ ಮಂತ್ರಿ ನಾನು ಇದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಇದರಲ್ಲಿ ರಾಜಕೀಯ ಮಾಡಬೇಕೆಂದು ಬಯಸುವವನು ನಾನಲ್ಲ.

ಶ್ರೀ ವಾಟಾಳ್ ನಾಗರಾಜ್:- ಇದರ ಬಗ್ಗೆ ಸ್ವತಂತ್ರವಾಗಿ ತೀರ್ಮಾನವನ್ನು ತೆಗೆದುಕೊಳ್ಳುವ ಶಕ್ತಿ ನಿಮಗೆ ಇದೆಯೇ?

ಶ್ರೀ ಭೀಮಣ್ಣ ಖಂಡ್ರೆ:- ಇದೆ.

ಶ್ರೀ ವಾಟಾಳ್ ನಾಗರಾಜ್:- ಖಂಡಿತ ಇಲ್ಲ. ನಾನು ಇದ್ದೇನೆ, ನಾನು ಇದ್ದೇನೆ, ಎಂದು ಸುಮ್ಮನೆ ಏತಕ್ಕೆ ಹೇಳುತ್ತೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಸಭಾಧ್ಯಕ್ಷರೆ, ...

ಅಧ್ಯಕ್ಷರು:- ಈಗ ನೀವು ಶುರುಮಾಡಿ. ಒಂದೂವರೆ ಗಂಟೆ ಆದಮೇಲೆ.....

ಶ್ರೀ ಪಿ.ಜಿ.ಆರ್. ಸಿಂಧ್ಯ:- ಎಷ್ಟು ಸಾಧ್ಯವೋ ಅಷ್ಟು ಬೇಗ ನಾನು ಮುಗಿಸುತ್ತೇನೆ. ನನಗೆ ಕೊನೇಪಕ್ಷ ೧ ಗಂಟೆಯಾದರೂ ಬೇಕಾಗುತ್ತದೆ. ಈ ಸರ್ಕಾರದ ಪ್ರಜಾತಂತ್ರವಿರೋಧಿ ಕ್ರಮ ಏನೆಂದರೆ, ರಾತ್ರೋ ರಾತ್ರಿ, ಹಗಲು ದರೋಡೆ ಮಾಡುವ ರೀತಿಯಲ್ಲಿ, ಕಳ್ಳಕಾಕರರಂತೆ ಈ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಇದನ್ನು ಘೋಷಣೆ ಮಾಡತಕ್ಕ ಅವಶ್ಯಕತೆಯಾದರೂ ಏನಿತ್ತು? ೧೫ ದಿವಸ ಮುಂಚಿತವಾಗಿ ಇಡೀ ರಾಜ್ಯದ ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಪಡೆದು, ವಿವಿಧ ಸಂಘಸಂಸ್ಥೆಗಳವರಿಂದ ಅಭಿಪ್ರಾಯಗಳನ್ನು ಪಡೆದು, ಮೋಟಾರ್ ವೆಹಿಕಲ್ಸ್ ಆ್ಯಕ್ಟ್ ಪ್ರಕಾರ ಇದನ್ನು ನೀವು ಮಾಡಬೇಕಾಗಿತ್ತು. ಆದರೆ ನೀವು ಇದರ ಬಗ್ಗೆ ಯಾರನ್ನೂ ಕೇಳಲಿಲ್ಲ. ಏನೂಮಾಡಲಿಲ್ಲ. ನೀವು ಬೀದರ್‌ನಲ್ಲಿ ಇದ್ದಿರಿ. ನಿಮಗೂ ಕೂಡ ಇದು ಒಂದು ರೀತಿಯ ಎಂಬರಾಸ್‌ಮೆಂಟ್. ಬಹುಶಃ ನನಗೆ ತಿಳಿದಷ್ಟು ನಿಮಗೆ ತಿಳಿದಿಲ್ಲ. ಡಿ.ಪಿ.ಎ.ಆರ್. ರೂಲ್ಸ್ ಪ್ರಕಾರ ಇದು ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿ ತೀರ್ಮಾನವನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಆದರೆ ಇದನ್ನು ನೀವು ಕ್ಯಾಬಿನಟ್‌ಗೆ ತಿಳಿಸಬೇಕಾಗುತ್ತದೆ. ಇನ್‌ಫಾರ್ಮಲ್ ಆಗಿ ಹೇಳಬೇಕಾಗುತ್ತದೆ. ಲಾ ಅಂಡ್ ಆರ್ಡರ್ ಪ್ರಾಬ್ಲಂ ಕ್ರಿಯೇಟ್ ಆಗುತ್ತದೆಂದು ನೀವು ಪೋಲೀಸ್‌ಗೆ ತಿಳಿಸಬೇಕಾಗುತ್ತದೆ. ಆದರೆ ಇದನ್ನು ಯಾವುದನ್ನೂ ಮಾಡದೆ ಕೆ.ಎಸ್.ಆರ್.ಟಿ.ಸಿ.ಯ ಅಧಿಕಾರಿಗಳು ಶುಕ್ರವಾರ ರಾತ್ರಿ ಇದನ್ನು ಅನೌನ್ಸ್ ಮಾಡಿ ಭಾನುವಾರ ಬೆಳಿಗ್ಗೆಯಿಂದ ಜಾರಿಗೆ ಬರುತ್ತದೆಂದರೆ ಹೇಗೆ? ಯಾರಾದರೂ ಒಬ್ಬ ವ್ಯಕ್ತಿ ೧೦೦ ರೂಪಾಯಿ ತೆಗೆದುಕೊಂಡು ನಿಮ್ಮ ಕೆ.ಎಸ್.ಆರ್.ಟಿ.ಸಿ. ಬಸ್‌ನಲ್ಲಿ ಗುಲ್ಬರ್ಗಾಕ್ಕೆ ಹೋಗಿದ್ದರೆ ಬರುವಾಗ ೧೨೫ ರೂಪಾಯಿ ಛಾರ್ಜ್ ಕೊಡಬೇಕೆಂದರೆ ಉಳಿದ ಹಣವನ್ನು ಅವನು ಎಲ್ಲಿಂದ ತರಬೇಕು. ಪ್ರಯಾಣಿಕರಿಗೆ ಎಷ್ಟು ತೊಂದರೆಯಾಗುತ್ತದೆಂದು ಯೋಚನೆ ಮಾಡಿದ್ದೀರಾ? ೧೫ ದಿವಸ ಮುಂಚಿತವಾಗಿ ಅನೌನ್ಸ್ ಮಾಡಿದ್ದರೆ ನಿಮಗೆ ಏನು ತೊಂದರೆಯಾಗುತ್ತಿತ್ತು? ಪ್ರಯಾಣಿಕರಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡುತ್ತೇವೆ, I am committed for this, ಎಂದು ಹೇಳಿದಂಥ ಮಾತೂ ಕೂಡ ಇವತ್ತು ಸುಳ್ಳಾಯಿತು. ಮಾನ್ಯ ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಗಳಾದಾಗ ಅಭಿಮನ್ಯು, ಭೀಮ, ಅರ್ಜುನ ಎಂದು ಹೇಳಿದ ಹೇಳಿಕೆಗಳನ್ನೆಲ್ಲ ನೋಡಿ ಮೊಯ್ಲಿಯವರು ನಿಜವಾಗಿಯೂ ಏನೋ ಮಾಡುವುದಕ್ಕೆ ಹೊರಟಿದ್ದಾರೆ ಜನರಲ್ಲಿ ವಿಶ್ವಾಸ ಬರುತ್ತಿತ್ತು. ಆದರೆ ಇವತ್ತು ಆ ವಿಶ್ವಾಸಕ್ಕೆ ನೀವು ದ್ರೋಹವನ್ನು ಬಗೆದಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ನಾಟಕದಲ್ಲಿ ಅರ್ಜುನನ ಪಾತ್ರವನ್ನು ಮಾಡಿದಂತಾಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಕ್ಯಾಬಿನೆಟ್‌ನಲ್ಲಿ ಈ ವಿಚಾರವನ್ನು ಚರ್ಚೆಮಾಡಿದ್ದೀರಾ ಎಂಬುದನ್ನು ಸರ್ಕಾರದವರು ಹೇಳಬೇಕು. ನೀವು ಚರ್ಚೆ ಮಾಡಿಲ್ಲ ಅಥವಾ ನಿಮ್ಮಲ್ಲಿ ಹೊಂದಾಣಿಕೆ ಇಲ್ಲ. ಬಹುಶಃ ಸಾರಿಗೆ ಮಂತ್ರಿಗಳನ್ನು ಮಾನ್ಯ ಮುಖ್ಯಮಂತ್ರಿಗಳು ಸೀರಿಯಸ್ ಆಗಿ ತೆಗೆದುಕೊಂಡಿಲ್ಲ ಎಂದು ನನಗನಿಸುತ್ತದೆ. ಅವರು ನಿಮಗೆ ತಿಳಿಸಬೇಕಾಗಿತ್ತು. ಇದನ್ನು ನೀವು ಅನೌನ್ಸ್ ಮಾಡಬೇಕಾಗಿತ್ತು. ಇದನ್ನು ಅನೌನ್ಸ್ ಮಾಡತಕ್ಕವರು ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳಲ್ಲ. ಮೋಟಾರ್ ವೆಹಿಕಲ್ಸ್ ಆ್ಯಕ್ಟ್ ಪ್ರಕಾರ ಬಸ್ ದರವನ್ನು ಜಾಸ್ತಿಮಾಡಬೇಕಾದರೆ ಸರ್ಕಾರ ಮಾಡಬೇಕು. ಆದರೆ ಇಲ್ಲಿ ಸರ್ಕಾರ ಅನೌನ್ಸ್ ಮಾಡಲಿಲ್ಲ. ಸಾರಿಗೆ ಸಂಸ್ಥೆಯವರು ಅನೌನ್ಸ್ ಮಾಡಿದರು. ಇದಕ್ಕೆ ಮಾನ್ಯ ಖಂಡ್ರೆಯವರು ಕಾರಣ, ಅಥವಾ ಮಾನ್ಯ ಮೊಯ್ಲಿಯವರು ಕಾರಣವೆಂದು ನಾನು ಹೇಳುವುದಿಲ್ಲ. ಕಳೆದ ನಾಲ್ಕು ವರ್ಷಗಳ ಕಾಲದಲ್ಲಿ ಸತತವಾಗಿ ಕರ್ನಾಟಕ ರಾಜ್ಯದ ನಿಮ್ಮ ಸರ್ಕಾರದ ಆಡಳಿತದ ಫಲ ಎಂದು ಹೇಳಬೇಕಾಗುತ್ತದೆ. ೧೦೦ ಕೋಟಿ ರೂಪಾಯಿಗಳಷ್ಟು ಲುಕ್ಸಾನಾಗಬೇಕಾದರೆ ಕಾರಣವೇನು? ಅದನ್ನು ದಯವಿಟ್ಟು ಸ್ವಲ್ಪ ವಿಶ್ಲೇಷಣೆ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ನೀವು ಪ್ರೈವೇಟ್ ಬಸಸ್ ಲಾಬಿಯವರಿಗೇನಾದರೂ ಮಣಿದಿದ್ದೀರಾ ಎಂದು ಕೇಳಬೇಕಾಗುತ್ತದೆ. ಏತಕ್ಕೆ ಇದನ್ನು ನೀವು

ಅನೌನ್ಸ್ ಮಾಡಿದಿರಿ? ನೀವು ಏನು ಅನೌನ್ಸ್ ಮಾಡಿದಿರಿ ಇನ್ ಫಾರ್ ದಟ್ ಅವರು ಜಾಸ್ತಿ ಮಾಡುತ್ತಾರೆ. ಈಗಾಗಲೇ ಅವರು ಜಾಸ್ತಿ ಮಾಡಿಬಿಟ್ಟಿದ್ದಾರೆ. ಅವರ ಲಾಬಿಗೆ ತಾವು ಏನಾದರೂ ಮಣಿದಿದ್ದೀರಾ ಎಂದು ನಾನು ಆಪಾದನೆ ಮಾಡಬಹುದು. ನಾನು ಈ ಆಪಾದನೆಯನ್ನು ಮಾನ್ಯ ಖಂಡ್ರೆಯವರಿಗೆ ಮಾಡುವುದಿಲ್ಲ. ಆದರೆ ನಿಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ನೇರವಾಗಿ ಆಪಾದನೆ ಮಾಡುತ್ತೇನೆ, ಇದನ್ನು ಏತಕ್ಕೆ ಅನೌನ್ಸ್ ಮಾಡಿದಿರಿ ಎಂದು. ಪ್ಲಾನಿಂಗ್ ಕಮಿಷನ್‌ರವರು ನಮಗೆ ಡೈರೆಕ್ಷನ್ ಕೊಟ್ಟಿರುತ್ತಾರೆಂದು ನೀವು ಹೇಳುತ್ತಿದ್ದೀರಿ. ಪ್ಲಾನಿಂಗ್ ಕಮಿಷನ್‌ರವರು ೫ ವರ್ಷಗಳಲ್ಲಿ, ಪ್ಲಾನ್ ಪೀರಿಯಡ್‌ನಲ್ಲಿ ಫ್ಯಾರಾಮಿಟರ್ ಫಿಕ್ಸ್ ಮಾಡಿದ್ದಾರೆ. ನಿಮ್ಮ ಎಫಿಷಿಯನ್ಸಿ, ಫ್ಯೂಯಲ್ ಎಫಿಶಿಯನ್ಸಿ, ಟೈರ್ ಮೈಲೇಜ್, ವೆಹಿಕಲ್ ಯೂಟಿಲಿಟಿ, ಲೇಬರ್ ಉಪಯೋಗಿಸಿಕೊಳ್ಳತಕ್ಕಂಥ ಕ್ರಮ ಇದರ ಎಫಿಶಿಯನ್ಸಿ ಜಾಸ್ತಿ ಮಾಡಿ ಎಂದು ಹೇಳುತ್ತಾರೆ. ಅದಕ್ಕೆ ಅನುಗುಣವಾಗಿ ಕೇಂದ್ರ ಸರ್ಕಾರದವರು ಮ್ಯಾಚಿಂಗ್ ಗ್ರಾಂಟ್‌ನ್ನು ಕೊಡುತ್ತಾರೆ. ರಾಜ್ಯ ಸರ್ಕಾರದವರು ಮೂಲಬಂಡವಾಳಕ್ಕೆ ಏನು ಹಣವನ್ನು ಕೊಡುತ್ತೀರಿ, ಅದಕ್ಕೆ ಕೇಂದ್ರ ಸರ್ಕಾರದವರು ಕೂಡ ಮ್ಯಾಚಿಂಗ್ ಗ್ರಾಂಟನ್ನು ಕೊಡುತ್ತಾರೆ. ಆದ್ದರಿಂದ ಅವರು ನೀವು ಮಾಡಿ ಎಂದು ಹೇಳುತ್ತಾರೆ. ಆದರೆ ಪ್ಲಾನಿಂಗ್ ಕಮಿಷನ್‌ರವರು ಹೇಳಿರತಕ್ಕದ್ದರಲ್ಲಿ ಅರ್ಧ ನೀವು ಬಿಟ್ಟುಬಿಟ್ಟಿದ್ದೀರಿ. ಎಫಿಷಿಯನ್ಸಿ ಇಂಪ್ರೂವ್ ಮಾಡಲಿಕ್ಕೆ ಹೋಗಲಿಲ್ಲ. ಈಗ ಪ್ಲಾನಿಂಗ್ ಕಮಿಷನ್‌ರವರು ಜಾಸ್ತಿ ಮಾಡಲಿಕ್ಕೆ ಹೇಳಿದರು ಅದಕ್ಕೋಸ್ಕರ ಮಾಡಿದ್ದೇವೆ, ನಿಮ್ಮ ಕಾಲದಲ್ಲಿಯೂ ಮಾಡಿದ್ದೀರಿ ಎನ್ನತಕ್ಕಂಥ ಮಾತನ್ನು ಹೇಳಿದಿರಿ. ಹೌದು, ನಾವು ಮಾಡಿದ್ದೇವೆ. ಮಾಡಲಿಲ್ಲವೆಂದು ಹೇಳತಕ್ಕಂಥ ಮೂರ್ಖನಲ್ಲ. ಇಲ್ಲವೆಂದರೆ ಅದು ಸುಳ್ಳಾಗುತ್ತದೆ. ಮತ್ತೆ ಮಹರಾಷ್ಟ್ರದಲ್ಲಿ, ಆಂಧ್ರಪ್ರದೇಶದಲ್ಲಿ, ತಮಿಳುನಾಡಿನಲ್ಲಿ, ಕೇರಳದಲ್ಲಿ, ಗೋವಾದಲ್ಲಿ ಇಷ್ಟೇ ಬಸ್ ರೇಟ್ ಇದೆ ಎಂದು ಹೇಳಿದಿರಿ. ಮಾನ್ಯ ಅಧ್ಯಕ್ಷರೇ, ಮಾನ್ಯ ಸಾರಿಗೆ ಸಚಿವರಲ್ಲಿ ನಾನು ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನ. ' ದಯವಿಟ್ಟು ಬೇರೆ ರಾಜ್ಯಗಳಲ್ಲಿರತಕ್ಕಂಥ ದರಗಳನ್ನು ನೀವು ತರಿಸಿಕೊಳ್ಳಿ. it is not so, ಇವತ್ತು ತಮಿಳುನಾಡಿನಲ್ಲಿ ಇದಕ್ಕಿಂತ ದರ ಕಡಿಮೆ ಇದೆ. ಗೋವಾದಲ್ಲಿ ಕಡಿಮೆ ಇದೆ. ಇದಕಿಂತ ಜಾಸ್ತಿ ಎಪಿಶಿಯನ್ಸಿಯೆಂದಾಗಿ ಅವರು ರನ್ ಮಾಡುತ್ತಿರುವಾಗ ನೀವು ಏತಕ್ಕೆ ಮಾಡುವುದಕ್ಕಾಗುತ್ತಿಲ್ಲವೆಂದು ನನಗೆ ಅರ್ಥವಾಗುತ್ತಿಲ್ಲ. ಬಸ್ ಪ್ರಯಾಣದರವನ್ನು ೨೬ ಪರ್ಸೆಂಟ್ ಏರಿಸಿದ್ದೀರಿ. ಆಕ್ಚುಯಲ್ ರಿಯಲೈಸೇಷನ್ ಆಗುವುದು ಕೇವಲ ೧೫ ರಿಂದ ೧೬ ಪರ್ಸೆಂಟ್ ಅಷ್ಟೇ; ೨೬ ಪರ್ಸೆಂಟ್ ಆಗುವುದಿಲ್ಲ. ಏತಕ್ಕೆಂದರೆ ೧೦೦ ರೂಪಾಯಿ ಟಿಕೆಟ್ ಇದ್ದರೆ ೧೨೬ ರೂಪಾಯಿ ಮಾಡಿದ್ದೀರಿ. ಇದರಿಂದ ಫಿಲ್ಪರೇಜ್ ಅಮೌಂಟ್ ಜಾಸ್ತಿಯಾಗುತ್ತದೆ. ೧೦೦ ರೂಪಾಯಿ ಕದಿಯುವವನಿಗೆ ೧೨೬ ರೂಪಾಯಿ ಹೋಗುತ್ತದೆ. ಕಳ್ಳತನ ಜಾಸ್ತಿಯಾಗುತ್ತದೆಯೇ ಹೊರತು ಪ್ರಯಾಣಿಕರಿಗೆ ಏನೂ ಅನುಕೂಲ ಆಗುತ್ತಿಲ್ಲ. ಕೆಲವು ಪ್ರಯಾಣಿಕರಿದ್ದಾರೆ, ಅವರಲ್ಲಿ ಫೇಸ್ ಟು ಫೇಸ್ ಅಂಡರ್ ಸ್ಟ್ಯಾಂಡಿಂಗ್ ಇರುತ್ತದೆ, ೧೨೬ ರೂಪಾಯಿಗಳನ್ನು ಕೊಡುವುದಕ್ಕೆ ಬದಲಾಗಿ ೭೦ ರೂಪಾಯಿಗಳನ್ನು ಕೊಟ್ಟರೆ ಸಾಕೆಂದು ಮುಗಿಸಿಕೊಳ್ಳುತ್ತಾರೆ. ಇದರಿಂದ ಫಿಲ್ಪರೇಜ್ ಜಾಸ್ತಿಯಾಗುತ್ತದೆಯೇ ಹೊರತು ಫೇರ್ ರಿವಿಜನ್ ಮಾಡಿ ಜಾಸ್ತಿಮಾಡಿರುವುದರಿಂದ ನಿಮ್ಮ ಸಾರಿಗೆ ಸಂಸ್ಥೆಗೆ ಏನೂ ಪ್ರಯೋಜನವಾಗುವುದಿಲ್ಲ.

ಮತ್ತೊಂದು ವಿಷಯ ಬಹಳ ಜನರು ಹೇಳುತ್ತಾರೆ, ಈ ಸಮಯದಲ್ಲಿ ಮಾನ್ಯ ಬೈರೇಗೌಡರು ಇರಬೇಕಾಗಿತ್ತು. ಕೆ.ಎಸ್.ಆರ್.ಟಿ.ಸಿ.ಯನ್ನು ನ್ಯಾಷನ್‌ಲೈಸ್ ಮಾಡಬೇಕೆಂದು ಹೇಳುತ್ತಾರೆ. ನಾನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನ. ' ಇವರು ಏತಕ್ಕೆ ಈ ಮಾತನ್ನು ಹೇಳಿದರೋ ನನಗೆ ಅರ್ಥವಾಗುತ್ತಿಲ್ಲ. ಬಹಳ ಹೋರಾಟವನ್ನು ಮಾಡಿರತಕ್ಕವರು. ಇವತ್ತು ರಾಷ್ಟ್ರೀಕರಣವನ್ನು ಅರಾಷ್ಟ್ರೀಕರಣ ಮಾಡುವುದರಿಂದ ಮತ್ತು ಒಂದು ವ್ಯವಸ್ಥೆಯನ್ನು ಸುವ್ಯವಸ್ಥೆಗೆ ತೆಗೆದುಕೊಂಡು ಹೋಗತಕ್ಕಂಥ ಪ್ರಯತ್ನವಾಗುತ್ತದೆ. ನ್ಯಾಷನಲೈಸ್ ರೂಟ್ಸ್‌ನಲ್ಲಿ

ಏನಾಗಿದೆ ಎಂಬ ಬಗ್ಗೆ ನಿಮಗೆ ಹೇಳುತ್ತೇನೆ. ಕಳೆದ ಮೂರು, ನಾಲ್ಕು, ವರ್ಷಗಳಲ್ಲಿ ಎಲ್ಲಿ ಪ್ರಾಫಿಟ್ ಮೇಕಿಂಗ್ ರೂಟ್ಸ್ ಇದೆ ಎ.ಬಿ.ಸಿ. ಎಂದು ಮೂರು ರೂಟ್ಸ್ ಇದೆ. 'ಎ' ರೂಟ್ ಎಂದರೆ ಒಂದು ಕಿಲೋಮೀಟರ್‌ಗೆ ೮-೯ ರೂಪಾಯಿ ಅರ್ನ್ ಮಾಡತಕ್ಕಂಥದ್ದು. ಬಿ. ರೂಟ್ ಎಂದರೆ ಪ್ರಾಫಿಟ್ ಲಾಸ್ ಆಗದೆ ಇರತಕ್ಕಂಥದ್ದು. ಸಿ. ರೂಟ್ ಎಂದರೆ ಲೂಸಿಂಗ್ ರೂಟ್ ಈ 'ಸಿ' ರೂಟ್ ಹಾಗೆಯೇ ಇದೆ, 'ಬಿ' ರೂಟ್ ಹಾಗೆಯೇ ಇದೆ. ಎ ರೂಟ್ಸ್ ಪ್ರಾಫಿಟ್ ಮೇಕಿಂಗ್ ಅರ್ನಿಂಗ್ ರೂಟ್ಸ್ ಏನಿವೆ ಅಲ್ಲಿ ಅದೇ ಟೈಮಿಂಗ್ಸ್‌ಗೆ ಖಾಸಗಿಯವರಿಗೆ ಎಸ್.ಟಿ.ಎಲ್. ನಿಂದ ಟೆಂಪರರಿ ಪರ್ಮಿಟ್ ಕೊಡಿಸಿದ್ದೀರಿ. ಎಲ್ಲೆಲ್ಲಿ 'ಎ' ರೂಟ್‌ಗಳಲ್ಲಿ ಓಡಾಡುತ್ತವೆ ಅದೇ ಟೈಮಿಂಗ್ಸ್‌ಗೆ ಖಾಸಗಿಯವರಿಗೆ ಪರ್ಮಿಟ್ ಕೊಡಿಸಿದ್ದೀರಿ. ಇರತಕ್ಕಂಥ ೧೦೦೦ ರೂಟ್ಸ್‌ನಲ್ಲಿ ಎಲ್ಲಿ ಆದಾಯ ಬರುತ್ತದೆ ಆ ರೂಟ್ಸ್‌ಗಳನ್ನು ಖಾಸಗಿಯವರಿಗೆ ಕೊಟ್ಟರೆ ಹೇಗೆ ಆದಾಯ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂದು ದಯವಿಟ್ಟು ಹೇಳಿ. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷಗಳಾಯಿತು. ರೆವಿನ್ಯೂ ಇಂಪ್ರೂವ್ ಮಾಡಲಿಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ. ನಾನು ಒಂದು ಸಿಸ್ಟಮನ್ನು ಇಂಟ್ರಡ್ಯೂಸ್ ಮಾಡಿದ್ದೆ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ ತಾವು ಬೆಳಗಾಂ ಜಿಲ್ಲೆಯವರು ಮಾನ್ಯ ಶ್ರೀ ಮೊರಾರ್ಜಿ ದೇಸಾಯಿಯವರು ಮುಂಬೈ ಪ್ರಾಂತ್ಯದ ಮುಖ್ಯಮಂತ್ರಿಗಳಾಗಿದ್ದಾಗ ರಾಷ್ಟ್ರೀಕರಣ ಮಾಡಿದ್ದರು. ಆ ಸಂದರ್ಭದಲ್ಲಿ ಅವರು ಪಾರ್ಸಲ್ ಸಿಸ್ಟಮ್‌ನ್ನು ಇಂಟ್ರಡ್ಯೂಸ್ ಮಾಡಿದ್ದರು. ಅದರಂತೆ ನಾವು ಕೆ.ಎಸ್.ಆರ್.ಟಿ.ಸಿ. ಬಸ್‌ನಲ್ಲಿ ಪಾರ್ಸಲ್ ಸಿಸ್ಟಮ್‌ನ್ನು ಇಂಟ್ರಡ್ಯೂಸ್ ಮಾಡತಕ್ಕಂಥ ಕ್ರಮವನ್ನು ತೆಗೆದುಕೊಂಡಿದ್ದೆವು. ಅದು ರಾಜ್ಯಪಾಲರ ಆಡಳಿತದಲ್ಲೋ, ನಿಮ್ಮ ಆಡಳಿತದಲ್ಲೋ ಗೊತ್ತಿಲ್ಲ, ಆ ಸಿಸ್ಟಮ್‌ನ್ನು ಸಂಪೂರ್ಣವಾಗಿ ರದ್ದು ಮಾಡಿದರು.

೧.೩೫ ಪಿ.ಎಂ.

ಅದನ್ನು ಮಾಡುವುದಕ್ಕಾಗುವುದಿಲ್ಲ ಎಂದು ಅಧಿಕಾರಿಗಳು ನಿಮಗೆ ರೆಡಿಮೇಡ್ ಅನ್ಸರ್ ಕೊಡುತ್ತಾರೆ. ಪಾರ್ಸಲ್ ಸಿಸ್ಟಂ ಇಂಟ್ರಡ್ಯೂಸ್ ಮಾಡುವುದರಿಂದ ಇದೇ ಬಸ್ಸುಗಳಲ್ಲಿ ಇದೇ ಸ್ಟ್ಯಾಫ್ ಇಟ್ಟುಕೊಂಡು ವರ್ಷಕ್ಕೆ ೫ ಕೋಟಿ ರೂಪಾಯಿ ಮಿನಿಮಂ ಪ್ರಾಫಿಟ್ ಗಳಿಸಬಹುದು. ಆದರೆ ಇವರು ಏತಕ್ಕೆ ಮಾಡುವುದಕ್ಕೆ ಹೋಗುವುದಿಲ್ಲ. ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳು ಮಾಡುವುದಿಲ್ಲ. ನಾನು ಈ ಸಂದರ್ಭದಲ್ಲಿ ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಡಬೇಕೆಂದಿದ್ದೇನೆ. ನಾನು ಕೂಡ ಸಾರಿಗೆ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ನನಗೆ ವಿರೋಧ ಪಕ್ಷದಲ್ಲಿದ್ದರೂ ಜವಾಬ್ದಾರಿ ಇದೆ, ಸಾರಿಗೆ ಸಂಸ್ಥೆ ಬಗ್ಗೆ ಅಭಿಮಾನ ಇದೆ. ಆ ಸಂಸ್ಥೆ ಬೆಳೆಯಬೇಕೆಂಬ ಆಸೆ ಇದೆ. ಆ ಸಂಸ್ಥೆಯನ್ನು ಹಾಳು ಮಾಡಬೇಕೆಂದು ಹೇಳತಕ್ಕವನಲ್ಲ. ಸಾರಿಗೆ ಸಂಸ್ಥೆಯಲ್ಲಿರತಕ್ಕ ಕಾರ್ಮಿಕರನ್ನು ದೂಷಣೆ ಮಾಡುತ್ತಾರೆ. ಆ ರೀತಿ ನಾನು ಮಾಡುವುದಕ್ಕೆ ತಯಾರಿಲ್ಲ. ಸಾರಿಗೆ ಸಂಸ್ಥೆಯಲ್ಲಿರತಕ್ಕ ೬೦ ಸಾವಿರ ಜನ ಕಾರ್ಮಿಕರ ಪೈಕಿ ೪೦-೫೦ ಸಾವಿರ ಜನ ಒಳ್ಳೆಯ ಕಾರ್ಮಿಕರು ಇದ್ದಾರೆ. ದಕ್ಷ ಅಧಿಕಾರಿಗಳು ಇದ್ದಾರೆ. ಅವರಿಂದ ಯಾವ ರೀತಿ ಕೆಲಸ ಮಾಡಿಸಿಕೊಳ್ಳುತ್ತೀರಿ ಎಂಬುದು ಮುಖ್ಯ. ಕುದುರೆ ಸವಾರಿ ಮಾಡುವುದಕ್ಕೆ ಸವಾರ ಬಹಳ ಮುಖ್ಯ. ಕುದುರೆಯಷ್ಟೇ ಸವಾರ ಮುಖ್ಯ. ಆದರೆ ಸವಾರ ಸರಿ ಇಲ್ಲ. ನೀವು ಕಾರ್ಪೊರೇಷನ್ ಡಿವೈಡ್ ಮಾಡಿ, ಕೆ.ಎಸ್.ಆರ್.ಟಿ.ಸಿ.ಯನ್ನು ೪ ಭಾಗ ಮಾಡಿ. ಮುಂಬೈ ಕರ್ನಾಟಕಕ್ಕೆ ಒಂದು ಮಾಡಿ, ಹೈದರಾಬಾದ್ ಕರ್ನಾಟಕಕ್ಕೆ ಒಂದು ಮಾಡಿ, ಬೆಂಗಳೂರು ಸಿಟಿಗೆ ಒಂದು ಮಾಡಿ, ಮೈಸೂರು ಕಡೆ ಒಂದು ಮಾಡಿ ಹೀಗೆ ೪ ಡಿವಿಜನ್‌ಗಳನ್ನು ಮಾಡಿ. ಅಷ್ಟೇ ಅಲ್ಲ, ಬಿ.ಟಿ.ಎಸ್. ಅನ್ನು ಮುಂಚೆ ಕೆ.ಎಸ್.ಆರ್.ಟಿ.ಸಿ.ಯಿಂದ ಡಿವೈಡ್ ಮಾಡಿ. ಡೆಲ್ಲಿಯಲ್ಲಿ ಡೆಲ್ಲಿ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ ಇದೆ, ಮುಂಬೈಯಲ್ಲಿ ಮುಂಬೈ ಟ್ರಾನ್ಸ್‌ಪೋರ್ಟ್ಸ್ ಕಾರ್ಪೋರೇಷನ್ ಇದೆ. ಮದ್ರಾಸಿನಲ್ಲಿ ಪಲ್ಲವನ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ ಇದೆ. ಇವರೇನು ಮಾಡುತ್ತಿದ್ದಾರೆ ಎಂದರೆ, ಸಿಟಿಗೆ ಒಂದು ಫೇರ್ ಸ್ಟ್ರಕ್ಚರ್

ಇರುತ್ತದೆ, ರೂರಲ್‌ಗೆ ಒಂದು ಫೇರ್ ಸ್ಟ್ರಕ್ಚರ್ ಇರುತ್ತದೆ. ಡೆಲ್ಲಿ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ ಕೇಂದ್ರ ಸರ್ಕಾರದಿಂದ ಸುಮಾರು ೫೦-೬೦ ಕೋಟಿ ರೂಪಾಯಿ ಪ್ರತಿ ವರ್ಷ ಮ್ಯಾಚಿಂಗ್ ಗ್ರಾಂಟ್ ಕೊಡುತ್ತಿದ್ದಾರೆ. ಬಾಂಬೆಯಲ್ಲಿ ಎಲೆಕ್ಟ್ರಿಸಿಟಿ ಮಾರಾಟ ಮಾಡುತ್ತಿದ್ದಾರೆ. ಅದರಿಂದ ಬಂದಂಥ ಲಾಭವನ್ನು ನಗರ ಸಾರಿಗೆಗೆ ಉಪಯೋಗಿಸುತ್ತಾರೆ. ಬಿ.ಟಿಎಸ್.ನ್ನು ಸಪರೇಟ್ ಮಾಡಬೇಕೆಂದು ನಾನು ಕ್ರಮ ತೆಗೆದುಕೊಂಡಿದೆ. ಕೆಲವು ಕಾರ್ಮಿಕ ಮುಖಂಡರು ಇದ್ದಾರೆ; ಕಾರ್ಮಿಕರಲ್ಲ ಕಾರ್ಮಿಕರನ್ನು ನಾನು ಮತ್ತೊಮ್ಮೆ ಹೊಗಳುತ್ತಿದ್ದೇನೆ. ನಮ್ಮ ಸಾರಿಗೆ ಸಂಸ್ಥೆಯಲ್ಲಿ ಒಳ್ಳೆಯ ಕಾರ್ಮಿಕರು ಇದ್ದಾರೆ. ಆದರೆ ಕೆಲವು ಕಾರ್ಮಿಕ ಮುಖಂಡರು ಇದಕ್ಕೆ ಅವಕಾಶ ಕೊಡುವುದಿಲ್ಲ. ಅವರು ಇದರಲ್ಲಿ ತಮ್ಮ ಪ್ರತಿಷ್ಠೆಯನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ತಾವು ದೊಡ್ಡ ವ್ಯಕ್ತಿಗಳು ಎಂದು ಹೇಳಿಕೊಳ್ಳುವುದಕ್ಕೆ ನಿಮಗೆ ಅವಕಾಶ ಕೊಡುವುದಿಲ್ಲ. ನಿಮ್ಮ ಸರ್ಕಾರ ಒಳ್ಳೆಯ ಕೆಲಸ ಮಾಡುತ್ತದೆಂದರೆ ಮೊದಲು ಬಿ.ಟಿ.ಎಸ್.ನ್ನು ಕೆ.ಎಸ್.ಆರ್.ಟಿ.ಸಿ.ಯಿಂದ ಪ್ರತ್ಯೇಕ ಮಾಡಿ. ನಾವು ಹಿಂದೆ ಒಂದು ಕ್ರಮ ತೆಗೆದುಕೊಂಡಿದ್ದೆವು ವಯಸ್ಸಾದವರಿಗೆ ಪಾಸ್ ಸಿಸ್ಟಂ ಅನ್ನು ಇಂಟ್ರಡ್ಯೂಸ್ ಮಾಡಿದ್ದೆವು. ಏತಕ್ಕೆ ಇಂಟ್ರಡ್ಯೂಸ್ ಮಾಡಿದ್ದೆವೆಂದರೆ, ಎಲ್ಲಾ ಸಿಟಿ ಕಾರ್ಪೋರೇಷನ್‌ಗಳಲ್ಲಿ ಪೀಕ್ ಅವರ್ ಎಂದು ಇರುತ್ತದೆ ಬೆಳಿಗ್ಗೆ ೯ ರಿಂದ ೧೧ ಮತ್ತು ಸಂಜೆ ೪ ರಿಂದ ೭ರವರೆಗೆ. ಈ ಪೀಕ್ ಅವರ್ ಬಿಟ್ಟು ೧೧ ರಿಂದ ೪ರ ವರೆಗೆ ಲೀಸ್ ಅವರ್ಸ್‌ನಲ್ಲಿ ಪ್ರಯಾಣಿಕರು ಹೆಚ್ಚು ಇರುವುದಿಲ್ಲ, ಖಾಲಿ ಬಸ್ ಹೋಗುತ್ತದೆ ಆಟೈಮಿನಲ್ಲಿ ಮಾತ್ರ ೬೦ ವರ್ಷ ದಾಟಿದವರಿಗೆ ರಿಯಾಯಿತಿ ನೀಡಿದ್ದೆವು. ಆ ಒಂದು ಕಾನ್ಸೆಪ್ಟ್ ಈಗಿರತಕ್ಕ ಅಧಿಕಾರಿಗಳಿಗೆ ಇಲ್ಲ. ಅದನ್ನು ತೆಗೆದು ಹಾಕಿದರು. ವಿದ್ಯಾರ್ಥಿಗಳ ಮೇಲೆ ಇಲ್ಲದ ಆರೋಪಣೆ ಮಾಡುತ್ತಾರೆ. ಹತ್ತು ಲಕ್ಷ ಪಾಸುಗಳನ್ನು ಇಶ್ಯೂ ಮಾಡಿದ್ದೇವೆ, ಅದಕ್ಕೆ ೮೦ ಕೋಟಿ ರೂಪಾಯಿ ಖರ್ಚಾಗುತ್ತದೆಂದು ಹೇಳುತ್ತಾರೆ. ಆದರೆ ನಾನು ಹೇಳುತ್ತೇನೆ, ಇವರು ಇಶ್ಯೂ ಮಾಡತಕ್ಕದ್ದು ಕೇವಲ ೪ ರಿಂದ ೫ ಲಕ್ಷ ಪಾಸ್‌ಗಳು. ಇವರು ಸುಳ್ಳು ಅಂಕಿಅಂಶ ಕೊಡುತ್ತಿದ್ದಾರೆ. ಇವರು ಎಲ್ಲೆಲ್ಲಿ ಸಿಟಿ ಪಾಸ್‌ಗಳನ್ನು ಕೊಟ್ಟಿದ್ದಾರೆಂದರೆ, ಬೆಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಬೆಳಗಾಂ ಸಿಟಿಗಳಲ್ಲಿ ಮಾತ್ರ. ವಿದ್ಯಾರ್ಥಿಗಳು ಒಂದು ದಿನಕ್ಕೆ ೭೦ ಕಿಲೋಮೀಟರ್ ಏತಕ್ಕೆ ಪ್ರಯಾಣ ಮಾಡುತ್ತಾರೆ? ೭-ಅನೇ ತರಗತಿಯಲ್ಲಿ ಮತ್ತು ಹೈಸ್ಕೂಲ್‌ನಲ್ಲಿ ಓದುವವರು ಹೆಚ್ಚೆಂದರೆ ೧೦ ಕಿಲೋಮೀಟರ್ ಹೋಗುತ್ತಾರೆ. ಕೆ.ಎಸ್.ಆರ್.ಟಿ.ಸಿ.ಗೆ ಬರ್ಡನ್ ಆಗುವುದು ಇವರ ಇನ್‌ಎಫಿಷಿಯನ್ಸಿಯಿಂದ. ಕರಪ್ಷನ್ ಮುಚ್ಚುವುದಕ್ಕೆ ಏನು ಹೇಳುತ್ತಿ ದ್ದಾರೆಂದರೆ, ೮೦ ಕೋಟಿ ರೂಪಾಯಿ ಬರ್ಡನ್ ಆಗಿದೆ. ಜನತಾ ಸರ್ಕಾರ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಬಸ್ ಪಾಸ್ ಕೊಟ್ಟರು ಎಂದು ಹೇಳುತ್ತಾರೆ. ಇದರಿಂದ ಸಾರಿಗೆ ಸಂಸ್ಥೆಗೆ ಬರ್ಡನ್ ಆಗತಕ್ಕದ್ದು ಕೇವಲ ೨೦ ಕೋಟಿ ರೂಪಾಯಿಗಳು ಮಾತ್ರ, ಅದಕ್ಕಿಂತ ಹೆಚ್ಚೇನೂ ಆಗುವುದಿಲ್ಲ. ಇನ್ನು ಪ್ರೈವೇಟ್ ಬಸ್‌ಗಳ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಶೇಕಡ ೪೦ ರಷ್ಟು ಟ್ರಾನ್ಸ್‌ಪೋರ್ಟ್ ಸಿಸ್ಟಂ ಪ್ರೈವೇಟ್‌ನವರ ಹತ್ತಿರ ಇದೆ. ೬೦-೭೦ ಪರ್ಸೆಂಟ್ ಕೆ.ಎಸ್.ಆರ್.ಟಿ.ಸಿ.ಯವರ ಹತ್ತಿರ ಇದೆ. ಬೀದರ್, ಗುಲ್ಬರ್ಗಾ, ರಾಯಚೂರು ಭಾಗಗಳಲ್ಲಿ ರಾಷ್ಟ್ರೀಕರಣವಾಗಿದ್ದರೆ ದಾವಣಗೆರೆ ಚಿತ್ರದುರ್ಗ ಇನ್ನೂ ನ್ಯಾಷನಲೈಸ್ ಆಗಿರಲಿಲ್ಲ. ಅದನ್ನು ಮಾಡಿದ್ದು ತಮಗೆ ಗೊತ್ತಿದೆ. ಮಾನ್ಯ ರಂಗನಾಥ್ ಅವರಿಗೂ ಗೊತ್ತಿದೆ. ಆ ಸಂರ್ಭದಲ್ಲಿ ನನ್ನ ಮೇಲೆ ಬಹಳ ಒತ್ತಡಗಳು ಬಂದರೂ ನಾನು ಮಣಿಯಲಿಲ್ಲ. ಅದನ್ನೆಲ್ಲ ಮಾಡಿದೆವು. ಹಾಗೆಂದು ಪ್ರೈವೇಟ್ ಬಸ್ ಆಪರೇಟರ್ಸ್ ಅನ್ನು ಎಲ್ಲಾ ಓಡಿಸಬೇಕೆಂದು ನಾನು ಹೇಳುವುದಿಲ್ಲ. ಇವತ್ತು ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅವರು ಇದ್ದಾರೆ. ಒಳ್ಳೆಯ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಅವರಿಗೆ ನಾವು ಡಿಸ್ಟರ್ಬ್ ಮಾಡತಕ್ಕ ಅಗತ್ಯ ಇಲ್ಲ; ಅವರು ನಡೆಸಿಕೊಂಡು ಹೋಗಲಿ. ಆದರೆ ನಾನು ನಿಮಗೆ ಹೇಳುತ್ತಿದ್ದೇನೆ. ಪ್ರೈವೇಟ್ ಬಸ್‌ನವರಿಗೆ ಎಲ್ಲೆಲ್ಲಿ ಎನ್‌ಕರೇಜ್ ಮಾಡಬಾರದು ಎಂದರೆ ಕ್ಯಾಂಡಿಸ್ಟೈನ್ ಆಪರೇಷನ್ ನಾವು ಮಾಡಬಾರದು. ಕ್ಯಾಂಡಿಸ್ಟೈನ್ ಆಪರೇಷನ್ ಎನ್‌ಕರೇಜ್ ಮಾಡಬೇಡಿ. ನಾನು ನಿಮಗೆ

ಒಂದು ವಿಚಾರವನ್ನು ಹೇಳುತ್ತೇನೆ. ಸಾಯಂಕಾಲ ೭ ಗಂಟೆ ಆದ ಮೇಲೆ ಸುಭಾಶ್‌ನಗರ ಬಸ್ ಸ್ಟಾಂಡಿಗೆ ಹೋಗಿ. ಎಲ್ಲೆಲ್ಲಿ ಕೆ.ಎಸ್.ಆರ್.ಟಿ.ಸಿ. ಲಾಂಗ್ ರೂಟ್ ಬಸ್ ಹಾಕಿದ್ದಾರೆ ಅಲ್ಲೆಲ್ಲ ಪ್ರೈವೇಟ್‌ನವರೂ ಬಸ್ ಹಾಕಿದ್ದಾರೆ. ಒಂದು ಬಸ್‌ನ್ನು ಕೂಡ ನಾನು ಬಿಟ್ಟಿರಲಿಲ್ಲ. ಒಂದು ಬಸ್ ಕೂಡ ಸುಭಾಶ್‌ನಗರದ ನಿಲ್ದಾಣದ ಸುತ್ತ ನಿಲ್ಲುವುದಕ್ಕೆ ನಾನು ಅವಕಾಶ ಕೊಟ್ಟಿರಲಿಲ್ಲ. ಅವರಿಗೆ ಪರ್ಮಿಟ್ ಇರುವುದಿಲ್ಲ. ಅವರು ಬಸ್‌ಗಳನ್ನು ಓಡಿಸುತ್ತಾರೆ. ಹೀಗಾದರೆ ನಮ್ಮ ಸಾರಿಗೆ ಸಂಸ್ಥೆಯವರು ಪ್ರಾಫಿಟ್ ಮಾಡುವುದಕ್ಕೆ ಹೇಗಾಗುತ್ತದೆ? ನಾನು ಪ್ರಾರಂಭದಲ್ಲಿಯೇ ಹೇಳಿದೆ. ಎಲ್ಲೆಲ್ಲಿ 'ಎ' ರೂಟ್ಸ್, ಅರ್ನಿಂಗ್ ರೂಟ್ಸ್ ಇದೆ ಅಲ್ಲೆಲ್ಲ ನೀವು ಖಾಸಗಿಯವರಿಗೆ ಟೆಂಪರರಿ ಪರ್ಮಿಟ್ ಕೊಟ್ಟಿದ್ದೀರಿ ಅಥವಾ ಫಾಲ್ಸ್ ಪರ್ಮಿಟ್ ತೆಗೆದುಕೊಂಡು ಅವರು ಓಡಿಸುತ್ತಾರೆ. ಅದರ ಮೇಲೆ ನೀವು ಕ್ರಮ ತೆಗೆದುಕೊಳ್ಳಿ. ಇದರಿಂದ ತಮಗೆ ೧ ದಿವಸಕ್ಕೆ ೧೦ ಲಕ್ಷ ರೂಪಾಯಿ ಆದಾಯ ಬರುತ್ತದೆ. ಅದರ ಮೇಲೆ ನೀವು ಕ್ರಮ ತೆಗೆದು ಕೊಳ್ಳುವುದಕ್ಕೆ ತಯಾರು ಇಲ್ಲ. ಇನ್ನು ಆಕ್ಸಿಡೆಂಟ್ಸ್. ಇವರ ವರದಿ ಪ್ರಕಾರ ೧೯೯೮ನೇ ಇಸವಿಯಿಂದ ಆಕ್ಸಿಡೆಂಟ್ಸ್ ರೇಟ್ಸ್, ೯ ಸಾವಿರ ಬಸ್‌ಗಳು ಇದ್ದರೆ ೩ ಸಾವಿರ ಬಸ್‌ಗಳಿಗೆ ಆಕ್ಸಿಡೆಂಟ್ ಆಗಿದೆ. ಎಂದರೆ ೩ ಬಸ್‌ಗಳಲ್ಲಿ ೧ ಬಸ್ ಆಕ್ಸಿಡೆಂಟ್ ಆಗುತ್ತದೆ. ಅದರ ಅರ್ಥವೇನು? ಇದರಿಂದಾಗಿ ಸಾರಿಗೆ ಸಂಸ್ಥೆಗೆ ವರ್ಷಕ್ಕೆ ಆಕ್ಸಿಡೆಂಟ್ ಕಾಂಪನ್‌ಸೇಷನ್‌ನಿಂದ ೫ ರಿಂದ ೬ ಕೋಟಿ ರೂಪಾಯಿ ಲುಕ್ಸಾನು ಆಗುತ್ತಿದೆ. ವೆಹಿಕಲ್ ಡ್ಯಾಮೇಜ್, ರೋಡ್ ಡ್ಯಾಮೇಜ್‌ನ್ನು ನಾನು ಲೆಕ್ಕ ಹಾಕುವುದಕ್ಕೆ ಹೋಗುತ್ತಿಲ್ಲ. ಇದನ್ನೆಲ್ಲಾ ಕಡಿಮೆ ಮಾಡುವುದಕ್ಕೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಭೀಮಣ್ಣ ಖಂಡ್ರೆ:- ೯ ಸಾವಿರದಲ್ಲಿ ೩ ಸಾವಿರ ಬಸ್‌ಗಳು ಆಕ್ಸಿಡೆಂಟ್ ಆಗಿವೆ ಎಂದು ಹೇಳಿದಿರಿ. ಅದು ಯಾವ ಫಿಗರ್ಸ್?

SRI P.G.R. SINDHIA:- That is in a particular year. ಎಷ್ಟೊಂದು ಚೆನ್ನಾಗಿ ದುಡ್ಡು ಬರುವುದು, ಮೇವು ಇದೆ ಎಂದರೆ ಅಧಿಕಾರಿಗಳು ಅಲ್ಲಿಗೆ ಓಡಿಹೋಗುತ್ತಾರೆ. ಬಸ್ ಬಾಡಿಬಿಲ್ಡಿಂಗ್‌ನಲ್ಲಿ ಹೊಸ ಕಾನ್‌ಸೆಪ್ಟ್ ಬಂದಿದೆ. ಇಂಟಿಗ್ರೇಟೆಡ್ ಬಸ್ ಬಾಡಿ ಬಿಲ್ಡಿಂಗ್ ಎಂದು ಈಗಿರತಕ್ಕ ಪದ್ಧತಿ ಏನೆಂದರೆ, ಛಾಸಿ ತೆಗೆದುಕೊಂಡು ಅದರ ಮೇಲೆ ಬಾಡಿ ಕಟ್ಟತಕ್ಕದ್ದು. ಇಂಟಿಗ್ರೇಟೆಡ್ ಮಾದರಿ ಬಸ್ ಬಾಡಿ ಬಿಲ್ಡ್ ಮಾಡುವುದರಿಂದ ದೂರ ಪ್ರಯಾಣ ಮಾಡುವವರಿಗೆ ಕಮ್‌ಫರ್ಟ್ ಇರುತ್ತದೆ ಎಂದು ಹೇಳಿ ಅವತ್ತು ಎಂ.ಡಿ. ಆಗಿದ್ದ ಬಿ.ಆರ್. ಪ್ರಭಾಕರ್ ಅವರು ಒಳ್ಳೆಯ ಕೆಲಸ ಮಾಡಿದರು. ಅವರು one of the most efficient and honest officers, ಅವರಿಗೆ ಆ ಕ್ರೆಡಿಟ್ ಹೋಗಬೇಕು. ಯಾವುದೋ ಖಾಸಗಿ ಆಸ್ತಿ ೧೦ ಕೋಟಿ ರೂಪಾಯಿ ಬೆಲೆ ಬಾಳುತ್ತಿದ್ದದನ್ನು ಕೇವಲ ೯೦ ಲಕ್ಷ ರೂಪಾಯಿಗೆ ಈ ಸಾರಿಗೆ ಸಂಸ್ಥೆಗೆ ಕೊಟ್ಟರು. ಅಲ್ಲಿ ರೀಜನಲ್ ವರ್ಕ್ ಶಾಪ್ ಶಿಫ್ಟ್ ಆಗಬೇಕು, ೨ ಡಿಪೋ ಅಲ್ಲಿ ಮಾಡಬೇಕೆಂದು ಹೇಳಿ ಕೊಟ್ಟರು. ಆದರೆ ಒಬ್ಬರೂ ಸಹ ಅಲ್ಲಿಗೆ ಹೋಗಿಲ್ಲ. ಏಕೆಂದರೆ ಅಲ್ಲಿ ಮೇವು ಸಿಗುವುದಿಲ್ಲ. ಇವತ್ತೂ ಕೂಡ ಕೆಂಗೇರಿಯ ಇಂಟಿಗ್ರೇಟೆಡ್ ಬಾಡಿ ಬಿಲ್ಡಿಂಗ್ ಕಾನ್‌ಸೆಪ್ಟ್‌ನ್ನು ಮರೆತಿದ್ದಾರೆ. ಮಾನ್ಯ ಅಧ್ಯಕ್ಷರೇ, ನಾನು ಮಾತನಾಡತಕ್ಕ ಸಂದರ್ಭದಲ್ಲಿ ಮಾನ್ಯ ದೇಶಪಾಂಡೆಯವರು ಒಂದು ಮಾತು ಹೇಳಿದ್ದಾರೆ. ೨೬ ಪರ್ಸೆಂಟ್ ಏನು ಏರಿಸಿದ್ದೀರಿ ಅದನ್ನು ಕಡಿಮೆ ಮಾಡಬೇಕೆಂದು ಹೇಳಿದ್ದಾರೆ. ಸಂಪೂರ್ಣವಾಗಿ ಅದನ್ನು ರದ್ದು ಮಾಡಿ ವಾಪಸ್ಸ್ ತೆಗೆದು ಕೊಳ್ಳಬೇಕೆಂದು ಅವರು ಹೇಳಿದರು. ನಾನು ಹೇಳುತ್ತೇನೆ. ತಾವು ವಾಪಸ್ಸ್ ತೆಗೆಯಿರಿ. ನಾನು ಈ ಸಂದರ್ಭದಲ್ಲಿ ಕೆಲವು ಸಲಹೆಗಳನ್ನು ತಮಗೆ ಕೊಡುತ್ತೇನೆ. ನಾನು ಕೊಡತಕ್ಕ ಅಂಕಿಅಂಶಗಳು ಏನಾದರೂ ತಪ್ಪು ಇದ್ದರೆ ನಾನು ನನ್ನ ವಿಧಾನಸಭೆ ಸದಸ್ಯತ್ವಕ್ಕೆ ಈಗ ರಾಜೀನಾಮೆ ಕೊಡುತ್ತೇನೆ. If you can prove it. ನಿಮಗೆ ಎಲ್ಲೋ ಮಿಸ್‌ಗೈಡ್ ಮಾಡಿದ್ದಾರೆ. I will resign my seat if my statistics

are wrong. ನೀವು ಒಂದು ಹೌಸ್ ಕಮಿಟಿ ಮಾಡಿ. ಯಾವ ರೀತಿ ಮಾಡಿದ್ದಾರೆಂದು ತಿಳಿದುಕೊಳ್ಳಿ. ನಾನು ೧೯೮೫ರಲ್ಲಿ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಸುಮಾರು ೨೧ ಅಥವಾ ೧೯ ಪರ್ಸೆಂಟ್ ಏರಿಕೆ ಮಾಡಿ ೧೬-೧೭ ಪರ್ಸೆಂಟ್ ರನ್ ಮಾಡುತ್ತಿದ್ದೆವು ಮತ್ತು ೧೩ ಪರ್ಸೆಂಟ್ ರಿಯಲೈಸೇಷನ್ ಆಗಿತ್ತು ೧೯೮೩ರಲ್ಲಿ ಎಂ.ಪಿ. ಪ್ರಕಾಶ್ ಅವರ್ ಮಂತ್ರಿಗಳಾಗಿದ್ದಾಗ ೧೬ ಪರ್ಸೆಂಟ್ ಜಾಸ್ತಿ ಮಾಡಿದ್ದೇವೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಮಾನ್ಯ ವಾಟಾಳ್ ನಾಗರಾಜ್ ರವರು ಆ ಮಾತನ್ನು ಹೇಳಬಹುದು. ಯಾವುದೇ ಸರ್ಕಾರ ಕೂಡ ಬಸ್ ಪ್ರಯಾಣದ ಬೆಲೆ ಕಡಿಮೆ ಮಾಡಿದ್ದು ಕಂಡಿಲ್ಲ ಎಂದರು. ನಾನು ಆ ಮಾತನ್ನು ಒಪ್ಪುತ್ತೇನೆ. ಅಂತಹ ಸರ್ಕಾರ ಬರಬೇಕು; ಬರುವುದು ಕಷ್ಟ ಇದೆ. ಈಗ ಅಲ್ಲಿನ ಕಾರ್ಮಿಕ ಮುಖಂಡರು ಒಂದು ವಾದವನ್ನು ಇಟ್ಟಿದ್ದಾರೆ. ನನ್ನ ಬಗ್ಗೆ ಬಹಳ ಕೆಟ್ಟದಾಗಿ ಮಾತನಾಡಿ ಪತ್ರಿಕಾ ಹೇಳಿಕೆ ಕೊಟ್ಟಿದ್ದಾರೆ. ಕೆಲವು ಕಾರ್ಮಿಕ ಮುಖಂಡರು, ಪಾಪ ಅವರಿಗೆ ಗೊತ್ತಿಲ್ಲ. ಅವರು ಸಾರಿಗೆ ಸಂಸ್ಥೆಯ ಒಳ್ಳೆಯ ಕಾರ್ಮಿಕರನ್ನು ತಪ್ಪುದಾರಿಗೆ ತೆಗೆದುಕೊಂಡು ಹೋಗುವುದಕ್ಕೂ ಪ್ರಯತ್ನ ಮಾಡುತ್ತಿದ್ದಾರೆ. ಅದು ಅಷ್ಟೇ ಅಲ್ಲ, ಇಡೀ ರಾಜ್ಯದ ಜನತೆ ಇವತ್ತು ಸಾರಿಗೆ ಸಂಸ್ಥೆಯ ಬಗ್ಗೆ ಬೇಸತ್ತಿದ್ದಾರೆ. ಆದಕ್ಕೆ ಕಾರಣ ಅಲ್ಲಿರತಕ್ಕ ಕೆಲವು ಕಾರ್ಮಿಕ ಮುಖಂಡರು, ಅವರನ್ನು ನೀವು ಹದ್ದುಬಸ್ತಿನಲ್ಲಿಡಬೇಕು. ಅವರಿಗೆ ಸಾರಿಗೆ ಸಂಸ್ಥೆಯ ಕೆಲವು ಅಧಿಕಾರಿಗಳು ಹೆದರುತ್ತಾರೆ. ಏಕೆಂದರೆ ಅವರದೆಲ್ಲ ಇವರಿಗೆ ಗೊತ್ತಿರುತ್ತದೆ. ರಾಜ್ಯಸರ್ಕಾರದವರು ಸಾರಿಗೆ ಸಂಸ್ಥೆಯಿಂದ ೧೭/೧/೨ ಪರ್ಸೆಂಟ್ ಟ್ಯಾಕ್ಸನ್ನು ತೆಗೆದುಕೊಳ್ಳುತ್ತಾ ಇದ್ದೀರಿ. ಅದನ್ನು ನಾವೇ ಮಾಡಿದ್ದುದು. ಖಾಸಗಿಯವರು ಎಷ್ಟು ಕೊಡುತ್ತಾರೆ ಎಂದರೆ ಅವರು ೧೧ ಪರ್ಸೆಂಟ್ ಟ್ಯಾಕ್ಸನ್ನು ಕೊಡುತ್ತಾರೆ. ಖಾಸಗಿಯವರು ಟ್ಯಾಕ್ಸ್ ಕೊಡುವುದನ್ನು ಅವಾಯ್ಡ್ ಮಾಡುತ್ತಾರೆ. ಖಾಸಗಿಯವರು ಫಿಟ್‌ನೆಸ್ ಸರ್ಟಿಫಿಕೇಟ್ ತೆಗೆದುಕೊಳ್ಳುವಾಗ ೩೫ ಸೀಟು ಎಂದು ಹೇಳಿ, ಫಿಟ್‌ನೆಸ್ ಸರ್ಟಿಫಿಕೇಟ್ ತೆಗೆದುಕೊಂಡು ಆಚೆ ಬಂದಮೇಲೆ ೫೫ ಸೀಟು ಎಂದು ಹೇಳುತ್ತಾರೆ. ಇವೆಲ್ಲಾ ನನಗೆ ಗೊತ್ತಿದೆ. ಮೋಟಾರ್ ವೆಹಿಕಲ್ಸ್ ಇನ್ಸ್‌ಪೆಕ್ಟರ್‌ನ್ನು ಬುಕ್ ಮಾಡಿಕೊಳ್ಳುತ್ತಾರೆ. ವೆಹಿಕಲ್ ಗ್ಯಾರೇಜ್‌ನಲ್ಲಿ ೧೫ ದಿನ ನಿಂತಿದೆಯೆಂದು ಹೇಳುತ್ತಾರೆ. ಆದರೆ ಸಾರಿಗೆ ಸಂಸ್ಥೆಯಲ್ಲಿ ನಾವು ೧೭ ಪರ್ಸೆಂಟ್ ಟ್ಯಾಕ್ಸ್ ಏತಕ್ಕೆ ಮಾಡಿದ್ದೇವೆಂದರೆ, ಆದಕ್ಕೆ ನಾನು ಉತ್ತರ ಕೊಡುತ್ತೇನೆ. ಸಾರಿಗೆ ಸಂಸ್ಥೆಯವರು ಒಂದು ವರದಿಯನ್ನು ಕೊಟ್ಟಿದ್ದಾರೆ. ೧೯೮೪-೮೫, ೧೯೮೫-೮೬ ಮತ್ತು ೧೯೮೬-೮೭ರಲ್ಲಿ ಮಾರ್ಜಿನಲ್ ಲಾಸಸ್ ಆಗಿದೆ ಎನ್ನತಕ್ಕ ಮಾತನ್ನು ಆ ವರದಿಯಲ್ಲಿ ಹೇಳಿದ್ದಾರೆ. ಮಾರ್ಜಿನಲ್ ಲಾಸಸ್ ಆದಂತಹ ಸಂದರ್ಭದಲ್ಲಿ ಕೇಂದ್ರಸರ್ಕಾರಕ್ಕೆ ರಾಜ್ಯ ಸರ್ಕಾರದಿಂದ ಇನ್‌ಕಂಟ್ಯಾಕ್ಸ್ ರೂಪದಲ್ಲಿ ಸಾರಿಗೆ ಸಂಸ್ಥೆಯವರು ಲಾಭವನ್ನು ತೋರಿಸಿಕೊಡಬೇಕಾಗುತ್ತದೆನ್ನುವ ಕಾರಣದಿಂದ ನಾವು ೧೧ ಪರ್ಸೆಂಟ್ ಟ್ಯಾಕ್ಸನ್ನು ೧೭/೧/೨ ಪರ್ಸೆಂಟ್ ಮಾಡಿದ್ದೇವೆ. ಅದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಮತ್ತೊಂದು ವಿಚಾರವಿದೆ, ಅದೇನೆಂದರೆ, ಪ್ರತಿ ಮೂರುವರ್ಷಕ್ಕೊಂದು ಸಾರಿ ಎಲ್ಲಾ ವೆಹಿಕಲ್ಸ್‌ಗೆ ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್‌ನಿಂದ ಫಿಟ್‌ನೆಸ್ ಸರ್ಟಿಫಿಕೇಟನ್ನು ತೆಗೆದುಕೊಳ್ಳಬೇಕಾಗುತ್ತದೆ. ಮೋಟಾರ್ ವೆಹಿಕಲ್ಸ್ ಇನ್ಸ್‌ಪೆಕ್ಟರ್‌ಗಳು ಫಿಟ್‌ನೆಸ್ ಸರ್ಟಿಫಿಕೇಟ್ ಕೊಡಲಿಕ್ಕೆ ಒಂದೊಂದು ಬಸ್‌ಗೆ ಒಂದು ತಿಂಗಳು, ಎರಡು ತಿಂಗಳು ಡಿಲೆ ಮಾಡುತ್ತಿದ್ದರು. ಸಾರಿಗೆ ಸಂಸ್ಥೆಯೂ ಕೂಡ ಸರ್ಕಾರಿ ಸಂಸ್ಥೆ, ಮೋಟಾರ್ ವೆಹಿಕಲ್ಸ್ ಇನ್ಸ್‌ಪೆಕ್ಟರ್‌ಗಳೂ ಸರ್ಕಾರದ ಅಧಿಕಾರಿಗಳು. ಆದರೆ ಫಿಟ್‌ನೆಸ್ ಸರ್ಟಿಫಿಕೇಟ್ ಕೊಡಲಿಕ್ಕೆ ಏಕೆ ಡಿಲೇ ಮಾಡಬೇಕು. ಅದಕ್ಕೋಸ್ಕರ ನಾನೇನು ಮಾಡಿದೆಯೆಂದರೆ, ಸಾರಿಗೆ ಸಂಸ್ಥೆಯ ಟೋಟಲ್ ಪ್ರಾಫಿಟ್‌ನಲ್ಲಿ ರೆವಿನ್ಯೂ ಏನು ಬರುತ್ತದೆಯಲ್ಲ ಆದಕ್ಕೆ ಒಬ್ಬ ಫ್ಲೀಟ್ ಒನರ್ ಎಂದು ಕನ್ಸೀಡರ್ ಮಾಡಿ ಪರ್ಸೆಂಟೇಜ್ ಆಫ್ ಟ್ಯಾಕ್ಸ್ ಫಿಕ್ಸ್ ಮಾಡಿದ್ದು ನಾನೇ. ಏಕೆಂದರೆ ಬಸ್ ಯುಟಿಲೈಸೇಷನ್ ಜಾಸ್ತಿಯಾಗುತ್ತದೆನ್ನುವ ಕಾರಣದಿಂದ ಮಾಡಿದ್ದೇನೆ. ಬಸ್ ಯುಟಿಲೈಸೇಷನ್ ಜಾಸ್ತಿಯಾಗುತ್ತದೆನ್ನುವ ಕಾರಣದಿಂದ ನಾವು ಮಾಡಿದ್ದನ್ನು ನಿಮಗೆ

ಹೇಳುತ್ತಿದ್ದೇನೆ. ನೀವು ಈಗ ಏನು ಹೇಳಿದ್ದೀರಿ ಎಂದರೆ ಈ ವರ್ಷ ೯೦ ಕೋಟಿ ರೂಪಾಯಿ ಲಾಸ್ ಆಗುತ್ತದೆ. ಆದ್ದರಿಂದ ನಾವು ಬೆಲೆಗಳನ್ನು ಜಾಸ್ತಿ ಮಾಡಬೇಕೆಂದು ಹೇಳಿದ್ದೀರಿ. ೧೭ ಪರ್ಸೆಂಟ್ ಟ್ಯಾಕ್ಸನ್ನು ೧೧ ಪರ್ಸೆಂಟ್‌ಗೆ ಇಳಿಸಿ. ನಾನು ನಿಮಗೆ ಸಲಹೆ ಕೊಡುತ್ತಿದ್ದೇನೆ. ಆದರಿಂದ ೬ ಪರ್ಸೆಂಟ್ ಕಡಿಮೆಯಾಗುತ್ತದೆ. ನಮ್ಮ ಟೋಟಲ್ ಟ್ರಾಫಿಕ್ ರೆವಿನ್ಯೂ ೫೦೦ ಕೋಟಿ ರೂಪಾಯಿ ವರ್ಷಕ್ಕೆ ಬರತಕ್ಕದ್ದು ಇದೆ. ೫೦೦ ಕೋಟಿ ರೂಪಾಯಿಯಲ್ಲಿ ೬ ಪರ್ಸೆಂಟ್ ಅಂದರೆ ೩೦ ಕೋಟಿ ರೂಪಾಯಿ ಸಾರಿಗೆ ಸಂಸ್ಥೆಗೆ ಉಳಿತಾಯವಾಗುತ್ತದೆ. ಅದನ್ನು ನೀವು ಮಾಡಿ. ಇವತ್ತು ಖಾಸಗಿಯವರಿಗೂ ಮತ್ತು ಸಾರಿಗೆ ಸಂಸ್ಥೆಯವರಿಗೂ ಇರತಕ್ಕ ವ್ಯತ್ಯಾಸವನ್ನು ದಯವಿಟ್ಟು ನೀವು ಅರ್ಥಮಾಡಿಕೊಳ್ಳಿ. ೩೦ ಕೋಟಿ ರೂಪಾಯಿ ಇದರಲ್ಲಿ ನಿಮಗೆ ಉಳಿತಾಯವಾಗುತ್ತದೆ, ಇದು ಒಂದಾಯಿತು. ಇನ್ನು ಎರಡನೇಯದು ಹೇಳುತ್ತೇನೆ, ತಾವೊಂದು ಹೇಳಿಕೆಯನ್ನು ಕೊಟ್ಟಿದ್ದೀರಿ, ಅದು ಪತ್ರಿಕೆಗಳಲ್ಲಿ ಬಂದಿದೆ. ಸಾರಿಗೆ ಸಂಸ್ಥೆಯಲ್ಲಿ ೨೧ ಪರ್ಸೆಂಟ್ ಸೋರಿಕೆ ಇದೆಯೆನ್ನತಕ್ಕ ಮಾತನ್ನು ಹೇಳಿದ್ದೀರಿ. ೫೦೦ ಕೋಟಿ ಯಲ್ಲಿ ೨೧ ಪರ್ಸೆಂಟ್ ಅಂದರೆ ೧೦೦ ಕೋಟಿ ರೂಪಾಯಿ ಸೋರಿಕೆ ಇದೆ ಎನ್ನತಕ್ಕ ಮಾತನ್ನು ಹೇಳಿದ್ದೀರಿ. ನನಗೆ ಗೊತ್ತಿರುವ ಹಾಗೆ, ೨೦ ಪರ್ಸೆಂಟ್ ಏನಾದರೂ ಸೋರಿಕೆ ಇದ್ದರೆ ನಿಜವಾಗಿಯೂ ಇದು ನಾವೆಲ್ಲ ತಲೆತಗ್ಗಿಸತಕ್ಕ ವಿಚಾರ. ಕೊನೆಯ ಪಕ್ಷ ಇದರಲ್ಲಿ ೧೦ ಪರ್ಸೆಂಟ್ ಸೋರಿಕೆಯಿದೆಯೆಂದು ನಾನು ಅಂದುಕೊಂಡಿದ್ದೇನೆ. "ಸಾರಿಗೆ ಸಂಪದ" ಎಂದು ಸಾರಿಗೆ ಸಂಸ್ಥೆಯವರು ಒಂದು ಮ್ಯಾಗಜಿನ್ ಹೊರಡಿಸುತ್ತಾರೆ. ಹಿಂದೆ ಅಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಂತಹ ಕೋದಂಡರಾಮಯ್ಯನವರು ಒಂದು ಪತ್ರವನ್ನು ಬರೆದಿದ್ದಾರೆ.

Mr. Kodandaramaiah:- one of the most efficient officers, ಅವರು ಸಾರಿಗೆ ಸಂಸ್ಥೆಯಲ್ಲಿ ೮ ರಿಂದ ೧೦ ಪರ್ಸೆಂಟ್ ಮಾತ್ರ ಸೋರಿಕೆ ಇದೆಯೆಂದು ಹೇಳಿದ್ದಾರೆ. ಸೋರಿಕೆಯ ಬಗ್ಗೆ ನಾವೇನು ಅಂದುಕೊಂಡಿದ್ದೇವೆ ಎಂದರೆ ಕಂಡಕ್ಟರ್ ಮತ್ತು ಡ್ರೈವರ್‌ಗಳು ಮಾತ್ರ ದುಡ್ಡು ತೆಗೆದುಕೊಳ್ಳುತ್ತಾರೆನ್ನುವ ಭಾವನೆ ಇದೆ. ಅದು ಸಂಪೂರ್ಣವಾಗಿ ಸರಿಯಲ್ಲ. ಸೋರಿಕೆ ಎಲ್ಲಿದೆಯೆಂದು ನಿಮಗೆ ಹೇಳುತ್ತೇನೆ. Where the political leadership has to act, that is very important. ಸೋರಿಕೆಯ ಪ್ರಾರಂಭ ಎಲ್ಲಿಯಾಗುತ್ತದೆಂದರೆ, ಬಸ್ ಡಿಪೋನಿಂದ ಒಳ್ಳೆಯ ರನ್ನಿಂಗ್ ಕಂಡೀಷನ್‌ನಲ್ಲಿರುವ ಬಸ್ ಕೊಡಬೇಕಾದರೆ ಅಲ್ಲಿರತಕ್ಕವನಿಗೆ ಒಂದು ಬಸ್ಸಿಗೆ ೨೦ ರೂಪಾಯಿ ಕೊಡಬೇಕು. ಯಾರು ಎಂದರೆ ಕಂಡಕ್ಟರ್, ಡ್ರೈವರ್‌ಗಳು.

ಈ ಬಸ್ಸುಗಳನ್ನು ತೊಳೆಯಬೇಕಲ್ಲ, ಅದಕ್ಕೆ ಕೊಡಬೇಕು. ನೀರು ಕೊಟ್ಟಿದ್ದೇವೆ, ಲೈಟ್ ಕೊಟ್ಟಿದ್ದೇವೆ. ಮೆಶಿನ್ ಎಲ್ಲಾ ಕೊಟ್ಟಿದ್ದೇವೆ. ಆದರೂ ಅವನು ತೊಳೆಯಬೇಕಾದರೆ ಒಂದು ಬಸ್ಸಿಗೆ ಹತ್ತು ರೂಪಾಯಿ ಕೊಡಬೇಕು. ಅಲ್ಲಿಗೆ ಮೂವತ್ತು ರೂಪಾಯಿ ಆಯಿತು. ಇನ್ನೊಂದು ಬಹಳ ಮುಖ್ಯವಾದದ್ದು, ಒಳ್ಳೆಯ ರೂಟು. ಕನಕಪುರದಿಂದ ತಿರುಪತಿಗೆ ಹೋಗಬೇಕಾದರೆ ಅಥವಾ ತುಮಕೂರಿನಿಂದ ಧರ್ಮಸ್ಥಳಕ್ಕೆ ಹೋಗಬೇಕಾದರೆ, ಈ ರೂಟ್ ಅಲಾಟ್ ಮಾಡಿದರೆ ಒಂದು ರೂಟ್‌ಗೆ ೫೦ ರೂಪಾಯಿ ಕೊಡಬೇಕು. ಆ ಮೇಲೆ ಚೆಕಿಂಗ್ ಸ್ಟಾಫ್ ಎಂದು ಇರುತ್ತದೆ. ಅವರಿಗೆ ಮೂವತ್ತು ರೂಪಾಯಿ ಕೊಡಬೇಕು. ಒಟ್ಟಾರೆ ಒಂದು ಬಸ್ಸಿಗೆ, ಒಂದು ದಿವಸಕ್ಕೆ ಈ ರೂಟು ಕೊಟ್ಟು ಡಿಪೋದಿಂದ ಹೊರಗಡೆಗೆ ಬಸ್ಸನ್ನು ತೆಗೆದುಕೊಂಡುಬರುವುದಕ್ಕೆ ೧೧೦ ರೂಪಾಯಿ ಆಗುತ್ತದೆ. ನಿಮ್ಮ ರಸ್ತೆಸಾರಿಗೆ ಸಂಸ್ಥೆಯಲ್ಲಿ ೯ ಸಾವಿರ ಬಸ್ಸುಗಳಿವೆ. ಈ ೯ ಸಾವಿರ ಬಸ್ಸುಗಳಿಗೆ ಪ್ರತಿದಿನ ಒಂದು ಬಸ್ಸಿಗೆ ೧೧೦ ರೂಪಾಯಿಯಂತೆ ಕೊಟ್ಟರೆ ಒಂದು ದಿವಸಕ್ಕೆ ೯ ಲಕ್ಷ ರೂಪಾಯಿ ಆಯಿತು. ಒಂದು ತಿಂಗಳಿಗೆ ೩ ಕೋಟಿ ಮತ್ತು ಒಂದು ವರ್ಷಕ್ಕೆ ೩೬ ಕೋಟಿ ರೂ. ಆಗುತ್ತದೆ. ಈ ಹಣವನ್ನು ತಿನ್ನುವವರು ಯಾರು? ಬರೇ ಡ್ರೈವರ್, ಕಂಡಕ್ಟರ್‌ಗಳು ಅಲ್ಲ. ಅಲ್ಲಿ ಡಿಪೋ ಮ್ಯಾನೇಜರ್ ಇರುತ್ತಾನೆ, ಟ್ರಾಫಿಕ್ ಆಫೀಸರ್

ಇರುತ್ತಾನೆ, ಡಿವಿಜನಲ್ ಕಂಟ್ರೋಲರ್ ಇರುತ್ತಾನೆ. ರೀಜನಲ್ ಮ್ಯಾನೇಜರ್ ಇರುತ್ತಾನೆ. ಅವರಿಗೆ ನೀವು ಯಾವ ಆಧಾರದ ಮೇಲೆ ಪೋಸ್ಟಿಂಗ್ಸ್ ಕೊಟ್ಟಿದ್ದೀರಿ? ಅಥವಾ ವ್ಯಾಪಾರ ಮಾಡಿಕೊಂಡಿದ್ದೀರಿ? ಇದು ಬಹಳ ಮುಖ್ಯವಾದ ಅಂಶ. ನೀವು ಡಿಪೋ ಮ್ಯಾನೇಜರ್, ಡಿವಿಜನಲ್ ಟ್ರಾಫಿಕ್ ಮ್ಯಾನೇಜರ್, ಟಿ.ಸಿ.ಗಳನ್ನು ಪೋಸ್ಟ್ ಮಾಡುವಾಗ ಅಲ್ಲಿ ನಿಮ್ಮ ರಾಜಕೀಯ ಶಕ್ತಿಯನ್ನು ತೋರಿಸಬೇಕು. ಅದು ಎಂ.ಡಿ.ಗೆ ಬಿಡಬೇಕು. ನೀವು ಯಾರನ್ನಾದರೂ ಹಾಕಿ ನಾವು ಅಡ್ಡಿಮಾಡುವುದಿಲ್ಲ ಎಂದು ಅವರಿಗೆ ಬಿಡಬೇಕು. ಶ್ರೀ ಎಚ್.ಕೆ. ವಿಶ್ವನಾಥ್ ಎನ್ನುವವರು ಇದ್ದರು. ಅವರ ತಂದೆ ಶಾಸಕರಾಗಿದ್ದರು. ಸಾರಿಗೆ ಸಂಸ್ಥೆಯಲ್ಲಿ ಅತ್ಯಂತ ಪ್ರಾಮಾಣಿಕ ಅಧಿಕಾರಿ ಎಂದರೆ ಎಚ್.ಕೆ. ವಿಶ್ವನಾಥ್. ಅವರು ಬಿ.ಟಿ.ಎಸ್.ನಂಥ ಲೂಸಿಂಗ್ ಕನ್ಸರ್ನ್‌ನ್ನು ಬಹುತೇಕ ಲಾಭದಾಯಕವಾದ ಮಟ್ಟಕ್ಕೆ ತೆಗೆದುಕೊಂಡು ಬಂದಿದ್ದರು. ಅವರನ್ನು ತೆಗೆದುಕೊಂಡುಹೋಗಿ ಹುಮ್ನಾಬಾದ್‌ನಲ್ಲಿ, ನೀರು ಇಲ್ಲದ ಜಾಗಕ್ಕೆ ಹಾಕಿದ್ದಾರೆ. ಅಲ್ಲಿ ಅವರಿಗೆ ಕೆಲಸವೇ ಇಲ್ಲ. ಅಲ್ಲಿ ಡ್ರೈವಿಂಗ್ ಟ್ರೈನಿಂಗ್ ಸ್ಕೂಲ್‌ಗೆ ಪೋಸ್ಟಿಂಗ್ ಕೊಟ್ಟಿದ್ದಾರೆ.

ಶ್ರೀ ಸಿ. ಬೈರೇಗೌಡ:- ಅಷ್ಟೇ ಅಲ್ಲ ನಮ್ಮ ಕೋಲಾರ್ ಡಿವಿಜನ್‌ನಲ್ಲಿ ಒಬ್ಬ ಅಧಿಕಾರಿ, ಅವರ ಹೆಸರನ್ನು ಮರೆತಿದ್ದೇನೆ. ಯಾರೋ ಒಬ್ಬರನ್ನು ಪೋಸ್ಟ್ ಮಾಡಿದ್ದರು. ಅವರ ಅವಧಿಯಲ್ಲಿ ಹಿಂದೆ ಯಾವತ್ತೂ ಬಾರದಿರುವಂಥ ಆದಾಯ ಬರುವ ಪರಿಸ್ಥಿತಿ ಬಂತು. ತಕ್ಷಣ ಬೆಂಗಳೂರಿನಿಂದ ಆಜ್ಞೆ ಹೋಯಿತು, ಅತನನ್ನು ತೆಗೆಯಬೇಕೆಂದು ಎಂದು. ಕೂಡಲೇ ಗೆರೆಸೊಪ್ಪಕ್ಕೆ ಅವರನ್ನು ವರ್ಗಮಾಡಲಾಯಿತು. ಅಲ್ಲಿ ಏನು ನೀರು ಆಳಕ್ಕೆ ಧುಮುಕುತ್ತದೆ, ಅಷ್ಟು ಆಳಕ್ಕೆ ಈ ವ್ಯವಸ್ಥೆ ಬಿದ್ದುಹೋಗಿದೆ. ಇದು ನಡೆಯುತ್ತಾ ಇರತಕ್ಕಂಥಾದ್ದು. ಯಾರೋ ಮಾಡಿರತಕ್ಕಂಥ ಪಾಪಕ್ಕೆ ಪ್ರಯಾಣಿಕರ ಮೇಲೆ ಸುಂಕ ಹಾಕುತ್ತಿದ್ದೀರಿ. ಅವರನ್ನು ಬಲಿ ಕೊಡುತ್ತಿದ್ದೀರಿ. ಇದು ಬೇಡವೆಂದು ನಾವು ಹೇಳತಕ್ಕದ್ದು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈ ರೀತಿ ನೂರಾರು ಉದಾಹರಣೆಗಳನ್ನು ನಾನು ಕೊಡಬಲ್ಲೆ. ಇಲ್ಲಿ ಒಂದು ಉದಾಹರಣೆಯನ್ನು ಮಾತ್ರ ಕೊಟ್ಟಿದ್ದೇನೆ. ಶ್ರೀ ಸಿ. ಬೈರೇಗೌಡರು ಹೇಳಿದ್ದುದು ಸತ್ಯವಾದ ಮಾತು. ಅದರ ಬಗ್ಗೆ ಕ್ರಮ ತೆಗೆದುಕೊಂಡರೆ ನಿಮಗೆ ವರ್ಷಕ್ಕೆ ಏನಿಲ್ಲವೆಂದರೂ ಎಷ್ಟು ಉಳಿತಾಯವಾಗುತ್ತದೆ ಎಂದು ಲೆಕ್ಕಾಚಾರ ಹಾಕಿದ್ದೇನೆ. ಈ ಚೆಕಿಂಗ್ ಸ್ಕ್ವಾಡ್ ಎಂದು ಏನಿದೆ, ಅದನ್ನು ದಯವಿಟ್ಟು ರದ್ದುಮಾಡಿ. ಏಕೆ ಎಂದು ಹೇಳಿದರೆ, ಬೈಲಹೊಂಗಲದ ಒಂದು ಹಳ್ಳಿ ಇರುತ್ತದೆ. ಇವರು ಅಲ್ಲಿ ನಾಳೆ ಎಷ್ಟು ಗಂಟೆಗೆ ಬರುತ್ತಾರೆ, ನಾಡಿದ್ದು ಎಷ್ಟು ಗಂಟೆಗೆ ಬರುತ್ತಾರೆ ಎಂದು ತಿಳಿಸುತ್ತಾರೆ. ಈ ಡಿಸ್‌ಮಿಸ್ಡ್ ಕಂಡಕ್ಟರ್ಸ್ ಇರುತ್ತಾರೆ. ಅವರಿಗೆ ಒಂದೊಂದು ಸೈಕಲ್ ಕೊಟ್ಟಿರುತ್ತಾರೆ. ಅವರು ಮುಂಚಿತವಾಗಿ, ಪೋಲೀಸ್ ವೈರ್‌ಲೆಸ್‌ಗಿಂತ ವೇಗವಾಗಿ ಹೋಗಿ ವಿಷಯ ತಿಳಿಸುತ್ತಾರೆ. ಆದ್ದರಿಂದ ಈ ಚೆಕಿಂಗ್ ಸ್ಕ್ವಾಡ್‌ನ್ನು ರದ್ದುಮಾಡಿ. ಅದರ ಬದಲು ಒಂದು ಇಂಟೆನ್ಸಿವ್ ಸ್ಕೀಮನ್ನು ನಾನು ಇಂಟ್ರೊಡ್ಯೂಸ್ ಮಾಡಿದ್ದೆ. ಪ್ರತಿಯೊಂದು ರೂಟ್‌ಗೂ ಸಹಿತ ಒಂದು ಟಾರ್ಗೆಟ್ ಫಿಕ್ಸ್ ಮಾಡಿ ಬೆಂಗಳೂರಿನಿಂದ ತಿರುಪತಿಗೆ ಹೋಗಿಬರಬೇಕಾದರೆ ಎರಡು ದಿನ ಆಗುತ್ತದೆ. ಆತ ಆರು ಸಾವಿರ ರೂಪಾಯಿ ತೆಗೆದುಕೊಂಡು ಬರಬೇಕು ಎಂದು ಹೇಳಬೇಕು. ಆತ ಆರೂವರೆ ಸಾವಿರ ರೂಪಾಯಿ ತೆಗೆದುಕೊಂಡುಬರುತ್ತಾನೆ. ಸ್ಟಾಂಡಿಂಗ್ ಸೀಟ್‌ಗಳನ್ನು ಹಾಕಿ ಅಷ್ಟು ತೆಗೆದುಕೊಂಡು ಬರುತ್ತಾನೆ. ಅವನಿಗೆ ಅದರಲ್ಲಿ ೨೫೦ ರೂಪಾಯಿಗಳನ್ನು ಕೊಡಿ. ಈ ಸ್ಕೀಮನ್ನು ಏಕೆ ಮಾಡಲಿಲ್ಲ? ನಾನು ಹೇಳುತ್ತಿದ್ದೇನೆ ಮಾನ್ಯ ಮಂತ್ರಿಯವರೇ.... I don't think there is 20% pilferage. You have said it is 20%. Assuming there is only 10%.. ೧೦ ಪರ್ಸೆಂಟ್ ಇದೆಯೆಂದು, ನೀವು ೫ ಪರ್ಸೆಂಟ್ ಕಡಿಮೆ ಮಾಡಿ ಸಾಕು.

ಈ ವರ್ಷದಲ್ಲಿ, ೨೫ ಕೋಟಿ ರೂಪಾಯಿ ನಿಮಗೆ ಉಳಿತಾಯವಾಗುತ್ತದೆ. ಇನ್ನು ಬಹಳ ಮುಖ್ಯವಾಗಿ ನೀವು ಕಾಸ್ಟ್ ಆಫ್ ಆಪರೇಷನ್‌ನ್ನು ಕಡಿಮೆ ಮಾಡಬೇಕು. ಇದು ಬಹಳ ಮುಖ್ಯವಾಗಿರತಕ್ಕಂಥಾದ್ದು. ಟೈರ್ ಮೈಲೇಜ್, ನನಗೆ ಗೊತ್ತಿದೆ. ೧೯೮೩ನೇ ಇಸವಿಯಲ್ಲಿ ನಮ್ಮ ಸರ್ಕಾರ ಬಂದಾಗ, ಹೊಸ ಟೈರ್ ತೆಗೆದುಕೊಂಡರೆ ೧೮ ಸಾವಿರ ಕಿಲೋಮೀಟರ್ ಓಡುತ್ತಾ ಇರಲಿಲ್ಲ. ನಾನು ಬಿಟ್ಟು ಹೋದಾಗ, ಟೈರ್ ಲೈಫ್ ಒಂದು ಸಾರಿ ರೀ ಟ್ರೇಡ್ ಆದಮೇಲೆ, ಅದು ೩೦ ಸಾವಿರ ಇದ್ದದ್ದು ಒಂದು ಲಕ್ಷಕ್ಕೆ ಹೋಯಿತು, ಹೇಗೆ ಹೋಯಿತು. ಓಲ್ಡ್ ಪ್ರೊಸೆಸ್ ಯೂನಿಟ್‌ನ್ನು ಪ್ರತಿಯೊಂದು ಅಂದರೆ ೧೨ ಯೂನಿಟ್‌ಗಳಲ್ಲೂ ನಾನು ಪ್ರಾರಂಭ ಮಾಡಿಸಿದೆ. ಇದೊಂದು ವ್ಯಾಪಾರ ನಡೆಯುತ್ತಿತ್ತು. ಅಧಿಕಾರಿಗಳಿಗೂ ಮತ್ತು ಪ್ರೈವೇಟ್‌ನವರಿಗೂ ರೀ-ಟ್ರೇಡಿಂಗ್ ಕೊಡುವ ಬಗ್ಗೆ ವ್ಯಾಪಾರ ನಡೆಯುತಿತ್ತು. ನೀವು ಯಾವುದೇ ಕಾರಣದಿಂದ ರೀ ಟ್ರೇಡಿಂಗ್‌ಗೆ ಪ್ರೈವೇಟ್‌ನವರಿಗೆ ಕೊಡುವುದಕ್ಕೆ ಹೋಗಬೇಡಿ. ಓಲ್ಡ್ ಪ್ರೊಸೆಸ್ ಯೂನಿಟ್, ಅದು ಲೇಟೆಸ್ಟ್ ಯೂನಿಟ್. ಎಲ್ಲವನ್ನೂ ಸಹಿತ ಅಲ್ಲಿಯೇ ಮಾಡಿಸಿ. ಟೈರ್ ಲೈಫ್ ಜಾಸ್ತಿಯಾಗುತ್ತದೆ. ಮತ್ತೆ ವೆಹಿಕಲ್ ಯುಟಿಲೈಸೇಷನ್, ಇದು ಬಹಳ ಮುಖ್ಯ. ಈ ವೆಹಿಕಲ್ ಯುಟಿಲಿಟಿಯಿಂದ ಎಷ್ಟೊಂದು ಉಪಯೋಗವಾಗುತ್ತದೆ ಎಂಬುದರ ಬಗ್ಗೆ ನಾನು ತಮಗೆ ಹೇಳುತ್ತೇನೆ. ಇದರ ಬಗ್ಗೆ ಆಫೀಸಿನಲ್ಲಿ ಕುಳಿತುಕೊಂಡು. ಟ್ರಾಫಿಕ್‌ನವರು, ಮೆಕಾನಿಕಲ್ ಸೆಕ್ಷನ್‌ನವರು ಲೆಕ್ಕ ಹಾಕಬೇಕು. ಒಂದು ಬಸ್, ಒಂದು ದಿವಸಕ್ಕೆ ೨೦ ಕಿಲೋಮೀಟರ್ ಜಾಸ್ತಿ ಓಡಿದರೆ ಸಾಕು. ಈಗೇನು ಓಡುತ್ತಾ ಇದೆ, ಅದಕ್ಕೆ ೨೦ ಕಿಲೋಮೀಟರ್ ಜಾಸ್ತಿ ಓಡಿಸಿ. ನಿಮ್ಮ ಹತ್ತಿರ ೯ ಸಾವಿರ ಬಸ್ ಇವೆ. ಒಂದು ದಿವಸಕ್ಕೆ, ಒಂದು ಲಕ್ಷದ ೮೦ ಸಾವಿರ ಕಿಲೋಮೀಟರ್ ಜಾಸ್ತಿಯಾಗುತ್ತದೆ. ಅದರಿಂದ ನಿಮಗೆ ೯೦೦ ವೆಹಿಕಲ್‌ಗಳು, ಈಗೇನು ೯ ಸಾವಿರ ವೆಹಿಕಲ್‌ಗಳನ್ನು ಒಂದು ದಿವಸಕ್ಕೆ ೨೦ ಕಿಲೋಮೀಟರ್ ಜಾಸ್ತಿ ಓಡಿಸಿದರೆ, ೯೦೦ ವೆಹಿಕಲ್‌ಗಳು ನಿಮಗೆ ವಿತೌಟ್ ಇನ್‌ವೆಸ್ಟ್‌ಮೆಂಟ್ ಸಿಗುತ್ತದೆ. ಈ ವೆಹಿಕಲ್ ಯುಟಿಲೈಸೇಷನ್ ಕಡೆ ಏನೂ ಗಮನ ಕೊಟ್ಟಿಲ್ಲ. ಟೋಟಲ್ ಆಗಿ ಇವರು ನೆಗ್ಲೆಕ್ಟ್‌ಮಾಡಿದ್ದಾರೆ. There is disorder in that. ಆದರಿಂದ ನಿಮಗೆ ಒಂದು ದಿವಸಕ್ಕೆ ೧೦ ಲಕ್ಷ ರೂಪಾಯಿ ಎಂದರೂ, ಒಂದು ವರ್ಷಕ್ಕೆ ೧೦ ಕೋಟಿ ಉಳಿಯುತ್ತದೆ. ಇನ್ನು ಕ್ಯಾನ್ಸಲೇಷನ್; ಕ್ಯಾನ್ಸಲೇಷನ್ ಇಷ್ಟೊಂದು ಜಾಸ್ತಿ ಮಾಡಿದ್ದಾರೆ, ನೀವು ಕ್ಯಾನ್ಸಲೇಷನ್‌ನನ್ನು ಒಂದು ಪರ್ಸೆಂಟ್ ಕಡಿಮೆ ಮಾಡಿ. ಈಗ ೮ ಅಥವಾ ೯ ಪರ್ಸೆಂಟ್ ಕ್ಯಾನ್ಸಲೇಷನ್ ಇದೆ. ಒಂದು ಪರ್ಸೆಂಟ್ ಮಾಡಿದರೂ ಸಹಿತ ನಿಮಗೆ ಒಂದು ವರ್ಷಕ್ಕೆ ೪ ಕೋಟಿ ರೂಪಾಯಿ ಉಳಿತಾಯವಾಗುತ್ತದೆ. ಇನ್ನು ನಿಮ್ಮ ಪರ್‌ಫಾರ್ಮೆನ್ಸ್ ರಿಪೋರ್ಟ್‌ನಲ್ಲಿ ಅಧಿಕಾರಿಗಳು ಹೇಳಿದ್ದಾರೆ. ಇದರಲ್ಲಿ ೫೦ ಪರ್ಸೆಂಟ್ ಕರೆಕ್ಟ್ ಆಗಿದೆ. ಇನ್ನು ೫೦ ಪರ್ಸೆಂಟನ್ನು ಕನ್‌ಕಾಕ್ಟೆಡ್ ಮಾಡಿದ್ದಾರೆ. ಅಂಕಿಅಂಶಗಳ ಇಲಾಖೆಯಲ್ಲಿ .೦೦೧ ಇಂಪ್ರೂವ್‌ಮೆಂಟ್, .೦೦೦೫ ಇಂಪ್ರೂವ್‌ಮೆಂಟ್ ಎಂದು ಹೇಳಿ ಬರೆದು, ಇಲ್ಲಿ ನಮಗೆ ಫೂಲ್ ಮಾಡುವುದಕ್ಕೆ ಹೊರಟಿದ್ದಾರೆ. ಗೊತ್ತಿಲ್ಲದೆ ಇರುವವರಾದರೆ, ಇದೆಲ್ಲವನ್ನೂ ನಮಗೆ ಓದುವುದಕ್ಕಾಗುವುದಿಲ್ಲ; ಸಮಯ ಸಿಗುವುದಿಲ್ಲ. ಇವರೆಲ್ಲಾ ಹೇಳುವುದು ಸರಿ ಎಂದು ನಾವು ಹೇಳಿಕೊಂಡುಹೋಗಬೇಕು. ನಿಮಗೆ ಹೇಳುತ್ತೇನೆ. ಮಾನ್ಯ ಖಂಡ್ರೆಯವರೇ, .೧ ಇಂಪ್ರೂವ್‌ಮೆಂಟ್ ಮಾಡಿಸಿ ಸಾಕು. ಒಂದು ಲೀಟರ್ ಡೀಸೆಲ್‌ನಲ್ಲಿ ನಾಲ್ಕೂವರೆ ಕಿಲೋಮೀಟರ್ ಓಡತಕ್ಕಂಥಾದ್ದು. ೪.೫ ಕಿಲೋಮೀಟರ್ ಓಡತಕ್ಕ ಬಸ್ಸು ೪.೬ ಕಿಲೋಮೀಟರ್ ಓಡಿದರೆ, ಒಂದು ವರ್ಷಕ್ಕೆ, ಒಂದು ಕೋಟಿ ರೂಪಾಯಿ ಉಳಿಯುತ್ತದೆ. ನೀವು .೫ ಇಂಪ್ರೂವ್‌ಮೆಂಟ್ ಮಾಡಿ. ಅಷ್ಟೇ ನಾನು ಹೇಳುವುದು. ೪.೫ ಇರುವುದನ್ನು ೫ ಕಿಲೋಮೀಟರ್ಸ್‌ಗೆ ತೆಗೆದುಕೊಂಡು ಹೋದರೆ, ವರ್ಷಕ್ಕೆ ೫ ಕೋಟಿ ರೂಪಾಯಿ ಉಳಿತಾಯವಾಗುತ್ತದೆ. ಇದು ಬರೀ ಡೀಸೆಲ್ ಬಿಲ್ ಮೇಲೆ. ವೆಹಿಕಲ್ ಯುಟಿಲೈಸೇಷನ್ ಬಗ್ಗೆ ಹೇಳಿದ್ದೇನೆ. ಕ್ಯಾನ್ಸಲೇಷನ್ ಬಗ್ಗೆ ನಿಮಗೆ ಹೇಳಿದ್ದೇನೆ. ಇನ್ನೂ ಬೇಕಾದಷ್ಟು ವಿಚಾರಗಳಿವೆ. ಪ್ರಸ್ತಾಪ ಮಾಡುವುದಕ್ಕೆ ನನ್ನ ಹತ್ತಿರ. ಸಮಯ ಸಾಕಷ್ಟು ಆಗಿದೆ. ನಿಮಗೆ

ನಾನು ಹೇಳಿದೆ. ಟ್ಯಾಕ್ಸ್‌ಗಳನ್ನು ೧೭ ಪರ್ಸೆಂಟ್‌ನಿಂದ, ಹದಿನೇಳೂವರೆ ಪರ್ಸೆಂಟ್‌ನಿಂದ ೧೧ ಪರ್ಸೆಂಟ್‌ಗೆ ಇಳಿಸಿದರೆ, ೨೫ ಕೋಟಿ ರೂಪಾಯಿ ಉಳಿಯುತ್ತದೆ. ಈಗ ಪಿಲ್‌ಫರೇಜ್ ಏನು ನೀವು ಹೇಳುತ್ತಿದ್ದೀರಿ, ೨೦ ಪರ್ಸೆಂಟ್, ಬೇಡ. ೧೦ ಪರ್ಸೆಂಟ್ ಅಂದುಕೊಂಡು, ೫ ಪರ್ಸೆಂಟ್‌ಗೆ ಇಳಿಸಿದರೂ ಸಹಿತ ೩೦ ಕೋಟಿ ರೂಪಾಯಿ ವರ್ಷಕ್ಕೆ ಉಳಿಯುತ್ತದೆ. ೧ ಡೀಸೆಲ್‌ನಲ್ಲಿ ಇಂಪ್ರೂಮೆಂಟ್ ಮಾಡಿ, ಟೈರ್‌ಲೈಫನ್ನು, ವೆಹಿಕಲ್ ಯುಟಿಲೈಸೇಷನ್ ಇಂಪ್ರೂವ್ ಮಾಡಿದರೆ, ೧೯ ಕೋಟಿ ರೂಪಾಯಿ ನಿಮಗೆ ಉಳಿಯುತ್ತದೆ. ನಾನು ಕೊಡತಕ್ಕಂಥ ಅಂಕಿಅಂಶಗಳನ್ನು ಡಿಸ್‌ಪ್ರೂವ್ ಮಾಡಿದರೆ I will resign for my Membership ನಾನು ಒಂದು ನಿಮಿಷ ಇಲ್ಲಿ ಉಳಿಯುವುದಿಲ್ಲ. ನಾನು ೮೨ ಕೋಟಿ ರೂಪಾಯಿಗಳನ್ನು ಕೊಡಿಸುತ್ತೇನೆ. I take it as a challenge. ನಾನು ಹೇಳತಕ್ಕಂಥ ಅಧಿಕಾರಿಗಳನ್ನು ನೀವು ಪೋಸ್ಟ್ ಮಾಡಿ. ನಾನು ಮಂತ್ರಿಯಾಗುವುದಕ್ಕೆ ಆಗುವುದಿಲ್ಲ. ನಾನು ನಿಮ್ಮ ಪಕ್ಷಕ್ಕೆ ಬರುವುದಕ್ಕಾಗುವುದಿಲ್ಲ. ನಾನು ಸಾರಿಗೆ ಸಂಸ್ಥೆ ಅಧ್ಯಕ್ಷನಾಗುವುದಕ್ಕೂ ತಯಾರಿಲ್ಲ. ನಾನು ಕೊಡತಕ್ಕಂಥ ಸಲಹೆಗಳನ್ನು ನೀವು ಇಂಪ್ಲಿಮೆಂಟ್‌ಮಾಡಿ ಸುಮ್ಮನೆ ಜನಗಳ ಮೇಲೆ ೧೦೦ ಕೋಟಿ ರೂಪಾಯಿಗಳ ಬರ್ಡನ್ ಮಾಡಿದ್ದೀರಲ್ಲ, ಇದಕ್ಕೆ ನಿಮಗೆ ಏನು ಹೇಳುವುದು. ಇವತ್ತು ತಾವು ಈ ರಾಜ್ಯದ ಜನತೆಗೆ ದ್ರೋಹ ಮಾಡಿದ್ದೀರಿ. ಮಾನ್ಯ ನಾಗೇಗೌಡರೆ ನೀವು ಹೇಳಲಿಲ್ಲ ಬಿಡಿ. ಮಾನ್ಯ ನಾಗೇಗೌಡರು ವಿರೋಧ ಪಕ್ಷದಲ್ಲಿದ್ದಾಗ ನಾನು ನಿಮಗೆ ಮುತ್ತಿನಹಾರ ಹಾಕುತ್ತೇನೆ, ಮಲ್ಲಿಗೆಹಾರ ಹಾಕುತ್ತೇನೆ, ಚೆಂಡುಹೂವಿನಹಾರ ಹಾಕುತ್ತೇನೆ ಎಂದು ಹೇಳಿ ನನಗೆ ಎಲ್ಲಾ ಹಾರಗಳ ಆಸೆಯನ್ನು ತೋರಿಸಿದರು. ನಾನು ಒಳ್ಳೆಯ ಕೆಲಸ ಮಾಡಿದ್ದೇನೆ, ನಾಗೇಗೌಡರು ವಿರೋಧಪಕ್ಷದಲ್ಲಿದ್ದಾರೆ. ಅವನ್ನು ಮೆಚ್ಚುತ್ತಾರೆ ಎಂದುಕೊಂಡು ಬಂದರೆ ಆ ಹಾರವನ್ನು ಅವರೇ ಹಾಕಿಕೊಂಡು ವಾಪಸ್ ತೆಗೆದುಕೊಂಡು ಹೋದರು.

ಶ್ರೀ ಕೆ.ಎನ್. ನಾಗೇಗೌಡ:- ನಾನು ಅವರ ವರದಿಯನ್ನು, ಅವರ ಕಾರ್ಯವೈಖರಿಯನ್ನು ಮೆಚ್ಚಿದವನು. ಮಾನ್ಯ ಖಾದ್ರಿ ಶಾಮಣ್ಣನವರು ತೀರಿಹೋಗಿದ್ದಾರೆ. ಹೌಸ್ ಒಳಗಡೆ ನಾನು ಅಚ್ಚುಕಟ್ಟಾದ ಮಲ್ಲಿಗೆಹಾರ ತೆಗೆದುಕೊಂಡು ಬಂದು ಇಟ್ಟುಕೊಂಡು ನೀವು ಉತ್ತಮವಾದ ಕೆಲಸ ಮಾಡಿದ್ದೀರಿ ಎಂದು ಆ ಮಲ್ಲಿಗೆಹಾರ ಹಾಕುವುದಕ್ಕೆ ಸಭಾಪತಿಯವರ ಅಪ್ಪಣೆಯನ್ನು ಕೇಳಿದ್ದೇನೆ ಎನ್ನುವುದನ್ನು ಮಾನ್ಯ ಸಿಂಧ್ಯಾರವರು ಮರೆಯಬಾರದು. ವಿರೋಧ ಪಕ್ಷದಲ್ಲಿ ಕುಳಿತುಕೊಂಡು ನಾನು ಅವರ ಕೆಲಸವನ್ನು ಮೆಚ್ಚಿದ್ದೇನೆ ಎನ್ನುವುದು ದಾಖಲೆಯಲ್ಲಿದೆ. ಅವರು ಅದನ್ನು ಹೇಳಬೇಕು, ಹೂವಿನಹಾರ ತರಲಿಲ್ಲ ಎಂದು ಹೇಳಬಾರದು. ನಾನು ಹಾರವನ್ನು ಸದನದ ಒಳಗಡೆ ತೆಗೆದುಕೊಂಡು ಬಂದು ಟೇಬಲ್ ಮೇಲೆ ಇಟ್ಟುಕೊಂಡು ಅಧ್ಯಕ್ಷರ ಅನುಮತಿ ಕೇಳಿದೆ.

ಶ್ರೀ ವಾಟಾಳ್ ನಾಗರಾಜ್:- ಆ ಮಲ್ಲಿಗೆಹಾರ ಏನಾಯಿತು?

ಶ್ರೀ ಕೆ.ಎನ್. ನಾಗೇಗೌಡ:- ಅದಕ್ಕೆ ಅವರು ಏನು ಹೇಳಿದರು ಎಂದರೆ, ಹಾರ ಅಲ್ಲಿದ್ದರೆ ನನ್ನ ಕೊರಳಿಗೆ ಬಿದ್ದ ರೀತಿಯೇ ಆಗಿದೆ, ತಾವು ವಾಪಸ್ ತೆಗೆದುಕೊಂಡು ಹೋಗಬಹುದೆಂದು ಅವರು ಅನುಮತಿ ಕೊಟ್ಟಿದ್ದಾರೆ. ಅನುಮತಿ ಕೊಟ್ಟಾದ ಮೇಲೆ ವಾಪಸ್ ತೆಗೆದುಕೊಂಡು ಹೋದೆ.

ಶ್ರೀ ವಾಟಾಳ್ ನಾಗರಾಜ್:- ಅದನ್ನು ಎಲ್ಲಿಗೆ ತೆಗೆದುಕೊಂಡುಹೋದಿರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ನಾನಾದರೂ ಈ ಸರ್ಕಾರವನ್ನು ಒತ್ತಾಯ ಮಾಡತಕ್ಕಂಥದ್ದು ಏನೆಂದರೆ, ನೀವು ನಮ್ಮನ್ನೆಲ್ಲಾ ಕರೆಯಿಸಿ ಕೂರಿಸಿಕೊಂಡು ಮಾತನಾಡಿ, ಪರಿಸ್ಥಿತಿ ಹೀಗಿದೆ, ಹೇಗೆ ಮಾಡಬೇಕೆಂತಲೂ ನೀವು ಕೇಳಲಿಲ್ಲ. ನೀವು ಮಾಡುತ್ತೇವೆಂದು ಬರೀ ಆಶ್ವಾಸನೆಯನ್ನು ಕೊಟ್ಟಿರಿ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್:- ಅಧಿಕಾರದಲ್ಲಿದ್ದ ಸಮಯದಲ್ಲಿ ಬಸ್ ಪ್ರಯಾಣದರವನ್ನು ಇವರೂ ಜಾಸ್ತಿ ಮಾಡಿದವರೇ, ಇವರೇನೂ ಕಡಿಮೆ ಮಾಡಿದವರಲ್ಲ. ನನ್ನ ಆಸೆ ಏನೆಂದರೆ ಬಸ್ ಪ್ರಯಾಣದರವನ್ನು ಕಡಿಮೆ ಮಾಡತಕ್ಕಂಥವರು ಯಾರಾದರೂ ಒಬ್ಬರಿಲ್ಲವೇ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈ ವಿಚಾರದಲ್ಲಿ ನಾನು ಸನ್ಮಾನ್ಯ ವಾಟಾಳ್ ನಾಗರಾಜ್‌ರವರ ಜೊತೆ ಸ್ಪರ್ಧೆಗಿಳಿಯುವುದಕ್ಕೆ ತಯಾರಿಲ್ಲ. ತಾವು ಸಮಯ ಕೊಟ್ಟಿರುವುದರಿಂದ, ಈ ವಿಚಾರದಲ್ಲಿ ನಾನು ರಾಜಕೀಯ ಬೆರಸದೆ ಅತ್ಯಂತ ಪ್ರಾಮಾಣಿಕವಾಗಿ ಸಾರಿಗೆ ಇಲಾಖೆ ಬಗ್ಗೆ ನನ್ನ ಅನಿಸಿಕೆಗಳನ್ನು ತಿಳಿಸಿದ್ದೇನೆ, ಸಲಹೆಗಳನ್ನು ಕೊಟ್ಟಿದ್ದೇನೆ. ಆ ಸಲಹೆಗಳನ್ನು ನೀವು ಅನುಷ್ಠಾನಗೊಳಿಸುವುದಾದರೆ ರಾಜ್ಯದ ಜನತೆಯ ಮೇಲೆ ಇವೊತ್ತಿನ ಸಂದರ್ಭದಲ್ಲಿ ಬಸ್ ಪ್ರಯಾಣದರಗಳನ್ನು ಏರಿಸತಕ್ಕಂಥ ಆವಶ್ಯಕತೆಇರುವುದಿಲ್ಲ. ಈ ದಿಸೆಯಲ್ಲಿ ನಿಮ್ಮ ಪಕ್ಷದ ಮತ್ತು ನಿಮ್ಮ ಸರ್ಕಾರದ ಹಿತದೃಷ್ಟಿಯಿಂದ ವಿಚಾರ ಮಾಡಿ. ಕಳೆದ ಮೂರೂವರೆ ವರ್ಷಗಳ ನಿಮ್ಮ ಸರ್ಕಾರದ ಆಡಳಿತಾವಧಿಯಲ್ಲಿ ಏನಾಗಿದೆಯೆಂದು ವಿಚಾರ ಮಾಡಿ; ನಾನು ಇಷ್ಟು ಹೇಳುತ್ತೇನೆ: ತಾವು ಏರಿಸಿರುವ ದರಗಳನ್ನು ವಾಪಸ್ ತೆಗೆದುಕೊಳ್ಳಿ, ೨೬ ಪರ್ಸೆಂಟ್ ಏನು ಹಾಕಿದ್ದೀರಿ, ಅದನ್ನು ಸಂಪೂರ್ಣವಾಗಿ ರದ್ದು ಮಾಡಿ. ಈ ಕುರಿತು ಒಂದು ಸದನ ಸಮಿತಿ ರಚಿಸಿ, ಆದರಲ್ಲಿ ನಾವುಗಳೆಲ್ಲರೂ ಸೇರಿ ವಿಚಾರ ಮಾಡೋಣ, ನಂತರ ಹೇಗೆ ಸರಿಮಾಡಬೇಕೆನ್ನುವ ಬಗ್ಗೆ ಚರ್ಚಿಸೋಣ. ಆರು ತಿಂಗಳೊಳಗೆ ಇದನ್ನು ಮಾಡಬಹುದೆಂದು ನಾನು ಹೇಳುತ್ತಿದ್ದೇನೆ. ಇದನ್ನು ನಾನು ಸವಾಲಾಗಿ ತೆಗೆದುಕೊಳ್ಳುತ್ತೇನೆ, ತಾವೂ ಒಪ್ಪಿಕೊಳ್ಳಿ. ಈ ರೀತಿ ಮಾಡದೆ ಇವೊತ್ತು ರಾಜ್ಯದ ಜನತೆ ಮೇಲೆ ಏನು ಭಾರ ಹೊರಿಸುವುದಕ್ಕೆ ಹೊರಟಿದ್ದೀರಿ, ಇದು ಸರಿಯಲ್ಲ. ಇದರಿಂದಾಗಿ ಜನಸಾಮಾನ್ಯರು ಬಹಳ ಬೇಸತ್ತಿದ್ದಾರೆ. ಯುವಕರಿಗೆ ನಿರುದ್ಯೋಗಿಗಳಿಗೆ, ವಿದ್ಯಾರ್ಥಿಗಳಿಗೆ; ಬಹಳ ತೊಂದರೆಯಾಗುತ್ತಿದೆ. ಆದುದರಿಂದ ಇದನ್ನು ದಯವಿಟ್ಟು ದರ ಹೆಚ್ಚುಮಾಡುವುದನ್ನು ಬಿಡಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ. ಸಾರಿಗೆ ಸಂಸ್ಥೆ ಬಗ್ಗೆ ಹೇಳಬೇಕಾದ ವಿಚಾರಗಳು ಇನ್ನು ಬಹಳಷ್ಟಿದೆ. ನಾನು ಇಲ್ಲಿಯವರೆಗೆ ಹೇಳಿರತಕ್ಕಂಥಾದ್ದು ಕೇವಲ ಕೆಲವು ವಿಚಾರಗಳು ಮಾತ್ರ. ರಿಕ್ರೂಟ್‌ಮೆಂಟ್ ಬಗ್ಗೆ ಮಾನ್ಯ ಸದಸ್ಯರಾದ ಬೈರೇಗೌಡರು ಹೇಳಿದರು. ಅವರು ಹೇಳಿರತಕ್ಕಂಥಾದ್ದು ನಿಜ. ಅದರ ಬಗ್ಗೆ ಮಾತನಾಡಬೇಕಾಗಿದೆ, ಮತ್ತು ಏನು ಮಾಡಬೇಕೆಂಬುದರ ಬಗ್ಗೆ ಹೇಳುವುದೂ ಸಹ ಇದೆ. ಮತ್ತೆ ೮೦ ಕೋಟಿ ರೂಪಾಯಿಯಲ್ಲಿ ಈಗಿರತಕ್ಕ ಸಾರಿಗೆ ಸಂಸ್ಥೆಯಲ್ಲಿ ಇಂಪ್ರೂವ್‌ಮೆಂಟ್ ಮಾಡುವುದರಿಂದ ಏನು ಮಾಡಬಹುದೆಂದು ಹೇಳಿದ್ದೇನೆ. ಇನ್ನೂ ನಮ್ಮೆಲ್ಲಾ ಸಲಹೆಗಳನ್ನು ಕೊಡುವುದಕ್ಕೆ ಬಹಳ ಸಮಯ ಬೇಕಾಗುತ್ತದೆ. ಆದುದರಿಂದ, ನಿಮ್ಮ ಮನಸ್ಸನ್ನು ಓಲೈಸುವುದಕ್ಕೆ ನಾವುಗಳೆಲ್ಲರೂ ಪ್ರಯತ್ನಿಸಿದ್ದೇವೆ. ಇದು ಬಹಳ ಮಹತ್ವವಾದ ವಿಚಾರ, ಇಡೀ ರಾಜ್ಯದಲ್ಲಿರುವ ನಾಲ್ಕೂವರೆ ಕೋಟಿ ಜನಸಂಖ್ಯೆಯಲ್ಲಿ ಪ್ರತಿನಿತ್ಯವೂ ಸಹ ಸಾರಿಗೆ ಸಂಸ್ಥೆ ಬಸ್ಸುಗಳಲ್ಲಿ ೫೮ ಲಕ್ಷ ಜನರು ಪ್ರಯಾಣ ಮಾಡುತ್ತಾರೆ, ಅಂದರೆ, ೯ ಜನರಲ್ಲಿ ಇಬ್ಬರು ಪ್ರಯಾಣಿಸುತ್ತಾರೆ. ಇದು ಬಹಳ ಮಹತ್ವವಾದ ವಿಚಾರ, ಇದಕ್ಕಿಂತ ಇನ್ಯಾವುದೇ ಮಹತ್ವವಾದ ವಿಚಾರ ಸಹ ಸಿಗುವುದಿಲ್ಲವೆಂದು ನನಗನ್ನಿಸುತ್ತದೆ. ಈ ವಿಚಾರದಲ್ಲಿ ಆಡಳಿತ ಪಕ್ಷದವರಿಗೂ ಭಿನ್ನಾಭಿಪ್ರಾಯವಿಲ್ಲ. ಏಕೆಂದರೆ, ಚುನಾವಣೆ ಸಮೀಪಿಸುತ್ತಿದೆ, ಚುನಾವಣೆಗಳನ್ನು ಎದುರಿಸಬೇಕಾಗಿದೆ, ಆದಕ್ಕಾಗಿ, ಜನ ಸಾಮಾನ್ಯರ ಹತ್ತಿರ ಹೋಗಬೇಕಾಗಿದೆ. ಆ ಕಾರಣದಿಂದ ನಾವು ನಿಮ್ಮ ಮನಸ್ಸನ್ನು ಓಲೈಸಲು ಬಹಳ ಒತ್ತಿ ಒತ್ತಿ ಹೇಳುವ ಪ್ರಯತ್ನ ಮಾಡಿದ್ದೇವೆ. ಸಾರಿಗೆ ಸಂಸ್ಥೆ ಇನ್ನು ಹೇಗೆ, ಯಾವ ರೀತಿ ಚೆನ್ನಾಗಿ ಕಾರ್ಯ ನಿರ್ವಹಿಸಬೇಕೆನ್ನುವುದರ ಬಗ್ಗೆ ಹೇಳತಕ್ಕಂಥಾದ್ದು ಬಹಳಷ್ಟಿದೆ. ಮತ್ತು ಅಲ್ಲಿ ಅಧಿಕಾರಿಗಳ ಮಟ್ಟದಲ್ಲಿ ನಡೆಯತಕ್ಕಂಥ ಅನೇಕ ಮೋಸಗಳನ್ನು ರಾಜ್ಯದ ಜನತೆಗೆ ತಿಳಿಸಬೇಕಾಗಿದೆ. ಈಗ ಮಾನ್ಯ ಖಂಡ್ರೆಯವರು ಹೊಸದಾಗಿ ಬಂದಿದ್ದಾರೆ. ಅವರು ತಿಳಿದುಕೊಳ್ಳಬೇಕಾದುದು ಬಹಳ ಇದೆ. ಈ ದರ ಹೆಚ್ಚಳದ ಬಗ್ಗೆ ಅವರಿಗೂ ಗೊತ್ತಿರಲಿಲ್ಲ. ಅಂಥಾ ಕ್ರಮವನ್ನು ಮುಖ್ಯ ಮಂತ್ರಿಗಳು ಮಾಡಿದ್ದಾರೆ. ಇದುಸಚಿವ

ಸಂಪುಟದ ಸಭೆಯಲ್ಲೂ ಕೂಡಾ ಚರ್ಚೆಯಾಗಿಲ್ಲ. ಸಚಿವ ಸಂಪುಟದಲ್ಲೂ ಹೊಂದಾಣಿಕೆ ಇಲ್ಲ. ಅಂಥಾ ಜನ ವಿರೋಧಿ ಕೃತ್ಯ ನಡೆದಿದೆ. ಈ ಒಂದು ಕೃತ್ಯದ ಬಗ್ಗೆ ಫರ್ದರ್ ಚರ್ಚೆ ಮಾಡಲಿಕ್ಕೆ ಈ ಸದನದಲ್ಲಿ ನಮ್ಮ ನಾಯಕರಾದ ದೇಶಪಾಂಡೆಯವರು ಕೊಟ್ಟಿರತಕ್ಕಂಥ ನಿಲುವಳಿ ಸೂಚನೆಯನ್ನು ಸ್ವೀಕಾರ ಮಾಡಿ ಫರ್ದರ್ ಡಿಸ್ಕಷನ್‌ಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಈಗ ಸದನವು ಮುಂದುವರಿದು ಪುನಃ ೩.೦೦ ಗಂಟೆಗೆ ಸೇರುತ್ತದೆ.

(ಸಭೆಯು ೩.೨೦ಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿ, ಪೀಠದಲ್ಲಿ ಉಪಸ್ಥಿತರಿದ್ದರು.)

*ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ):- ಮಾನ್ಯ ಅಧ್ಯಕ್ಷರೆ, ಇಡೀ ಕರ್ನಾಟಕ ರಾಜ್ಯದ ಜನ ಹಿಂದಿನ ಸರ್ಕಾರದ ಜನ ವಿರೋಧಿ ನೀತಿಯಿಂದ ಬೇಸತ್ತು ಈ ರಾಜ್ಯ ಸರ್ಕಾರದ ಬದಲಾವಣೆಗೆ ಅಪೇಕ್ಷೆಪಟ್ಟಿದ್ದರು. ಇಡೀ ರಾಜ್ಯದ ಜನರ ಅಪೇಕ್ಷೆ ಏನಿತ್ತು ಎಂದರೆ, ಹೊಸ ಮಂತ್ರಿಮಂಡಲ ಬಂದಿದೆ, ಜನಪರ ಹೋರಾಟಗಳನ್ನು, ಜನಪರ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದು ಎಂದು. ಆದರೆ ಹೇಗಾಯಿತು ಎಂದರೆ, ಹಿಂದಿನ ಮಂತ್ರಿಮಂಡಲಕ್ಕೂ ಈಗಿನ ಮಂತ್ರಿಮಂಡಲಕ್ಕೂ ವ್ಯತ್ಯಾಸ ತೋರಿಸುತ್ತೇವೆಂಬ ಒಂದು ನಾಟಕವನ್ನು ಹೊಸ ಮಂತ್ರಿಮಂಡಲ ಪ್ರಾರಂಭ ಮಾಡಿತು. ಹೊಸ ಮಂತ್ರಿಮಂಡಲ ಪ್ರಾರಂಭವಾದಾಗ ಅಧಿಕಾರದಲ್ಲಿ ಅನುಭವಿ ಕೆಲವು ಮಂತ್ರಿಗಳನ್ನು ಬಳಸಿ ಚಿಕ್ಕ ಚೊಕ್ಕ ಮಂತ್ರಿಮಂಡಲವನ್ನು ಮಾಡಿ ರಾಜ್ಯದ ಜನರಿಗೆ ಅನುಕೂಲ ಮಾಡಿಕೊಡುತ್ತೇವೆಂಬ ರೂಪವನ್ನು ತೋರಿಸಿತು. ಆದರೆ ಬರಸಿಡಿಲಿನಂತೆ ಕೆ.ಎಸ್.ಆರ್.ಟಿ.ಸಿ. ಬಸ್ ಪ್ರಯಾಣ ದರವನ್ನು ಜಾಸ್ತಿ ಮಾಡಿ ಜನರ ಆಶೋತ್ತರಗಳನ್ನು ಗಾಳಿಗೆ ತೂರಿ ಮಂತ್ರಿಮಂಡಲ ಇದೆಯೋ ಇಲ್ಲವೋ ಎಂಬ ರೀತಿಯಲ್ಲಿ ಒಬ್ಬ ಅಧಿಕಾರಿಯ ಮುಖಾಂತರ ಈ ಒಂದು ಬಸ್ ಪ್ರಯಾಣದರವನ್ನು ಏರಿಸಿ ಹಿಂದಿನ ಮಂತ್ರಿಮಂಡಲಕ್ಕೂ ಮೀರಿ ಜನತೆಗೆ ದ್ರೋಹ ಮಾಡಿದ್ದಾರೆಂದು ಬಹಳ ದುಃಖದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವರು ಈ ರೀತಿ ದರವನ್ನು ಜಾಸ್ತಿ ಮಾಡತಕ್ಕ ಸಂದರ್ಭದಲ್ಲಿ ಇವರಿಗೂ ಅನ್ನಿಸಿರಬಹುದು. ೨೫ ಪರ್ಸೆಂಟ್ ಜಾಸ್ತಿ ಮಾಡಿದರೆ ರಾಜ್ಯದ ಜನರು ಮತ್ತು ವಿರೋಧ ಪಕ್ಷಗಳು ವಿರೋಧ ಮಾಡುತ್ತವೆ, ಆಮೇಲೆ ೫-೬ ಪರ್ಸೆಂಟ್ ಕಡಿಮೆ ಮಾಡಿದರೆ ಹೊಂದಿಕೊಳ್ಳುತ್ತಾರೆ ಎಂದು. ಆದರೆ ಸಂಬಂಧಪಟ್ಟ ಮಂತ್ರಿಗಳು ಮತ್ತು ಮಂತ್ರಿಮಂಡಲದ ಸದಸ್ಯರು ಯಾರು ಈ ದುಷ್ಕೃತ್ಯಕ್ಕೆ ಕಾರಣರಾಗಿದ್ದಾರೆ ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೆ ಈ ರಾಜ್ಯದ ನಿರುದ್ಯೋಗಿ ಯುವಕರು, ರೈತರು ಸಾಕಷ್ಟು ಸಂಕಟ ಅನುಭವಿಸಿದ್ದಾರೆ. ಇಂಥ ಸಂದರ್ಭದಲ್ಲಿ ದರ ಜಾಸ್ತಿ ಮಾಡಿರತಕ್ಕ ಕಾರಣ ಅವರ ಶಾಪಕ್ಕೆ ಬಲಿಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಸ್ವಾಭಾವಿಕವಾಗಿ ಎಲ್ಲರ ಅಪೇಕ್ಷೆ ಇತ್ತು. ಒಂದು ರೀತಿಯ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುತ್ತೀರಿ, ಜನಪರ ಹೋರಾಟ ಮಾಡುತ್ತೀರಿ, ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೀರಿ, ದೊಡ್ಡ ಆಪರೇಷನ್ ಮಾಡುತ್ತೀರೆಂದು ಅಪೇಕ್ಷೆ ಇತ್ತು. ದೊಡ್ಡ ಆಪರೇಷನ್ ತಾವು ಮಾಡಿದಿರಿ. ಆದರೆ ಬಡವರ ಜೇಬಿಗೆ ಕತ್ತರಿ ಹಾಕುವ ಆಪರೇಷನ್‌ನ್ನು ಸರ್ಕಾರ ಮಾಡಿದೆ. ಮತ್ತು ಹಿಂದಿನ ಒಂದು ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದ್ದರು. ಖಂಡಿತ ಯಾವುದೇ ಕಾರಣಕ್ಕೂ ವಿಧಾನಮಂಡಲದಲ್ಲಿ ಪ್ರಸ್ತಾಪ ಮಾಡದೇ, ವಿರೋಧ ಪಕ್ಷದವರ ಜೊತೆ ಪ್ರಸ್ತಾಪ ಮಾಡದೇ ಬೆಲೆ ಏರಿಕೆ ಮಾಡುವುದಿಲ್ಲ ಎಂದು ಹೇಳಿದರು. ಆದರೆ ಇವರು ಮಾಡಿದ ಕೃತ್ಯದಿಂದ ಈ ಸರ್ಕಾರದ ಮೇಲೆ ಸಂಪೂರ್ಣ ವಿಶ್ವಾಸವನ್ನು ಇನ್ನು ಯಾವುದರಲ್ಲೂ ಇಡಬಾರದು ಎನ್ನುವ ರೀತಿಯಲ್ಲಿ ಬಸ್ ದರವನ್ನು

ಜಾಸ್ತಿ ಮಾಡಿರುವುದು ನಮ್ಮ ಗಮನಕ್ಕೆ ಬರುತ್ತಿದೆ. ಈ ರೀತಿ ಬಸ್ ಪ್ರಯಾಣ ದರ ಜಾಸ್ತಿ ಮಾಡಿರುವುದನ್ನು ಯಾವುದಾದರೂ ಒಂದು ಭಾಗವಾದರೂ ಒಪ್ಪಬೇಕಾಗಿತ್ತು. ಇವತ್ತು ಇಡೀ ರಾಜ್ಯದ ಯುವಕರು ವಿರೋಧ ಮಾಡಿದ್ದಾರೆ, ವಿದ್ಯಾರ್ಥಿಗಳು ವಿರೋಧ ಮಾಡಿದ್ದಾರೆ. ರೈತರು ವಿರೋಧ ಮಾಡಿದ್ದಾರೆ, ವಿರೋಧ ಪಕ್ಷದವರು ವಿರೋಧ ಮಾಡಿರುವುದು ಅಷ್ಟೇ ಅಲ್ಲ, ಸ್ವತಃ ಕಾಂಗ್ರೆಸ್ ಪಕ್ಷದ ಅನೇಕ ಜಿಲ್ಲಾ ಸಮಿತಿಗಳು ಇದನ್ನು ಪ್ರತಿಭಟನೆ ಮಾಡಿವೆ. ಶಿವಮೊಗ್ಗ ಜಿಲ್ಲೆಯ ಕಾಂಗ್ರೆಸ್ ಪಕ್ಷದ ನಾಯಕರು ಒಂದು ನಿರ್ಣಯ ಮಾಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು, ಮಂತ್ರಿಗಳು ಇದನ್ನು ಗಮನಿಸಬೇಕು. ಜಿಲ್ಲಾ ಕಾಂಗ್ರೆಸ್ ಸಮಿತಿ ಬಸ್ ದರ ಏರಿಕೆಯನ್ನು ಖಂಡನೆ ಮಾಡಿ, ಸರ್ಕಾರ ಇದನ್ನು ವಾಪಸ್ಸು ತೆಗೆದುಕೊಳ್ಳದಿದ್ದರೆ ಚಳುವಳಿ ಮಾಡಬೇಕೆಂಬ ತೀರ್ಮಾನವನ್ನು ಅದೇ ಪಕ್ಷದವರು ಬಂದಿರಬೇಕಾದರೆ ಈ ಮಂತ್ರಿಮಂಡಲವನ್ನು, ಸರ್ಕಾರವನ್ನು ರಾಜ್ಯದ ಜನರು ಯಾವ ರೀತಿ ನಂಬಬೇಕು ಎಂದು ಪ್ರಶ್ನೆ ಕೇಳುತ್ತೇನೆ. ಸ್ವತಃ ಇವರ ಪಕ್ಷದ ನಾಯಕರು, ಹಿಂದಿನ ಮಂತ್ರಿಗಳು, ಹಿಂದಿನ ಮುಖ್ಯಮಂತ್ರಿಯವರು ಈ ಸರ್ಕಾರದ ಧೋರಣೆಯನ್ನು ವಿರೋಧಮಾಡುತ್ತಿದ್ದಾರೆ. ಇವರ ಪಕ್ಷದ ಎಂ.ಎಲ್.ಎ.ಗಳು, ಮಂತ್ರಿಗಳು ವಿರೋಧ ಮಾಡಿದ್ದಾರೆ. ಇಂತಹ ಸಂದರ್ಭದಲ್ಲಿ ಇದು ತಪ್ಪು ಎಂದು ಗುರುತಿಸಿ ಏರಿಸಿರುವ ಪ್ರಯಾಣ ದರವನ್ನು ವಾಪಸ್ಸು ತೆಗೆದುಕೊಂಡು ಜನರಿಗೆ ಅನುಕೂಲ ಮಾಡದಿದ್ದರೂ ಕೂಡ ಜನರಿಗೆ ಮಾಡುತ್ತಿರುವ ದ್ರೋಹವನ್ನು ನಿಲ್ಲಿಸುವ ಒಂದು ಪ್ರಯತ್ನವನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ. ಸೋರಿಕೆ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು...

ಶ್ರೀ ಭೀಮಣ್ಣ ಖಂಡ್ರೆ:- ಅಡ್ಮಿಸಿಬಲಿಟಿ ಬಗ್ಗೆ ನೋಟೀಸ್ ಕೊಟ್ಟಿದ್ದಾರೆ. ೩-೪ ಗಂಟೆ ಮಾತನಾಡಿದರೆ ಹೇಗಾಗುತ್ತದೆ? It is not admitted.

SRI P.G.R. SINDHIA :- Precedent of arguing for hours together has been put by your own leaders. ಮಾನ್ಯ ವೀರಪ್ಪ ಮೊಯಿಲಿಯವರು. ಬಂಗಾರಪ್ಪನವರು ಈ ಕಡೆ ಕುಳಿತಿದ್ದಾಗ, ಇನ್ನಿತರ ಸದಸ್ಯರು ಈ ಕಡೆ ಕುಳಿತಿದ್ದಾಗ ಒಬ್ಬೊಬ್ಬರು ೩-೪ ಗಂಟೆ ಮಾತನಾಡಿದ್ದಾರೆ. ನಾವು ಕೇವಲ ಅರ್ಧ ಗಂಟೆ ಮಾತನಾಡಿದ್ದೇವೆ.

ಅಧ್ಯಕ್ಷರು:- ೫ ನಿಮಿಷದಲ್ಲಿ ಮುಗಿಸಿ.

ಶ್ರೀ ಎ.ಕೆ. ಅನಂತಕೃಷ್ಣ:- ಮಾನ್ಯ ಅಧ್ಯಕ್ಷರೇ, ಬಸ್ ರೇಟ್ ವಿಷಯದಲ್ಲಿ ಅಡ್ಮಿಸಿಬಲಿಟಿ ಬಗ್ಗೆ ಸಾಕಷ್ಟು ಚರ್ಚೆ ಆಗುತ್ತಿದೆ. ಅಡ್ಮಿಟ್ ಮಾಡಬೇಕೇ ಬೇಡವೆ ಎಂಬ ಪ್ರಶ್ನೆ ಉದ್ಭವವಾಗುವುದಿಲ್ಲವೆಂದು ನಾನು ಭಾವಿಸುತ್ತೇನೆ. ಕಾರಣ ಏನೆಂದರೆ, ನಮ್ಮ ಪಕ್ಷ ಈಗಾಗಲೇ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ನಮ್ಮ ಸರ್ಕಾರಕ್ಕೂ ಆದೇಶ ನೀಡಿದೆ. ಏನು ೨೨ ಪರ್ಸೆಂಟ್‌ವರೆಗೆ ಏರಿಸಿದ್ದೀರಿ ಅದನ್ನು ತಕ್ಷಣ ಕಡಿಮೆ ಮಾಡಿ ಅದರ ಘೋಷಣೆ ಮಾಡಬೇಕೆಂದು ಹೇಳಿದೆ. ಆ ಆದೇಶವನ್ನು ಬೆಳಿಗ್ಗೆ ನಾವು ಕೊಟ್ಟಿದ್ದೇವೆ. ಮಾನ್ಯ ಮಂತ್ರಿವರ್ಯರು ಕೂಡ ಆ ಆದೇಶವನ್ನು ತಿಳಿದಿಟ್ಟುಕೊಂಡಿದ್ದಾರೆ. ಆದರೂ ಕೂಡಾ ಇಷ್ಟು ಚರ್ಚೆಗೆ ಏಕೆ ಅವಕಾಶ ಕೊಟ್ಟಿದ್ದಾರೆಂದು ನನಗೆ ಗೊತ್ತಾಗುತ್ತಿಲ್ಲ. ಆದುದರಿಂದ ನಾನು ಅವರಲ್ಲಿ ಬಹಳ ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ಏನು ಪಕ್ಷ ತೀರ್ಮಾನ ಮಾಡಿದೆ ಅದನ್ನು ಘೋಷಣೆ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಈಗ ನಮ್ಮ ಅನಂತಕೃಷ್ಣ ಅವರು ಮಾತನಾಡುತ್ತಾ ಇರುವುದು, it amounts to the privilege of the Member of this House. ಅವರ ಪಾರ್ಟಿಯಲ್ಲಿ ಏನು ಚರ್ಚೆಯಾಗುತ್ತದೆ, ಏನು ಆಗುವುದಿಲ್ಲ, ಅದಕ್ಕೂ ಈ ಸದನಕ್ಕೂ ಏನು ಸಂಬಂಧ? ಕೆ.ಎಸ್.ಆರ್.ಟಿ.ಸಿ. ಏನು ಪಕ್ಷದ ಆಸ್ತಿಯೇ? We have to discuss.

SRI A.K. ANANTHA KRISHNA :- I have made the appeal to the Minister. I did not come in the way of your discussion.

ಅಧ್ಯಕ್ಷರು:- ಮಾನ್ಯ ಈಶ್ವರಪ್ಪನವರು ಎರಡು ನಿಮಿಷಗಳಲ್ಲಿ ಮುಗಿಸುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಬಸ್ ದರವನ್ನು ಸಿಕ್ಕಾಪಟ್ಟೆ ಜಾಸ್ತಿಮಾಡಿಕೊಂಡು ಐದು ನಿಮಿಷಗಳಲ್ಲಿ ಸ್ಟೇಟ್‌ಮೆಂಟ್ ಕೊಟ್ಟು ಹೋಗುವುದಕ್ಕೆ ಇಡೀ ರಾಜ್ಯದಲ್ಲಿ ಜನ ಸತ್ತುಹೋಗಿದ್ದಾರೆಂದು ಅಂದುಕೊಳ್ಳಬೇಡಿ.

ಅಧ್ಯಕ್ಷರು:- ತಾವು ಹೇಳುವುದನ್ನು ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಐದು ನಿಮಿಷದಲ್ಲಿ ಸ್ಟೇಟ್‌ಮೆಂಟ್ ಕೊಟ್ಟು ಹೋಗುತ್ತೇನೆಂದು ಹೇಳಿದರೆ ಈ ಸದನಕ್ಕೆ ಅಗೌರವ ಸ್ವಾಮಿ.

ಅಧ್ಯಕ್ಷರು:- ಅವರು ಹೇಳಿದ್ದುದು ಬೇರೆ, ನೀವು ಮಾತನಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಅದರಲ್ಲಿ ಏನು ಅರ್ಥವಿದೆ? ಅವರು ಆಡಿದ್ದು ಆಡಿಕೊಂಡು ಹೋದರೆ, ನಾವು ಸುಮ್ಮನೆ ಮಲಗಿಕೊಂಡಿರಬೇಕೆ? ಮಂತ್ರಿಗಳು ಮಲಗಿಕೊಂಡಿರಬಹುದು, ವಿರೋಧಪಕ್ಷದವರು ಮಲಗಿಕೊಂಡಿಲ್ಲ ನಿಮಗೆ ನೆನಪು ಇರಲಿ.

ಅಧ್ಯಕ್ಷರು:- ಮಾನ್ಯ ಈಶ್ವರಪ್ಪನವರೇ ನಾನು ಹೇಳುತ್ತಿದ್ದೇನಲ್ಲ, ನೀವು ಮಾತನಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ:- ನಾನು ಮಾತನಾಡುತ್ತಿರಬೇಕಾದರೆ ಒಬ್ಬರು ಕಾಂಗ್ರೆಸ್ ಸದಸ್ಯರು ಹೇಳುತ್ತಾರೆ, ನಮ್ಮ ಕಾಂಗ್ರೆಸ್ ಪಕ್ಷ ಸರ್ಕಾರಕ್ಕೆ ಆದೇಶ ಕೊಟ್ಟಿದೆಯೆಂದು, ನಿಮ್ಮ ಪಕ್ಷ ಆದೇಶ ಕೊಟ್ಟಿದೆಯೆಂದರೆ ಸರ್ಕಾರಕ್ಕೆ ಬಸ್ ದರ ಹೆಚ್ಚಿಗೆ ಮಾಡುವುದಕ್ಕೆ ಆದೇಶ ಕೊಟ್ಟಿದೆಯೆ? ಹೇಳುವವರು ಕೇಳುವವರು ಇಲ್ಲವೇ? ಹಾಗಾದರೆ ನೀವು ಬೇಕಾದ್ದು ಮಾಡಿಕೊಳ್ಳಬಹುದು. ಜಾಸ್ತಿ ಮಾಡುವುದು ಕಡಿಮೆ ಮಾಡುವುದು ನಿಮಗೆ ಅಧಿಕಾರವಿದೆಯೇ?

ಶ್ರೀ ಎ.ಕೆ. ಅನಂತಕೃಷ್ಣ:- ಮಾನ್ಯಸದಸ್ಯರು ಕೂಗಾಡುವುದಕ್ಕೆ ಅವಕಾಶವಿಲ್ಲ. ಕೂಗಾಡಬೇಕಾದ ಅವಶ್ಯಕತೆಯೂ ಇಲ್ಲ. ಅವರು ಯಾರ ಮೇಲೆ ಕೂಗಾಡುತ್ತಿದ್ದಾರೆ?

ಅಧ್ಯಕ್ಷರು:- ಮಾನ್ಯ ಈಶ್ವರಪ್ಪನವರೇ, ನಾನು ನಿಮಗೆ ಆದೇಶ ಕೊಡುತ್ತಿದ್ದೇನೆ, ನೀವು ಮಾತನಾಡಿ.

ಶ್ರೀ ಎ.ಕೆ. ಅನಂತಕೃಷ್ಣ:- ಅವರು ಹೇಗೆ ತಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದಾರೆ ಹಾಗೆ ನಾನು ನನ್ನ ಅಭಿಪ್ರಾಯವನ್ನು ಸದನದ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು:- ಮಾನ್ಯ ಅನಂತಕೃಷ್ಣರವರೇ ತಾವು ಸ್ವಲ್ಪ ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುತ್ತಿರಬೇಕಾದರೆ ಮಾನ್ಯ ಮಂತ್ರಿಗಳು ಹೇಳುತ್ತಿದ್ದರು. ತಾವು ಬೇಗ ಮುಗಿಸಬೇಕು ನಾನು ಐದು ನಿಮಿಷಗಳಲ್ಲಿ ಉತ್ತರ ಕೊಟ್ಟು ಹೋಗುತ್ತೇನೆಂದು.

ಅಧ್ಯಕ್ಷರು:- ಇಲ್ಲ ಇಲ್ಲಾ, ಅವರು ಹಾಗೆ ಹೇಳಲಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:- ಅವರು ನಿಮ್ಮ ಎದುರಿಗೆ ಹೇಳಿದ್ದಾರೆ.

ಅಧ್ಯಕ್ಷರು:- ಇಲ್ಲ. ನಾನು ನಿಮಗೆ ಹೇಳುತ್ತಿದ್ದೇನೆ ನೀವು ಮಾತನಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಒಪ್ಪಿಕೊಂಡೆ, ನಿಮ್ಮ ಬಗ್ಗೆ ನನಗೆ ಗೌರವವಿದೆ. ನಾನು ಹೇಳುತ್ತಿರುವುದು ಇಡೀ ರಾಜ್ಯದ ಜನತೆಯ ಸಮಸ್ಯೆ ಇದು. ಇಡೀ ರಾಜ್ಯದ ಜನತೆಯ ಜೀವನದ ಮೇಲೆ ಇವರು ಚೆಲ್ಲಾಟ ಆಡುತ್ತಿದ್ದಾರೆ. ಚೆಲ್ಲಾಟ ಆಡಿ ಬಿಟ್ಟಿದ್ದಾರೆ. ನೀವು ಚೆಲ್ಲಾಟವಾಡುವುದಕ್ಕೆ ನಾವು ಬಿಡುವುದಿಲ್ಲವೆಂದು ಹೇಳುತ್ತಿದ್ದೇನೆ. ಇಂತಹ ಸಂದರ್ಭದಲ್ಲಿ ಉತ್ತರ ಕೊಟ್ಟು ಹೊರಟುಹೋಗುತ್ತೇನೆಂದರೆ ಅವರು ಮಾಡಿದ ಹಾಗೆ ಮಾಡಿಸಿಕೊಂಡು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ವಿರೋಧಪಕ್ಷ ಇದೆಯೆ? ಪ್ರಜಾಪ್ರಭುತ್ವ ಇದೆಯೋ ಇಲ್ಲವೋ? ಸಾರಿಗೆ ಸಂಸ್ಥೆಯಲ್ಲಿ ಸಿಕ್ಕಾಪಟ್ಟೆ ಸೋರಿಕೆಯಾಗುತ್ತಿದೆಯೆಂದು ಅವರೇ ಒಪ್ಪಿಕೊಂಡಿದ್ದಾರೆ. ಸೋರಿಕೆಯನ್ನು ನಿಲ್ಲಿಸುತ್ತೇವೆ, ಆ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತೇವೆ ಎಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದರೆ ಇವತ್ತು ಈ ರಾಜ್ಯಕ್ಕೆ ಈ ಸ್ಥಿತಿ ಬರುತ್ತಿರಲಿಲ್ಲ. ಸೋರಿಕೆಯನ್ನು ತಡೆಗಟ್ಟುವ ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಿದ್ದರೆ ಖಂಡಿತಾ ಈ ರೀತಿಯ ಒಂದು ಬಸ್ ದರ ಶೇಕಡ ೨೫ರಷ್ಟು ಏನು ಜಾಸ್ತಿ ಮಾಡಿದ್ದೀರಿ ಅದರಿಂದ ಇಡೀ ರಾಜ್ಯದ ಜನತೆ ಗೋಳಿನ ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ ಸೋರಿಕೆ ನಿಲ್ಲಿಸಿದ್ದರೆ ಅಂತಹ ಸ್ಥಿತಿ ಬರುತ್ತಿರಲಿಲ್ಲ. ಈ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕಾಗಿತ್ತು. ಈಗಲೂ ಕೂಡ ಏನು ದರವನ್ನು ಜಾಸ್ತಿ ಮಾಡಿದ್ದೀರಿ ಅದನ್ನು ಪೂರ್ಣ ವಾಪಸ್ಸು ತೆಗೆದುಕೊಳ್ಳುತ್ತೇವೆಂದರೆ ಇದರ ಬಗ್ಗೆ ಚರ್ಚೆ ಮಾಡುವ ಪ್ರಶ್ನೆ ಇರುವುದಿಲ್ಲ. ಉತ್ತರ ಕೊಡುವಾಗ ಇದರ ಬಗ್ಗೆ ಸ್ಪಷ್ಟವಾಗಿ ಹೇಳಲಿ. ಅವರು ೨೫ ಪರ್ಸೆಂಟ್ ಬಸ್ ದರ ಜಾಸ್ತಿ ಮಾಡಿದ್ದಾರೆ. ನಾವು ಕೂಗಾಟ ಮಾಡಿದ್ದೇವೆ. ರಾಜ್ಯದಲ್ಲಿ ಚೀರಾಟ ಆಗಿದೆ. ಅದರಲ್ಲಿ ಐದಾರು ಪರ್ಸೆಂಟ್ ದರವನ್ನು ಇಳಿಸಿದ್ದೇವೆನ್ನುವ ಒಂದು ನಾಟಕೀಯ ಉತ್ತರವನ್ನು ನೀವು ಕೊಟ್ಟರೆ, ನೀವು ಆ ಉತ್ತರವನ್ನು ಇಲ್ಲಿ ಕೊಡಬಹುದು. ಇಲ್ಲಿ ನಾವು ವಿರೋಧಪಕ್ಷದವರು ಕಡಿಮೆ ಜನ ಇರಬಹುದು. ಆದರೆ ಇಡೀ ರಾಜ್ಯದ ಜನತೆಯ ಹತ್ತಿರ ನೀವು ಪ್ರತಿಭಟನೆಯನ್ನು ಅನುಭವಿಸಬೇಕಾಗುತ್ತದೆ. ಈಗಾಗಲೇ ಮೊನ್ನೆ ರಸ್ತೆ ತಡೆ ಚಳುವಳಿಯಲ್ಲಿ ಕೆಲವು ಮಂತ್ರಿಗಳಿಗೆ ಅದರ ಬಿಸಿ ತಟ್ಟಿದೆ, ಅವರಿಗೆ ಅರ್ಥವಾಗಿದೆ. ಅವರು ಬೆಂಗಳೂರಿಗೆ ಬರಬೇಕಾದರೆ ಅರ್ಧಗಂಟೆ ೨ ಗಂಟೆ, ೩ ಗಂಟೆ ತಡವಾಗಿ ಬಂದಿದ್ದಾರೆ. ಇಡೀ ರಾಜ್ಯದಲ್ಲಿ ಮಂತ್ರಿಗಳು ಓಡಾಡಬೇಕಾಗುತ್ತದೆ. ನಾವು ಶಾಸಕರು ಓಡಾಡಬೇಕಾಗುತ್ತದೆ. ರಾಜ್ಯದ ಜನತೆಯ ಜೀವನದ ಜೊತೆಗೆ ದಯವಿಟ್ಟು ಚೆಲ್ಲಾಟವಾಡಬೇಡಿ. ಏನು ಬಸ್ ಆಕ್ಸಿಡೆಂಟ್ಸ್‌ಗಳು ಆಗುತ್ತಿವೆ ಅದನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿ. ಸೋರಿಕೆಯನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿ. ಆ ದಿಕ್ಕಿನಲ್ಲಿ ಪ್ರಯತ್ನ ಮಾಡಿದರೆ ರಾಜ್ಯದ ಜನ ಬದುಕಿಕೊಳ್ಳುತ್ತಾರೆ. ಬಸ್ ಪ್ರಯಾಣ ದರವನ್ನು ಸಿಕ್ಕಾಪಟ್ಟೆ ಜಾಸ್ತಿ ಮಾಡುವುದು ಆಮೇಲೆ ನಾಟಕೀಯ ರೂಪದಲ್ಲಿ ಕಡಿಮೆ ಮಾಡುವಂತಹ ಪ್ರಯತ್ನವನ್ನು ಮಾತ್ರ ಮಾಡಬೇಡಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಶಿವಮೊಗ್ಗದಲ್ಲಿ ಒಬ್ಬ ಖಾಸಗೀ ಬಸ್ ಮಾಲೀಕ ಎರಡು ಬಸ್ ಇಟ್ಟುಕೊಂಡಿರುವವನು ಮುಂದಿನ ವರ್ಷ ಮತ್ತೊಂದು ಬಸ್ ಕೊಂಡುಕೊಳ್ಳುತ್ತಾನೆ. ಆಮೇಲೆ ಎರಡು ಬಸ್ ಕೊಂಡುಕೊಳ್ಳುತ್ತಾನೆ. ಒಂದು ಬಸ್ ಕೊಡಿ ಅಂದರೆ ಕೊಡುವುದಿಲ್ಲವೆಂದು ಹೇಳುತ್ತೀರಿ. ನಿಮ್ಮ ಸ್ಥಿತಿ ಹೀಗೆ. ಬಡವ ಹೇಗೆ ಬದುಕಿಕೊಳ್ಳಬೇಕು? ರಾಜ್ಯದ ಜನತೆ ಹೇಗೆ ಜೀವನ ಮಾಡಬೇಕು? ಈ ದಿಕ್ಕಿನಲ್ಲಿ ದಯವಿಟ್ಟು ಯೋಚನೆ ಮಾಡಿ. ನಿಮ್ಮ ಕೈಯಲ್ಲಿ ಒಳ್ಳೆಯ ಆಡಳಿತ ಕೊಡುವುದಕ್ಕೆ ಸಾಧ್ಯವೆ? ಪ್ರಾಮಾಣಿಕತೆ ನಿಮ್ಮ ಹತ್ತಿರ ಇದೆಯೆ? ಒಳ್ಳೆಯ ಆಡಳಿತ ಕೊಡುವ ಶಕ್ತಿ ನಿಮಗೆ ಇದೆಯೆ? ಅಧಿಕಾರಿಗಳನ್ನು ಮತ್ತು ಕಾರ್ಮಿಕ ಮುಖಂಡರುಗಳನ್ನು ಕಂಟ್ರೋಲ್ ಮಾಡಿ, ಪ್ರಾಮಾಣಿಕ ಆಡಳಿತ ಕೊಡಬೇಕು ಎನ್ನುವ ಶಕ್ತಿ ಇದ್ದರೆ ನೀವು ಅದನ್ನು ಮಾಡಿ. ನಿಮ್ಮ ಕೈಯಲ್ಲಿ ಶಕ್ತಿ ಇಲ್ಲವೆಂದರೆ ಹೇಳಿ. ಇಡೀ ರಾಜ್ಯದ ಜನತೆಯ ಮುಂದೆ ಶರಣಾಗಿ ರಾಜಿನಾಮೆಯನ್ನು ಕೊಟ್ಟು

ಹೊರಗೆ ಬಂದರೆ ಹೇಗಾದರೂ ನಡೆದುಹೋಗುತ್ತದೆ. ಇನ್ನೊಬ್ಬರು ಆಡಳಿತ ಮಾಡಿಕೊಂಡು ಪ್ರಾಮಾಣಿಕ ಪ್ರಯತ್ನಮಾಡಿದಾಗ ರಾಜ್ಯದ ಜನತೆ ಬದುಕಿಕೊಳ್ಳುತ್ತಾರೆ. ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಮತ್ತೊಂದು ಸಾರಿ ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ. ವಿಷದವಾಗಿ ನಾನು ಹೇಳಿರುವುದನ್ನು ತಾವು ಒಪ್ಪಿಕೊಂಡಿದ್ದೀರಿ, ತಮಗೂ ಅರ್ಥವಾಗಿದೆ ಇಡೀ ಸದನ ಒಪ್ಪಿದೆ. ಮಾನ್ಯ ಸಿಂಧ್ಯಾರವರು ಮಾತನಾಡಿದ್ದನ್ನು ಇಡೀ ರಾಜ್ಯದ ಜನತೆ ಕೇಳಿದ್ದಾರೆ, ನಾಳೆ ಪತ್ರಿಕೆ ನೋಡಿ ಸಂತೋಷ ಪಡುತ್ತಾರೆ. ಮಾನ್ಯ ಸಿಂಧ್ಯಾರವರು ಹೇಳಿರುವಂತಹ ಮಾತನ್ನು ಈ ಸರ್ಕಾರ ಅರ್ಥಮಾಡಿಕೊಂಡು, ವಿರೋಧಪಕ್ಷದವರು ಹೇಳುತ್ತಿರುವುದು ಸತ್ಯವೆಂದು ತೀರ್ಮಾನ ಮಾಡಿಕೊಂಡು ಏನು ಬಸ್ ದರ ಜಾಸ್ತಿ ಮಾಡಿದ್ದೀರಿ ಅದು ಅನ್ಯಾಯ, ಇಡೀ ರಾಜ್ಯದ ಜನರಿಗೆ ಮಾಡಿರುವ ದ್ರೋಹವೆಂದು ನಿಮ್ಮ ಮನಸ್ಸಿಗೆ ಅನಿಸಿ ತಾವು ವಾಪಸು ತೆಗೆದುಕೊಂಡರೆ ಖಂಡಿತಾ ಯಾವ ಪ್ರಶ್ನೆಯೂ ಇಲ್ಲ. ಇಡೀ ರಾಜ್ಯದ ಜನತೆಯ ಮನಸ್ಸಿನಲ್ಲಿರುವುದನ್ನು ಮತ್ತೆ ಮತ್ತೆ ಹೇಳುತ್ತಾ, ಎಲ್ಲರ ಭಾವನೆ ಒಂದೇ ಇದೆ. ಹಿಂದಿನ ಸರ್ಕಾರಗಳು ಮಾಡಿದ್ದಕ್ಕಿಂತ ಹೆಚ್ಚು ಬಸ್ ದರವನ್ನು ಜಾಸ್ತಿ ಮಾಡಿದ್ದೀರಿ. ದೊಡ್ಡ ದ್ರೋಹವನ್ನು ನೀವು ಮಾಡಿದ್ದೀರಿ. ಈ ದಿಕ್ಕಿನಲ್ಲಿ ತಾವು ಯೋಚನೆ ಮಾಡಿ, ಏನು ಜಾಸ್ತಿ ಮಾಡಿದ್ದೀರಿ ಅದನ್ನು ಸಂಪೂರ್ಣ ವಾಪಸ್ಸು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ನಾಗಮಾರಪಲ್ಲಿಯವರೇ, ನೀವು ಎರಡು ನಿಮಿಷ ಮಾತನಾಡಿ.

* ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್):- ಸನ್ಮಾನ್ಯ ಅಧ್ಯಕ್ಷರೆ, ನಮ್ಮ ನಾಯಕರು ಮಾತನಾಡಿದ್ದಾರೆ; ಇದನ್ನು ಒಪ್ಪಿಕೊಂಡು ವಿತ್‌ಡ್ರಾ ಮಾಡಿದ್ದೇವೆ ಎಂದು ಸರ್ಕಾರ ಹೇಳಿಬಿಡಲಿ, ನಾವು ಯಾರೂ ಮಾತನಾಡುವುದಿಲ್ಲ. ಇಲ್ಲ, ಒಪ್ಪಿಕೊಂಡಿದ್ದೇವೆ ಎಂದು ಹೇಳಿದರೆ ನಾವು ಯಾರೂ ಮಾತನಾಡುವುದಿಲ್ಲ; ಕುಳಿತುಕೊಂಡುಬಿಡುತ್ತೇವೆ.

ಅಧ್ಯಕ್ಷರು:- ನೀವು ನನಗೆ ಹೇಳಿ. ಎರಡು ನಿಮಿಷ ಟೈಮ್ ಕೊಟ್ಟಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಸನ್ಮಾನ್ಯ ಅಧ್ಯಕ್ಷರೆ. ಇಷ್ಟು ಹೊತ್ತು ಇದರ ಬಗ್ಗೆ ಸವಿಸ್ತಾರವಾಗಿ ಚರ್ಚೆಯಾಗಿದೆ. ನಾವು ನಿಲುವಳಿ ಸೂಚನೆಯನ್ನು ತಂದಿದ್ದೇವೆ. ಕಾರಣ, ಇವತ್ತು ಕರ್ನಾಟಕ ರಾಜ್ಯದ ಜನತೆಯ ಮೇಲೆ ಬಹಳ ಅನ್ಯಾಯವಾಗಿದೆ. ಅದರಲ್ಲೂ ಜನನಾಯಕರೆಂದು ಎನಿಸಿಕೊಂಡವರು ಶ್ರೀ ಖಂಡ್ರೆಯವರು. ಖಂಡ್ರೆಯವರ ಕಾಲದಲ್ಲಿ ಹೀಗೆ ಆಗಬೇಕು ಎಂದರೆ ಮನಸ್ಸಿಗೆ ಬಹಳ ನೋವಾಗುತ್ತದೆ. ಈ ಇಕ್ಕಟ್ಟಿಗೆ ಅವರು ಹೇಗೆ ಸಿಕ್ಕಿಹಾಕಿಕೊಂಡರೋ ಎಂದು ನನಗೆ ಗೊತ್ತಾಗುವುದಿಲ್ಲ. ಇದಕ್ಕೆ ಮೊದಲು ಅವರೇ ವಿರೋಧ ಮಾಡಿದ್ದರು. ಅವರು ಯಾವಾಗಲೂ ವಿರೋಧ ಮಾಡುತ್ತಿದ್ದರು. ಆದರೆ ಇವತ್ತು ಅವರೇ ಬಸ್ ದರ ಜಾಸ್ತಿ ಮಾಡಿದ್ದಾರೆ ಎಂದರೆ ಇದು ಏಕೆ? ಅವರ ಮಾತು ಅಲ್ಲಿ ನಡೆಯಿತೋ ಇಲ್ಲವೋ? ಅಥವಾ ಅವರಿಗೆ ಗೊತ್ತಿಲ್ಲದೆಯೋ ಎಂದು ಸಂದೇಹ ಉದ್ಭವವಾಗುತ್ತದೆ. ಖಂಡ್ರೆಯವರು ಬಹಳ ಒಳ್ಳೆಯವರು, ಜನನಾಯಕರು. ಇಲ್ಲಿ ಏಕೆ ಇವತ್ತು ತಲೆಮೇಲೆ ಈ ಅಪವಾದವನ್ನು ಹೊತ್ತುಕೊಂಡಿದ್ದಾರೆ. ಬಹಳ ಕಷ್ಟಕಾಲದಲ್ಲಿ ಮಂತ್ರಿಯಾಗಿದ್ದಾರೆ, ನಿಜ. ಏಕೆ ಇಂತಹ ಪರಿಸ್ಥಿತಿ ಬಂತು. ಶ್ರೀ ಮೊಯಿಲಿಯವರು ಮುಖ್ಯಮಂತ್ರಿಗಳಾದ ತಕ್ಷಣ ಏನೋ ಮಾಡುತ್ತಾರೆ, ಹೆಚ್ಚಿನ ಬದಲಾವಣೆ ಬರುತ್ತದೆ, ಬಹಳ ದಕ್ಷವಾದ ಆಡಳಿತ ಕೊಡುತ್ತಾರೆ ಎಂದಿದ್ದರೆ ೪೧ ಜನ ಮಂತ್ರಿಗಳನ್ನು ಮಾಡಿ ಒಂದನ್ನು ಇವರಿಗೆ ಕೊಟ್ಟುಬಿಟ್ಟರು. ಇದನ್ನು ಜನತೆಯ ಮೇಲೆ ಏರಿದರು. ಇವತ್ತು ಈ ಘೋರ ಅನ್ಯಾಯವನ್ನು ಜನತೆಯ ಮೇಲೆ ಮಾಡಿದ್ದಾರೆ. ನಿಜ ಹೇಳಬೇಕೆಂದರೆ, ನಮ್ಮಲ್ಲಿ ಒಂದು ಕ್ವಿಂಟಾಲ್ ಜೋಳವನ್ನು ೧೨೦-೧೪೦ ರೂಪಾಯಿಗಳಿಗೆ ಯಾರೂ ತೆಗೆದುಕೊಳ್ಳಲಿಕ್ಕೆ ತಯಾರಿಲ್ಲ. ಸಪೋರ್ಟ್ ಪ್ರೈಸ್ ಬಗ್ಗೆ

ಹೇಳುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಜನರಿಗೆ ದುಡ್ಡು ಎಲ್ಲಿಂದ ಬರಬೇಕು? ಬೀದರ್‌ನಿಂದ, ಔರಾದ್‌ನಿಂದ ಇಲ್ಲಿಗೆ ಬರಬೇಕಾದರೆ ೨೪೦ ರೂಪಾಯಿ ಖರ್ಚು ಆಗುತ್ತದೆ. ಹೋಗುವಾಗ ಮತ್ತೆ ೨೪೦ ರೂಪಾಯಿ ಕೊಟ್ಟು ಹೋಗಬೇಕು. ಇಂತಹ ಪರಿಸ್ಥಿತಿಯಲ್ಲಿ ಯಾರು ಬೆಂಗಳೂರಿಗೆ ಬರುವುದಕ್ಕೆ ಸಾಧ್ಯವಾಗುತ್ತದೆ. ಈ ಹೆಚ್ಚಳ ಮಾಡಿರುವುದು ನಿಜವಾಗಿಯೂ ಸರಿಯಾದುದಲ್ಲ. ಆಮೇಲೆ ಬಸ್ಸಿನ ವ್ಯವಸ್ಥೆ ಏನಾಗಿದೆ ಎಂದರೆ, ನಮ್ಮ ಬಸ್ಸುಗಳನ್ನು ದೇವರೇ ಕಾಪಾಡಬೇಕು, ವೆಂಕಟರಮಣ ಗೋವಿಂದ ಅಂತ. ಅವರಿಗೆ ಪರಿಸ್ಥಿತಿ ಗೊತ್ತಿದೆ. ಬೆಳಿಗ್ಗೆ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದರು. ನಮ್ಮಲ್ಲಿ ಮೇಲ್ಗಡೆ ಕುಳಿತುಕೊಂಡವರಿಗೆ ಕಂಡಕ್ಟರ್ ಹೇಳುತ್ತಾನೆ, ಒಳಗೆ ಕುಳಿತುಕೊಂಡರೆ ಒಂದು ರೂಪಾಯಿ, ಮೇಲುಗಡೆ ಕುಳಿತರೆ ಎಂಟು ಆಣೆ. ಆದರೆ ಟಿಕೆಟ್ ಕೊಡುವುದಿಲ್ಲ. ಹೀಗೆ ಸೋರಿಹೋಗುವುದನ್ನು ತಡೆಯುವುದು ಬಿಟ್ಟು ದರ ಹೆಚ್ಚು ಮಾಡಿದರೆ ಏನು ಲಾಭವಾಗುತ್ತದೆ? ಇದಕ್ಕೆ ಶ್ರೀ ಸಿಂಧ್ಯಾ ಅವರು ಬಹಳ ಅಂಕಿಅಂಶಗಳನ್ನು ಸರಿಯಾಗಿ ಕೊಟ್ಟಿದ್ದಾರೆ. ಇದನ್ನು ತಾವು ಒಪ್ಪಿದರೆ ನಾವು ಮಾತನಾಡುವುದಿಲ್ಲ. ಆದ್ದರಿಂದ ಇದನ್ನು ಒಪ್ಪಿ ವಿತ್‌ಡ್ರಾ ಮಾಡಿಕೊಳ್ಳಬೇಕು. ಆಮೇಲೆ ನಮ್ಮ ನಿಲುವಳಿ ಸೂಚನೆಯನ್ನು ತಾವು ಒಪ್ಪಿ, ಹೆಚ್ಚಿನ ಮಾಹಿತಿಯೊಡನೆ ಇನ್ನೂ ಚರ್ಚೆ ಮಾಡಬೇಕಾಗುತ್ತದೆ. ತಾವು ನನಗೆ ಎರಡು ನಿಮಿಷಗಳನ್ನು ಕೊಟ್ಟಿದ್ದೀರಿ. ಶ್ರೀ ಖಂಡ್ರೆಯವರು ತಮ್ಮ ಮೇಲಿನ ಅಪವಾದವನ್ನು ತೆಗೆದು ಇದನ್ನು ಸಂಪೂರ್ಣವಾಗಿ ತೆಗೆದುಹಾಕಿದ್ದೇವೆ ಎಂದು ಘೋಷಿಸಬೇಕು. ಶ್ರೀ ಈಶ್ವರಪ್ಪನವರು ಹೇಳಿದ್ದು ನಿಜ. ೨೫ ಪರ್ಸೆಂಟ್ ಏರಿಸುವುದು ಮತ್ತೆ ಅಸೆಂಬ್ಲಿಗೆ ಬಂದು ೧೦ ಪರ್ಸೆಂಟ್ ಕಡಿಮೆ ಮಾಡುವುದನ್ನು ನಾವು ಒಪ್ಪುವುದಿಲ್ಲ. ೨೬ ಪರ್ಸೆಂಟ್ ಏನು ಹೆಚ್ಚು ಮಾಡಿದ್ದಾರೆ ಅದನ್ನು ಪೂರ್ತಿಯಾಗಿ ತೆಗೆಯಬೇಕು. ಬಡಜನರಿಗೆ ಇವತ್ತು ಸರ್ಕಾರ ಅನ್ಯಾಯ ಮಾಡಿದೆ. ನಾಳೆ ಜನರು ಅವರನ್ನು ಬಿಡುವುದಿಲ್ಲ. ಈ ಎಚ್ಚರಿಕೆಯನ್ನು ಕೊಟ್ಟು ನಿಲುವಳಿ ಸೂಚನೆಗೆ ತಾವು ಒಪ್ಪಿ ಅನುಮತಿಯನ್ನು ಕೊಡಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿ):- ಮಾನ್ಯ ಅಧ್ಯಕ್ಷರೇ, ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಸುಮಾರು ನಾಲ್ಕು ಗಂಟೆ ಚರ್ಚೆಯಾಗಿದೆ. ಬಸ್ ಪ್ರಯಾಣ ದರ ಏರಿಕೆ ಮಾಡಿರುವುದು ಇದೇನೂ ಮೊದಲನೇ ಸಾರಿ ಅಲ್ಲ. ಇದಕ್ಕೆ ಮೊದಲು ಎಷ್ಟೋ ಸಾರಿ ಏರಿಸಿದ್ದಾರೆ. ಇದು ರೆಕಾರ್ಡಿನಲ್ಲಿದೆ. ಒಂದೇ ಒಂದು ಮಾತು ತೆಗೆದುಕೊಂಡು ನಮ್ಮ ಮಾನ್ಯಸದಸ್ಯರು ಬಹಳಷ್ಟು ಚರ್ಚೆ ಮಾಡಿದ್ದಾರೆ. ಆದರೆ ಕೇಸ್ ಮಾತ್ರ ಬಹಳ ವೀಕ್. ಬುದ್ಧಿವಂತಿಕೆಯ ಮಾತನ್ನಾಡಿದರೂ ಇಂತಹ ಕೇಸ್ ಚರ್ಚೆಗೆ ಬಂದರೆ ಅದು ನಿಲ್ಲುವುದಿಲ್ಲ.

ಶ್ರೀಮಾನ್ ಸಿಂಧ್ಯರವರು ಬಹಳ ಕಳಕಳಿಯಿಂದ ಮಾತನಾಡಿದ್ದಾರೆ, ಮತ್ತು ಸಲಹೆಗಳನ್ನೂ ಕೊಟ್ಟಿದ್ದಾರೆ. ಅವುಗಳನ್ನು ನಾನು ಸ್ವಾಗತ ಮಾಡುತ್ತೇನೆ. ಮತ್ತು ಅವರ ಸದ್ಭಾವನೆ ಬಗ್ಗೆಯೂ ನಾನು ಅಪ್ರಿಷಿಯೇಟ್ ಮಾಡುತ್ತೇನೆ. ಆದರೆ, ಅವರು ಏನು ವಾದ ಮಾಡುತ್ತಾ ಇದ್ದಾರೆ ಅದು ಈಗ ಸರಿ ಇಲ್ಲ. ಕಾರಣ, ನನ್ನ ಸ್ಟೇಟ್‌ಮೆಂಟ್ ತೆಗೆದುಕೊಂಡು ಪ್ರತಿಯೊಬ್ಬರೂ ಖಂಡ್ರೆಯವರು ಸ್ಟೇಟ್‌ಮೆಂಟ್ ಕೊಟ್ಟರು, ಸ್ಟೇಟ್‌ಮೆಂಟ್ ಕೊಟ್ಟರು ಎಂದು ಹೇಳಿದ್ದಾರೆ. ನಾನು ಏನು ಸ್ಟೇಟ್‌ಮೆಂಟ್ ಕೊಟ್ಟಿದ್ದೇನೆ ಎಂಬುದನ್ನು ಹೇಳುತ್ತೇನೆ.

" Transport Minister Bheemanna Khandre today said that personally he would not favour a hike in bus fare unless it was essential and would like to plug revenue leakages in KSRTC.

He told reporters that stopping pilferage in the corporation was his first priority. The previous Transport Minister had claimed that 21 per cent of the revenue was being pilfered, *he recalled* ".

ನಾನು ಸ್ಟೇಟ್‌ಮೆಂಟ್ ಕೊಟ್ಟಿದ್ದು ಇಲ್ಲಿದೆ. ನಾನು ಎನ್‌ಕ್ವೈರಿ ಮಾಡಿದ್ದೇನೆ ಎಂದಲ್ಲ. ಶ್ರೀಮಾನ್ ಅಜೀಜ್‌ಸೇಠ್‌ರವರು ಹಿಂದೆ ನಿಮ್ಮನ್ನು ಸಭೆಗೆ ಕರೆಸಿದ್ದರು. ಆ ಸಮಯದಲ್ಲಿ ಇಷ್ಟು ಇತ್ತು ಎಂದು ಹೇಳಿದ್ದಕ್ಕಾಗಿ, ನಾನು ರೆಫರ್ ಮಾಡಿದ್ದೇನೆ. ಇದರ ಅರ್ಥ ಏನೆಂದರೆ, ಎಕ್ಸಾಟ್ ಆಗಿ ನೀವೂ ಹೇಳುವುದಕ್ಕಾಗುವುದಿಲ್ಲ, ನಾವೂ ಹೇಳುವುದಕ್ಕಾಗುವುದಿಲ್ಲ, ಯಾರೂ ಹೇಳುವುದಕ್ಕಾಗುವುದಿಲ್ಲ. ಫಿಲ್‌ಫಿರೇಜ್ ಇದೆ, ಅದನ್ನು ಕಡಿಮೆ ಮಾಡಬೇಕು. ಇದರ ಬಗ್ಗೆ ಯಾವುದೇ ಸಂಶಯ ಇಲ್ಲ ಮತ್ತು ಯಾರದೂ ಅಬ್ಜಕ್ಷನ್ ಇಲ್ಲ.

Further, " Mr. Khandre said that if a fare hike was found necessary even after plugging the leaks he would consider it. He added that he was currently studying the expert committee report on the issue ".

ಈ ಇಷ್ಯೂ ಮೇಲೆ ನಾನು ಸ್ಟಡಿ ಮಾಡುತ್ತಿದ್ದೇನೆ. ಫಿಲ್‌ಫಿರೇಜ್ ಎಷ್ಟಿದೆ ನೋಡೋಣ. ಎಷ್ಟರಮಟ್ಟಿಗೆ ಮಾಡೋಣ. ಇದಕ್ಕೆ ಕಮಿಟ್‌ಮೆಂಟ್ಸ್ ಏನೂ ಇಲ್ಲ. We are going to do something honestly. ಎಂಬ ಬಗ್ಗೆಯೂ ಸರ್ಕಾರದ ಮುಂದೆ ಇದೆ. Hike ಮಾಡಬೇಕೇ, ಮಾಡಬಾರದೇ ಎಂಬುದೂ ಪರಿಶೀಲನೆಯಲ್ಲಿದೆ. ಇದರಲ್ಲಿ ಏನೋ ಕಮಿಟೆಡ್ ಮಾಡಿದ್ದಾರೆ ಎಂದಲ್ಲ. ಒಂದು ಮಾತು ತಮಗೆ ತಿಳಿಸುತ್ತಿದ್ದೇನೆ. ಈ ಕರಪ್ಷನ್, ಏನು ಫೆನಾಮಿನಾ ಇದೆ. ಇದು ಈ ಕೆ.ಎಸ್.ಆರ್.ಟಿ.ಸಿ. ಅಥವಾ ಈ ಸರ್ಕಾರ ಎಂದಲ್ಲ. ಇಡೀ ಇಂಡಿಯಾದಲ್ಲಿ, ಪ್ರತಿಯೊಂದು ರಾಜ್ಯದಲ್ಲೂ ಮತ್ತು ಇಡೀ ಪ್ರಪಂಚದಲ್ಲಿಯೆ ಕರಪ್ಷನ್ ಇದೆ. ಅದಕ್ಕಾಗಿ ಟ್ಯಾಕ್ಸ್ ತೆಗೆದುಕೊಳ್ಳಬಾರದು, ಸರ್ವೀಸು ಮಾಡಬಾರದು, ಏನೂ ಕೆಲಸವನ್ನೇ ಮಾಡಬಾರದು, ಅದು ಮೊದಲೇ ಮಾಡಬೇಕು ಎಂದೇನೂ ಇಲ್ಲ. ಆ ರೀತಿಯ ಅರ್ಥ ಆಗುವುದಿಲ್ಲ; ಅದು ಎಷ್ಟು ಎಂದೂ ಆಗುವುದಿಲ್ಲ. ಏನಾದರೂ ಹೇಳಬೇಕಾದರೆ, ಅದಕ್ಕೆ ಅರ್ಥ ಇರಬೇಕು. ಒಂದು ಮಾತನ್ನು ತಮಗೆ ಹೇಳುತ್ತಿದ್ದೇನೆ. ಮಾನ್ಯಸದಸ್ಯರಾದ ನೀವೆಲ್ಲರೂ, ವಾಪಸ್ ತೆಗೆದುಕೊಳ್ಳಬೇಕೆಂದು ಏನು ವಾದ ಮಾಡುತ್ತಿದ್ದೀರಿ ಯಾವ ಪ್ರಕಾರ ಮಾಡಬೇಕು ಎನ್ನುವ ಬಗ್ಗೆ ನೀವೂ ಒಬ್ಬರೂ ಸಹ ಸರಿಯಾದ ಸಲಹೆ ಕೊಟ್ಟಿಲ್ಲ. ತಾವು ಏನು ಹೇಳಿದಿರಿ, ಯಾವ ಪ್ರಕಾರ ಮಾಡಬೇಕೆನ್ನುವ ಮಾತು. ತಾವು ೪-೫ ವರ್ಷಗಳ ಹಿಂದೆ ಅಧಿಕಾರ ಮಾಡಿದ್ದೀರಿ. ಆಗ ಇದೇರೀತಿ ಮಾಡಿದ್ದೀರೋ ಇಲ್ಲವೋ ಎಂಬ ಮಾತನ್ನು ತಮಗೆ ಕೇಳುತ್ತೇನೆ ಮತ್ತು ಆಗ ಈ ರೀತಿಯ ಮಾತನಾಡಿದ್ದೀರಾ ಎಂದೂ ಕೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ನಾನು ಪ್ರಾಮಾಣಿಕವಾಗಿ ಏನು ಸಲಹೆಯನ್ನು ಕೊಟ್ಟಿದ್ದೇನೆ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೂ ಪ್ರಯತ್ನ ಮಾಡಿದ್ದೇನೆ ಮತ್ತು ಸಕ್ಸೀಡ್ ಕೂಡ ಆಗಿದ್ದೇನೆ. ನಾನು ಕೊಟ್ಟಿರತಕ್ಕ ಅಂಕಿಅಂಶಗಳಲ್ಲಿ, ಒಂದು ಅಂಕಿಅಂಶ ತಪ್ಪು ಆಗುವುದಾದರೆ, ನಾನು ಇವತ್ತೆ ಈ ಸದನದಿಂದ ರಾಜಿನಾಮೆ ಕೊಟ್ಟು ಹೋಗುತ್ತೇನೆ. I have not come here to tell a lie. ನಾನು ಎಷ್ಟು ಉಳಿಸಿದ್ದೇನೆ ಎನ್ನುವುದನ್ನು ತೆಗೆದು ನೋಡಿ. ನೀವು ಇನ್ನೂ ಇದರ ಬಗ್ಗೆ ಸಾಕಷ್ಟು ತಿಳಿದುಕೊಂಡಿಲ್ಲ, ಆದರೆ, ಮಾತನಾಡುತ್ತಿದ್ದೀರಿ.

ಶ್ರೀ ಭೀಮಣ್ಣ ಖಂಡ್ರೆ:- ಸರಿ ನಾನು ತಿಳಿದುಕೊಂಡಿದ್ದೇನೋ ಇಲ್ಲವೋ. ನೀವು ತಿಳಿದಿದ್ದೀರಿ. ಒಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ, ಇದಕ್ಕೆ ತಾವು ಉತ್ತರ ಕೊಡಬೇಕು. ತಾವು ಫಿಲ್ಪರೇಜ್ ಬಗ್ಗೆ ಹೇಳಿದ್ದೀರಿ. ೧೯೮೮ರಿಂದಲೂ ಇದು ಇದೆ. ಅದಕ್ಕಿಂತ ಹಿಂದಿನಿಂದಲೂ ಇದೆ. ಇದನ್ನು ನಾವು ನೋಡುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಕರಪ್ಷನ್ ವರಲ್ಡ್ ಪೆನಾಮಿನ ಅಲ್ಲ ಎಂದು ಯಾರು ಹೇಳುತ್ತಾರೆ?

ಶ್ರೀ ಭೀಮಣ್ಣ ಖಂಡ್ರೆ:- ಈ ಫಿಲ್ಪರೇಜ್ ೧೯೮೧ಕ್ಕಿಂತ ಮೊದಲಿನಿಂದಲೂ ಇದೆ. ೧೯೮೦ ರಿಂದ ಇಲ್ಲಿಯವರೆಗೆ ಏನು ಮಾಡಿದ್ದಾರೆ, ಲಾಸ್ ಏನಾಗಿದೆ ಅದನ್ನು ನಾನು ಓದಿ ಹೇಳುತ್ತೇನೆ. ಕಳೆದ ೧೦ ವರ್ಷಗಳಿಂದ ನೂರು ಕೋಟಿ, ೨೦೦ ಕೋಟಿ ಲಾಸ್ ಆಗುತ್ತಲೇ ಬಂದಿದೆ. ತಾವು ಬಂದಿದ್ದು ಯಾವಾಗ ೧-೨-೧೯೮೮ಕ್ಕೆ. ಆದರ ನಂತರ ೧೯೯೦ರವರೆಗೂ ತಾವೇ ಇದ್ದಿರಿ. ಅದಕ್ಕೂ ಮೊದಲು ತಾವು ೧೯೮೩ರಲ್ಲಿ ಬಂದಿದ್ದು. ನಾನು ನಮ್ಮ ಸ್ನೇಹಿತರನ್ನು ಕೇಳುತ್ತೇನೆ ಮಾನ್ಯ ಗೌರವಾನ್ವಿತ ಸದಸ್ಯರಾದ ಸಿಂಧ್ಯಾರವರನ್ನು ಕೇಳುತ್ತೇನೆ. ತಾವು ಯಾವಾಗ ಬಂದಿದ್ದು ಅಂದರೆ ೧-೨-೮೮ಕ್ಕೆ, ಆಗ ೧೭ ಪರ್ಸೆಂಟ್ ತಾವು ಮಾಡಿದಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಾನು ಆಗಲೇ ಅದನ್ನು ಹೇಳಿದ್ದೇನೆ.

ಶ್ರೀ ಭೀಮಣ್ಣ ಖಂಡ್ರೆ:- ತಾವು ಸ್ವಲ್ಪ ನಾನು ಹೇಳುವುದನ್ನು ಕೇಳಬೇಕಾಗುತ್ತದೆ. ನೀವು ಸುಮಾರು ೪ ಗಂಟೆಗಳು ಮಾತನಾಡಿದ್ದೀರಿ. ನೀವು ಮಾತನಾಡಿದಾಗ ನಾವ್ಯಾರು ನಿಮ್ಮನ್ನು ಕೇಳಿದ್ದು ಇಲ್ಲ. ಮನಸ್ಸಿಗೆ ಬಂದಂತೆ ಮಾತನಾಡಿದ್ದೀರಿ.......

ಶ್ರೀ ವಾಟಾಳ್ ನಾಗರಾಜ್:- ಮನಸ್ಸಿಗೆ ಬಂದಂತೆ ನಾವ್ಯಾರೂ ಮಾತನಾಡಿಲ್ಲ. ಆ ಪದ ಅವರು ವಾಪಸ್ ತೆಗೆದುಕೊಳ್ಳಬೇಕು. ನಾವು ಪ್ರಾಮಾಣಿಕವಾಗಿ ಹೇಳಿದ್ದೇವೆ. ನಿಮ್ಮ ಸರ್ಕಾರ ಬೇಜವಾಬ್ದಾರಿಯುತವಾಗಿ ದರ ಏರಿಸಿದ್ದನ್ನು ನಾವು ಪ್ರಾಮಾಣಿಕವಾಗಿ ಹೇಳಿದ್ದೇವೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಾವು ಮನಸ್ಸಿಗೆ ಬಂದಂತೆ ಏನು ಮಾತನಾಡಿದ್ದೇವೆ? ಅದನ್ನು ಹೇಳುವುದಕ್ಕೆ ನಿಮಗೆ ನಾಚಿಕೆ ಆಗಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ತಾವು ಮನಸ್ಸಿಗೆ ಬಂದಂತೆ ಮಾತನಾಡುತ್ತಿದ್ದೀರಿ. ಮನಸ್ಸಿಗೆ ಬಂದಂತೆ ಬಸ್ ದರ ಏರಿಸಿದ್ದೀರಿ. ಇದು ಬೇಜವಾಬ್ದಾರಿ ಹೇಳಿಕೆ.

ಅಧ್ಯಕ್ಷರು:- ನಾನು ಎದ್ದು ನಿಂತಾಗ ನೀವು ಕುಳಿತುಕೊಳ್ಳಬೇಕಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರೇ, ಸಿಂಧ್ಯಾರವರೇ ಕುಳಿತುಕೊಳ್ಳಿ..........

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಹೌಸ್ ಕಮಿಟಿ ಮಾಡಿ.......

ಶ್ರೀ ವಾಟಾಳ್ ನಾಗರಾಜ್:- ನೀವು ಜನಗಳಿಗೆ ತೊಂದರೆ ಕೊಡುತ್ತಿದ್ದೀರಿ. ಯಾವು ಮನಸ್ಸಿಗೆ ಬಂದಂತೆ ಮಾತನಾಡುತ್ತಿರುವುದು?.........

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನೀವು ಹೋಗಿ ಜನಗಳ ಹತ್ತಿರ ಕೇಳಿ. ಮಾಡುತ್ತಾರೆ ಆಗ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ತಾವು ಸರ್ವಾಧಿಕಾರಿ ಮನೋಭಾವನೆಯಿಂದ ವರ್ತನೆ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಾವು ಅರ್ಧ ಗಂಟೆ ಮಾತನಾಡಿದ್ದನ್ನು ಟಾಲ್‌ರೇಟ್ ಮಾಡಿಕೊಳ್ಳಲು ತಯಾರು ಇಲ್ಲ.

ಅಧ್ಯಕ್ಷರು:- ಸಿಂಧ್ಯಾರವರೇ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮುಖ್ಯಮಂತ್ರಿಗಳು ಬಂದು ಉತ್ತರ ಹೇಳಲಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಬಾಯಿಗೆ ಬಂದಂತೆ ಮಾತನಾಡುತ್ತಿರುವುದು ನೀವು. ಸಾರಿಗೆ ಬಸ್ಸುಗಳಿಗೆ ಬೆಂಕಿ ಹಾಕುತ್ತಿದ್ದಾರೆ. ಶಾಸಕರು ಹೊರಗಡೆ ತಿರುಗಾಡುವುದಕ್ಕೆ ಆಗುತ್ತಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:- ಯಾರು ಮನಸ್ಸಿಗೆ ಬಂದಂತೆ ಮಾತನಾಡುತ್ತಿರುವುದು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ನಾವು ಮಾತನಾಡಿದ್ದರಲ್ಲಿ ತಪ್ಪಿದ್ದರೆ ಅದನ್ನು ತೆಗೆದು ಹಾಕಿಸಿ ಅವರು ಮಾತನಾಡಿದ್ದನ್ನು ಕಡತದಿಂದ ತೆಗೆಸಿ. ತಾವು ಏನು ಮಾಡಿದರೂ ರಾಜ್ಯದ ಜನ ನೋಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:- ನಾನು ಹೇಳುತ್ತೇನೆ ಕೇಳಿ. ತಾವು ಸಾಕಷ್ಟು ಸಮಯ ತೆಗೆದುಕೊಂಡು ಚರ್ಚೆ ಮಾಡಿದ್ದೀರಿ, ಸಂತೋಷದಿಂದ ಚರ್ಚೆಮಾಡಿದ್ದೀರಿ. ಚರ್ಚೆಯಲ್ಲಿ ಆನಂದ ಇದೆ. ಮಂತ್ರಿಗಳು ಮಾತನಾಡುವಾಗ ತಮ್ಮ ಭಾಷೆಯಲ್ಲಿ ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಉದ್ವೇಗದಿಂದ ಮಾತನಾಡಿದ್ದರೆ, ಅದು ಏನಿದೆ ಅದನ್ನು ನಾನು ಪರಿಶೀಲಿಸುತ್ತೇನೆ.

(ಗೊಂದಲ)

ಅಧ್ಯಕ್ಷರು:- ತಾವು ದಯಮಾಡಿ ಕುಳಿತುಕೊಳ್ಳಬೇಕು. ಮಂಜುನಾಥ್‌ರವರೇ ಕುಳಿತುಕೊಳ್ಳಿ. ನಾನು ಇದನ್ನು ಪರಿಶೀಲನೆ ಮಾಡುತ್ತೇನೆ.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್:- ಅವರು ಅನುಭವಿ ರಾಜಕಾರಣಿಗಳು, ಅವರು ಮಾತನಾಡಿದ್ದಾರೆ. ನಾವು ಕೇಳಿದ್ದೇವೆ. ಈಗ ನಾವು ಹೇಳುವುದನ್ನು ಸ್ವಲ್ಪ ತಾಳ್ಮೆಯಿಂದ ಕೇಳಿ.

ಅಧ್ಯಕ್ಷರು:- ಈಶ್ವರಪ್ಪ, ದಯಮಾಡಿ ತಾವು ಒಬ್ಬರಿಗೊಬ್ಬರು ಮಾತನಾಡಬೇಡಿ. ಏನಿದ್ದರೂ ನನಗೆ ಹೇಳಿ.

ಶ್ರೀ ಭೀಮಣ್ಣ ಖಂಡ್ರೆ:- ಮಾನ್ಯ ಅಧ್ಯಕ್ಷರೆ, ನಾನು ಹೇಳಿದ್ದುದು, ನಿಮ್ಮ ಇಚ್ಛೆ ಪ್ರಕಾರ ಎಂದು. ಹಾಗೇ ಮಾಡಬೇಕಲ್ಲಾ? ನನ್ನ ಇಚ್ಛೆ ಪ್ರಕಾರ ಮಾಡಿದರೇ?

ಅಧ್ಯಕ್ಷರು:- ಅದು ತಮ್ಮ ಬೀದರ್ ಭಾಷೆ ಇರಬಹುದು.

ಶ್ರೀ ಭೀಮಣ್ಣ ಖಂಡ್ರೆ:- ನಮ್ಮ ಬೀದರ್ ಭಾಷೆ ಈ ಪ್ರಕಾರ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ:- ನೀವು ಇದೇ ರೀತಿ ಮಾತನಾಡುವುದಾದರೆ ನಾವು ನಮ್ಮ ಶಿವಮೊಗ್ಗ ಭಾಷೆಯಲ್ಲೂ ಮಾತನಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು:- ಮಂತ್ರಿಗಳು ಉತ್ತರ ಕೊಡುತ್ತಾರೆ, ಕುಳಿತುಕೊಳ್ಳಿ.

ಶ್ರೀ ಭೀಮಣ್ಣ ಖಂಡ್ರೆ:- ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುವಾಗ ನಾನು ಹೇಳಿದೆ.

(ಗೊಂದಲ)

ಅಧ್ಯಕ್ಷರು:- ವಾಟಾಳ್ ನಾಗರಾಜ್‌ರವರೇ ನಾನು ಒಂದು ಮಾತನ್ನು ಹೇಳಿದ್ದೇನೆ. ಮೆಂಬರ್ಸ್ ಒಬ್ಬರಿಗೊಬ್ಬರು ತಾವಾಗಿ ಮಾತನಾಡಬಾರದು. ಆಯಿತು ಕುಳಿತುಕೊಳ್ಳಿ.

ಶ್ರೀ ಭೀಮಣ್ಣ ಖಂಡ್ರೆ:- ಮಾನ್ಯ ಅಧ್ಯಕ್ಷರೆ, ನಾನು ಏಕೆ ಹೇಳಿದೆ ಈ ಮಾತು ಎಂದರೆ, ಮಿಸ್ಟರ್ ಸಿಂಧ್ಯಾರವರೇ, ನಿಮ್ಮ ಬಗ್ಗೆ ಬಹಳ ಅಪಾರವಾದ ಗೌರವ ಇದೆ. ನಿಮಗೆ ನಾನು ಹೇಳಿದ್ದಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುವಾಗ, ಗೌರ್‍ನಮೆಂಟ್ ಕಡೆಯಿಂದ ನಾನು ಇದ್ದೇನೆಂದು ಹೇಳಿದಾಗ, ನೀವು ಇದ್ದೀರೆಂದು ನಾವು ತಿಳಿದುಕೊಳ್ಳಬೇಕೆ, ಅಂಥಾ ಮಾತನ್ನು ನೀವು ಆಡಿದಿರಿ. ಅದು ಸರಿಯಲ್ಲ ಎಂಬ ಮಾತನ್ನು ಹೇಳಿದರೆ ಅದರಲ್ಲಿ ಏನು ತಪ್ಪಾಯಿತು?

ಶ್ರೀ ವಾಟಾಳ್ ನಾಗರಾಜ್:- ಅದೇನು ತಪ್ಪಿಲ್ಲ. ನೀವು ಇದ್ದಿರಿ ಎಂದು ಹೇಳಿದ್ದೇನೆ, ಅದರಲ್ಲಿ ತಪ್ಪೇನಿದೆ?

ಶ್ರೀ ಭೀಮಣ್ಣ ಖಂಡ್ರೆ:- ಮಾನ್ಯ ಸಿಂಧ್ಯಾರವರು ನನಗೆ ಒಳ್ಳೆಯ ಸ್ನೇಹಿತರಾದರೂ ಅವರು ಒಂದು ಮಾತನ್ನು ಪ್ರವೋಕ್ ಆಗಿ ಮಾತನಾಡಿದರು. ನಾಚಿಕೆ ಬರಬಾರದೇನು ಎನ್ನುವ ಮಾತನ್ನು ಹೇಳಿದರು. ನಾನು ಕೇಳುತ್ತೇನೆ; ನಾಚಿಕೆ ಯಾರಿಗೆ ಬರಬೇಕು ಎಂದು. ಈ ಮಾತನ್ನು ಸ್ವಲ್ಪ ವಿಚಾರ ಮಾಡೋಣ. ಇದರ ಬಗ್ಗೆ ಕರ್ನಾಟಕ ರಾಜ್ಯದ ೪ ಕೋಟಿ ೫೦ ಲಕ್ಷ ಜನ ವಿಚಾರ ಮಾಡಲಿ. ಅಥವಾ ನಿಮ್ಮ ಆತ್ಮಕ್ಕೆ ಕೇಳಿಕೊಳ್ಳಿ ಯಾರಿಗೆ ನಾಚಿಕೆ ಬರಬೇಕೆಂದು. ನಾನು ಏನು ಹೇಳುತ್ತಿದ್ದೇನೆ ಎಂದರೆ, ಆವಾಗಲೂ ಭ್ರಷ್ಟಾಚಾರ ಇತ್ತು, ಫಿಲ್‌ಫಿರೇಜ್ ಇತ್ತು, ಅಪ್ರಾಮಾಣಿಕತೆ ಇತ್ತು. ಆ ಸಮಯದಲ್ಲಿ ತಾವು ರಾಜ್ಯಭಾರ ಮಾಡಿದಾಗ ಇದನ್ನು ಸರಿಪಡಿಸಿದ್ದಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಆಗ ಒಂದೇ ವರ್ಷದಲ್ಲಿ ತಾವು ೧೯೯೮ರಲ್ಲಿ ೧೭ ಪರ್ಸೆಂಟ್ ಮಾಡಿದ್ದಿರಿ, ೧೯೯೯-೨೦೦೦ಕ್ಕೆ ೨೩.೪ ಪರ್ಸೆಂಟ್ ಮಾಡಿದಿರಿ. ಅಂದರೆ ೧೯೯೮ರಲ್ಲಿ ೧೭ ಪರ್ಸೆಂಟ್ ಹೆಚ್ಚಾಯಿತು ಮತ್ತೆ ೨೩.೪ ಪರ್ಸೆಂಟ್ ಹೆಚ್ಚು ಮಾಡಿದಿರಿ. ಅಂದರೆ ಅಬೌಟ್ ೫೦ ಪರ್ಸೆಂಟ್ ಫೇರ್ಸ್‌ನ್ನು ಒಂದೇ ಸಾರಿ ನೀವು ಹೆಚ್ಚು ಮಾಡಿದ್ದಿರಿ. ತಮ್ಮದೇ ಭಾಷೆಯಲ್ಲಿ ನಾನು ಮಾತನಾಡಬೇಕಾದರೆ, ನೀವೂ ಮಿನಿಸ್ಟರ್ ಆಗಿದ್ದಿರಿ, ಕೆಲಸ ಮಾಡಿದವರು ಇದ್ದೀರಿ, ನಾನು ಮತ್ತೆ ಬೇರೆ ಶಬ್ದ ಉಪಯೋಗ ಮಾಡುವುದಿಲ್ಲ. ನಿಮ್ಮ ಶಬ್ದವನ್ನು ನಿಮಗೆ ಕೊಡುತ್ತೇನೆ. ನೀವೇ ವಿಚಾರಮಾಡಿಕೊಳ್ಳಿರಿ. ಎಷ್ಟರಮಟ್ಟಿಗೆ ಯಾರು ಸರಿ ಇದ್ದಾರೆ ಎಂಬುದನ್ನು ವಿಚಾರ ಮಾಡಿಕೊಳ್ಳಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಾನು ಕೂಡ ಸಾರಿಗೆ ಮಂತ್ರಿಯಾಗಿ ೨೭ ತಿಂಗಳುಗಳ ಕಾಲ ಇದ್ದೆ. ಅದಕ್ಕೆ ನೀವು ಫರ್‌ಪಾರ್ಮೆನ್ಸ್ ಇಂಪ್ರೂವ್ ಮಾಡಿಲ್ಲ, ಇಂಪ್ರೂವ್ ಮಾಡಿದ್ದರೆ

ಈ ಗತಿಗೆ ಸಂಸ್ಥೆ ಬರುತ್ತಿರಲಿಲ್ಲ ಎಂದು ಹೇಳುತ್ತಿದ್ದೀರಿ. ನಾನು ಇದನ್ನು ಚಾಲೆಂಜ್ ಆಗಿ ತೆಗೆದುಕೊಳ್ಳುತ್ತೇನೆ. ಇದಕ್ಕೆ ನೀವು ಒಬ್ಬ ಹೈಕೋರ್ಟ್ ಜಡ್ಜ್‌ನ್ನು ನೇಮಕ ಮಾಡಿ. ಅದಕ್ಕೆ ಒಂದು ಎನ್‌ಕ್ವಾಯರಿ ಕಮಿಶನ್‌ನ್ನು ನೇಮಕ ಮಾಡಿ. ನಮ್ಮ ಕಾಲದಲ್ಲಿ ನಾವು ಏನೇನು ಆಡಳಿತಾತ್ಮಕ ನಿರ್ಣಯಗಳನ್ನು ತೆಗೆದುಕೊಂಡಿದ್ದೇವೆ, ಯಾವುದನ್ನು ತೆಗೆದುಕೊಳ್ಳ ಬೇಕಾಗಿತ್ತು, ಯಾವುದನ್ನು ತೆಗೆದುಕೊಳ್ಳಬಾರದಾಗಿತ್ತು, ಎಂಬ ಬಗ್ಗೆ ವಿಚಾರಣೆಯ ಮೂಲಕ ಹೊರಗೆ ಬರಲಿ. ಹಾಗೆಯೇ ನಿಮ್ಮ ಸರಕಾರ ಬಂದು ಮೂರು ವರ್ಷಗಳಲ್ಲಿ ಏನೇನು ಮಾಡಿದೆ ಎಂಬ ಬಗ್ಗೆಯೂ ವಿಚಾರಗಳು ಬರಲಿ. ಅದೆಲ್ಲಕ್ಕೂ ನಾವು ತಯಾರಾಗಿದ್ದೇವೆ. ನಾನು ಹೇಳಿದ ಪ್ಯಾರಾಮೀಟರ್ಸ್ ಪ್ರಕಾರ ಸಂಸ್ಥೆಯಲ್ಲಿ ೮೦ ಕೋಟಿ ರೂಪಾಯಿಗಳನ್ನು ೧೨ ತಿಂಗಳೊಳಗಾಗಿ ಇಂಪ್ರೂವ್ ಮಾಡುವುದಕ್ಕೆ ಸಾಧ್ಯವಿದೆ. ಅದು ಆ ಪ್ರಕಾರವಾಗಿ ಆಗದಿದ್ದರೆ ನಾನು ಮೆಂಬರ್‌ಶಿಪ್‌ನಿಂದ ಹೊರಬರುತ್ತೇನೆ ಎಂದು ಕೂಡ ಹೇಳಿದ್ದೇನೆ. ಇದಕ್ಕಿಂತ ಹೆಚ್ಚಿಗೆ ಏನು ಹೇಳುವುದಕ್ಕೆ ಸಾಧ್ಯವಿದೆ.

ಶ್ರೀ ಭೀಮಣ್ಣ ಖಂಡ್ರೆ:- ಹಾಥ್‌ಕಂಗನ್‌ಕೋ, ಕಂಗನ್ ಕಾ ಜರೂರತ್ ನಹೀ. ಅಂದರೆ ಅಂಗೈ ನೋಡಲು ಕನ್ನಡಿಯು ಬೇಕಾಗಿಲ್ಲ. ಹೈಕೋರ್ಟ್‌ಗೆ ಹೋಗುವ ಜರೂರತ್ ಈ ವಿಚಾರದಲ್ಲಿ ಬೇಕಾಗಿಲ್ಲ. ನಮ್ಮಲ್ಲಿರುವ ಸಂಸ್ಥೆಯ ರಿಕಾರ್ಡ್‌ಗಳನ್ನು ನೋಡಿದರೆ ಎಲ್ಲವೂ ತಿಳಿಯುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನೀವು ಅಧಿಕಾರಕ್ಕೆ ಬಂದು ಎರಡು ತಿಂಗಳುಗಳು ಮಾತ್ರ ಆಗಿದೆ. ಹಾಗಾಗಿ ನಿಮ್ಮ ಅಧಿಕಾರಿಗಳು ಸಂಗ್ರಹಿಸಿ ಕೊಟ್ಟಿದ್ದನ್ನು ನೀವು ಓದುತ್ತಾ ಇದ್ದೀರಿ ಎಂದು ನಾನು ಹೇಳಿದೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ನಾವು ಈ ವಿಚಾರ ಕುರಿತಂತೆ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. ಅದಕ್ಕೆ ಸೂಕ್ತ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕು. ಅದನ್ನು ಬಿಟ್ಟು ನೀವು ೧೯೮೬ರಲ್ಲಿ ಹೀಗೆ ಮಾಡಿದ್ದೀರಿ ಎಂದೆಲ್ಲಾ ಹೇಳುತ್ತಾ ಹೋದರೆ ನಮಗೆ ಏನು ಪರಿಹಾರವು ಸಿಕ್ಕಹಾಗೆ ಆಯಿತು? ಇದರಿಂದ ಯಾವ ಪರಿಹಾರವೂ ಸಿಗಲು ಸಾಧ್ಯವಿಲ್ಲ. ಇವೊತ್ತು ಮಾನ್ಯ ಸಾರಿಗೆ ಸಚಿವರು ತಾವುಗಳು ಬಂದ ಮೇಲೆ ಸಂಸ್ಥೆಯಲ್ಲಿ ಯಾವ ರೀತಿಯಲ್ಲಿ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಮಾಡಿದ್ದಾರೆ ಎಂಬ ಬಗ್ಗೆ ಹೇಳಬೇಕು. ಅಲ್ಲಿ ನಡೆಯುತ್ತಿರುವ ಸೋರಿಕೆಯನ್ನು ತಡೆಗಟ್ಟಲು ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಹೇಳಬೇಕು. ಬಸ್ ರೇಟ್ ಹೆಚ್ಚಿಗೆ ಮಾಡಿದ ಬಗ್ಗೆ ಸೂಕ್ತ ಕಾರಣಗಳನ್ನು ಹೇಳಬೇಕು.

ಶ್ರೀ ಭೀಮಣ್ಣ ಖಂಡ್ರೆ:- ಮಾನ್ಯ ವಿರೋಧ ಪಕ್ಷದ ನಾಯಕರು ದಯಮಾಡಿ ನಾನು ನನ್ನ ಉತ್ತರವನ್ನು ಹೇಳಿದ ಮೇಲೆ ಹೇಳುವ ಕೃಪೆ ಮಾಡಬೇಕು. ನಾನು ಒಂದು ಹೇಳುತ್ತಾ ಇದ್ದೇನೆ ಅದಕ್ಕೆ ತಾವುಗಳು ಇನ್ನೊಂದು ವಿಚಾರವಸ್ನು ಹೇಳುತ್ತಾ ಇದ್ದೀರಿ. ಇದು ಸರಿಯಲ್ಲ. ನೀತಿ, ನಿಯಮಗಳು, ಕಾನೂನುಗಳು ಎಲ್ಲರಿಗೂ ಒಂದೇ ರೀತಿಯಲ್ಲಿ ಇರುತ್ತದೆ. ಪ್ರತಿಯೊಬ್ಬರಿಗೂ ರೂಲ್ಸ್ ಬೇರೆ ಬೇರೆ ಇದೆಯೇ? ಆಕ್ಟ್‌ಗಳು ಬೇರೆ ಬೇರೆ ಇದೆಯೇ? ಪ್ರೊಸೀಜರ್ಸ್ ಬೇರೆ ಬೇರೆ ಇದೆಯೇ? ಈ ಮಾತನ್ನು ನಾನು ತಮಗೆ ಕೇಳುತ್ತಾ ಇದ್ದೇನೆ. ನೀವು ನನಗೆ ಕೇಳುತ್ತಿದ್ದ ಹಾಗೆ ನಾನು ನಿಮ್ಮನ್ನು ಕೇಳುತ್ತಿದ್ದೇನೆ. ನಾವು ೨೫ ಪರ್ಸೆಂಟ್ ದರವನ್ನು ಜಾಸ್ತಿ ಮಾಡಿದಾಗ ಸಾವಿರಾರು ಪ್ರಶ್ನೆಗಳನ್ನು ನಮಗೆ ಹಾಕುತ್ತೀರಿ, ಇದೇ ಮಾತನ್ನು ನಾನು ನಿಮಗೆ ಕೇಳುತ್ತಾ ಇದ್ದೇನೆ. Is it not relevant?

ಇವೊತ್ತು ತಾವುಗಳು ಜನರು ಕಣ್ಣೀರು ಹಾಕುತ್ತಾ ಇದ್ದಾರೆಂದು ಹೇಳಿದ್ದೀರಿ. ಆ ಸಮಯದಲ್ಲಿ ನೀವುಗಳು ಮಂತ್ರಿಗಳು ಆಗಿದ್ದಾಗ, ತಮ್ಮ ಸರಕಾರವು ಇದ್ದಾಗ, ನೀವು ೫೦

ಪರ್‌ಸೆಂಟ್‌ನಷ್ಟು ಹೆಚ್ಚಿಗೆ ಮಾಡಿದ್ದೀರಿ. ಆಗ ಡೀಸೆಲ್ ರೇಟ್ ಕೂಡ ಜಾಸ್ತಿಯಾಗಿರಲಿಲ್ಲ. ಆದರೂ ಕೂಡ ನೀವು ದರವನ್ನು ಹೆಚ್ಚು ಮಾಡಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಾವು ಆ ಸಮಯದಲ್ಲಿ ಸಕಾರಣವಾಗಿ ಬೆಲೆ ಏರಿಕೆ ಮಾಡಿದಾಗ ನೀವುಗಳು ಮಾತನಾಡಲಿಲ್ಲ. ಅದರ ಬದಲು ನಮ್ಮನ್ನು ಹೊಗಳಿ ಮಲ್ಲಿಗೆ ಹಾರವನ್ನು ನಮಗೆ ಹಾಕಿದ್ದೀರಿ. ನೀವು ಈಗ ಇಲ್ಲಿ ಕೊಟ್ಟ ಅಂಕಿಅಂಶಗಳನ್ನು ನಾನು ಒಪ್ಪುವುದಿಲ್ಲ. ಇದೆಲ್ಲವನ್ನೂ ವಿಚಾರ ಮಾಡಲು ಒಬ್ಬ ಹೈಕೋರ್ಟ್ ಜಡ್ಜ್‌ನ್ನು ನೇಮಕ ಮಾಡಿ ವಿಚಾರಣೆ ಮಾಡಿಸಿ, ಆಗ ಎಲ್ಲರ ವಿಚಾರವೂ ಗೊತ್ತಾಗುತ್ತದೆ. ಆ ಬಗ್ಗೆ ಹೇಳುವುದನ್ನು ಬಿಟ್ಟು ಯಾರೋ ಅಧಿಕಾರಿಗಳು ಬರೆದುಕೊಟ್ಟಿದ್ದನ್ನು ಇಲ್ಲಿ ತಂದು ಓದುತ್ತೀರಿ. ಸಂಸ್ಥೆಯ ವಿಚಾರ ನನಗೆ ಗೊತ್ತಿಲ್ಲವೆ?

SRI BHEEMANNA KHANDRE:- Do you deny that?

SRI P.G.R. SINDHIA:- You will please appoint an enquiry commission can you accept my challenge?

ಶ್ರೀ ಭಿಮಣ್ಣ ಖಂಡ್ರೆ:- ನಾನು ಹೇಳಿದ್ದನ್ನು ಒಪ್ಪಿ ಅಥವಾ ಒಪ್ಪದೆ ಇರಿ. ಆದರೆ ಅಬ್ಜೆಕ್ಷನ್ ಮಾಡುವುದಕ್ಕಾದರೂ ಒಂದು ಮಿತಿ ಎಂಬುದು ಇದೆ. ಅದನ್ನು ಬಿಟ್ಟು ಪ್ರತಿಯೊಂದು ಮಾತಿಗೂ ಹೀಗೆ ಹೇಳಿದರೆ ಹೇಗೆ? ಯಾವ ಸಚಿವರೇ ಆದರೂ ಕೂಡ ಅವರು ಅಧಿಕಾರಿಗಳು ಕೊಟ್ಟ ಮಾಹಿತಿಗಳನ್ನು ಹೇಳಬೇಕಾಗುತ್ತದೆ. ಹಾಗಾದರೆ ತಾವುಗಳು ಮಂತ್ರಿಯಾಗಿದ್ದಾಗ ಯಾವ ರಿಕಾರ್ಡ್ಸ್‌ನ ಮೇಲೆ ಮಾತನಾಡಿದ್ದೀರಿ? ನಿಮ್ಮ ಸ್ವಂತವಾದ ರಿಕಾರ್ಡ್ಸ್ ಏನಾದರೂ ಇತ್ತೇ? ಅಥವಾ ಅದನ್ನು ಸಂಸ್ಥೆಯಿಂದ ಪಡೆದುಕೊಂಡಿದ್ದೀರಾ? ಯಾರೇ ಆವರೂ ಕೂಡ ಸರಕಾರದಲ್ಲಿರುವ ರಿಕಾರ್ಡ್ಸ್‌ನ ಮೇಲೆಯೇ ಮಾತನಾಡ ಬೇಕಾಗುತ್ತದೆ. ಈ ರೆಕಾರ್ಡ್ ಸರಿಯಿಲ್ಲ ಅದು ಯಾರೋ ಮಾಡಿದ್ದಾರೆ, ಸೆಕ್ರೆಟರಿ ಮಾಡಿದ್ದಾರೆ ಎಂದರೆ ಮತ್ತೆ ನೀವಿದ್ದಾಗ ಯಾರು ಮಾಡಿದರು? ಸೆಕ್ರೆಟರಿ ಮಾಡಲಿಲ್ಲ? ಸರ್ಕಾರ ಬೇರೆ ಇತ್ತಾ? ಸರ್ಕಾರ ಸರ್ಕಾರ, ಸೆಕ್ರೆಟರಿ ಸೆಕ್ರೆಟರಿ- ಅವರು ಏನು ಮಾಡಿದ್ದಾರೆ ಅದನ್ನು ನೀವು ಓದಿರಬಹುದಲ್ಲ, ಅಂದಮೇಲೆ ಅದಿಲ್ಲ ಎಂದು ನಾನೇನು ಕೇಳಲಿಲ್ಲ. If you deny record, then what can I say? People will rudge what you say and what I say. ನಾನು ಹೇಳುತ್ತಿದ್ದೆ, ೧೭ ಮಾಡಿದಿರಿ, ಅದನಂತರ ೨೬ ಮಾಡಿದಿರಿ, ನಂತರ ಈಗ ನಾವು ೨೫ ಮಾಡಿದ್ದಕ್ಕೆ ನೀವು ಆಕ್ಷೇಪ ಮಾಡುತ್ತಿದ್ದೀರಿ. ಇವತ್ತು ಡೀಸೆಲ್ ರೇಟ್ ಕಂಪೆರೆಟೀವ್ ಮಾಡಿದರೆ ಆ ಸಮಯದಲ್ಲಿ ಎಷ್ಟು ಇತ್ತು ಅದಕ್ಕಿಂತ ನಾಲ್ಕು ಪಟ್ಟು ಹೆಚ್ಚಾಗಿದೆ ಎನ್ನುವುದನ್ನು ನೀವು ಒಪ್ಪಬೇಕು, ಒಪ್ಪದಿದ್ದರೆ ರೆಕಾರ್ಡ್ಸ್ ತರಿಸಿ ಇಡುತ್ತೇನೆ. ಅಂದಮೇಲೆ ಈಗ ನಾನು ನಿಮಗೆ ಕೇಳುತ್ತೇನೆ, ನೀವು ಮಾತಾಡುವಾಗ ಒಂದು ಕಾನೂನು, ಒಂದು ಸ್ಟಾಂಡರ್ಡ್, ಮತ್ತೆ ನಾವು ಮಾಡುವಾಗ ಅದು ಮತ್ತೊಂದು ಸ್ಟಾಂಡರ್ಡ್, ಹೇಗೆ ಆಗುತ್ತದೆ? ಅದಕ್ಕೆ ನಮ್ಮ ದೇಶಪಾಂಡೆಯವರು ನಿಮಗೆ ನೈತಿಕ ಹಕ್ಕಿದೆಯೋ ಎಂದು ಕೇಳಿದರು. ನಾನು ಅದೇ ಪ್ರಶ್ನೆ ನಿಮಗೆ ಕೇಳುತ್ತೇನೆ, ನಿಮಗೆ ನೈತಿಕ ಹಕ್ಕು ಇದೆಯೋ ಎಂದು. ಯಾವ ಜನ ತಾವು ಕುರ್ಚಿಯಲ್ಲಿದ್ದಾಗ ೫೦ ಪರ್ಸೆಂಟ್ ಏರಿಸಿದಿರಿ, ಕಡಿಮೆ ಮಾಡಲಿಲ್ಲ, ಆವಾಗ ಕಣ್ಣೀರು ಬಂದಿಲ್ಲ, ಜನರಿಗೆ ಎಷ್ಟು ತ್ರಾಸವಾಗಿದೆ ಎಂದು ನೋಡಲಿಲ್ಲ. ಬಡವರು ಸಾಯುತ್ತಿದ್ದಾರೆಂದು ನೋಡಲಿಲ್ಲ, ಆತ ಹೇಗೆ ಬರಬೇಕು ಎಂದು ಯೋಚಿಸಲಿಲ್ಲ. ಇವತ್ತು ಇಡೀ ದೇಶದಲ್ಲೇ ರೇಟ್ ಏರಿದಾಗ ನಾವು ೨೦-೨೫ ಪರ್ಸೆಂಟ್ ಏರಿಕೆ ಮಾಡಿದಾಗ ಎಷ್ಟು ಅಳುತ್ತಿದ್ದೀರಲ್ಲ, ನಿಮಗೆ ಎಷ್ಟು ಚಿಂತೆಯಾಗುತ್ತಿದೆಯಲ್ಲ. ಇದು ಪೊಲಿಟಿಕ್ಸ್.

SRI R.V. DESHPANDE:- I would enlighten it. ಮಾನ್ಯ ಸಚಿವರು, ನಿಮ್ಮ ಸರ್ಕಾರ ಇದ್ದಾಗ ಎರಡು ಬಾರಿ ಹೆಚ್ಚಿಸಿದ್ದೀರಿ ಎಂದು ಹೇಳಿದರು. ಒಮ್ಮೆ ೧೭ ಪರ್ಸೆಂಟ್, ಮತ್ತೊಮ್ಮೆ ೨೬ ಪರ್ಸೆಂಟ್. ಒಟ್ಟು ೪೩ ಪರ್ಸೆಂಟ್ ಆಯಿತು. ೧೯೮೩ರಿಂದ ೮೯ರವರೆಗೆ ಆರೂವರೆ ವರ್ಷ ನಾವು ಅಧಿಕಾರದಲ್ಲಿದ್ದು ಏರಿಸಿದ್ದು ೪೩ ಪರ್ಸೆಂಟ್, ನೀವು ಅಧಿಕಾರಕ್ಕೆ ಬಂದು ೩ ವರ್ಷವಾಗಿಲ್ಲ, ಶ್ರೀ ವೀರೇಂದ್ರ ಪಾಟೀಲ್‌ರವರು ಇದ್ದಾಗ ೨೬ ಪರ್ಸೆಂಟ್, ಇದು ೨೫ ಪರ್ಸೆಂಟ್- ನಿಮಗೆ ನಾಚಿಕೆ ಬರಬೇಕು. ೩ ವರ್ಷಗಳಲ್ಲಿ ೫೨ ಪರ್ಸೆಂಟ್ ಏರಿಸಿದ್ದೀರಿ.

ಶ್ರೀ ಭೀಮಣ್ಣ ಖಂಡ್ರೆ:- ಒಂದು ಮಾತು ಹೇಳಬೇಕಾಗಿದೆ. ನಿಮಗೆ ನಾಚಿಕೆ ಬರಬೇಕು ಎನ್ನುವ ಪದವನ್ನು ಬಳಸಿದ್ದೀರಿ. ನೀವು ಹಿರಿಯರಿದ್ದೀರಿ, ನಾನು ಅದನ್ನು ಉಪಯೋಗ ಮಾಡುವುದಿಲ್ಲ. ಆದರೆ ಒಂದು ಮಾತನ್ನು ಹೇಳುತ್ತೇನೆ. ಒಬ್ಬ ರಾಜನ ಸವಾರಿ ಹೊರಟಿತ್ತು.

(ಗೊಂದಲ)

ಶ್ರೀ ಭೀಮಣ್ಣ ಖಂಡ್ರೆ:- ಇವರಿಗೆ ತಾಳ್ಮೆ ಏಕಿಲ್ಲ ನೀವು ೪ ಗಂಟೆಗೆ ೪ ಮಂದಿ ಮಾತಾಡಿದರೆ ನಾವೇನೂ ಅನ್ನಲಿಲ್ಲ, ನಾನು ಮಾತಾಡಿದರೆ ನಿಮಗೆ ಏಕೆ ಕಷ್ಟವಾಗುತ್ತದೆ. ಸತ್ಯ ನಿಮಗೆ ಸೂಜಿಯಂತೆ ಚುಚ್ಚುತ್ತಿದೆ. ಒಬ್ಬ ರಾಜನ ಸವಾರಿ ಹೊರಟಾಗ ಒಬ್ಬ ಭಿಕ್ಷುಕ ರೋಡಿನಲ್ಲಿ ಕುಳಿತಿದ್ದ. ಆಗ ಒಬ್ಬ ಕಾನ್‌ಸ್ಟೇಬಲ್ ಬಂದು ಆ ಭಿಕ್ಷುಕನಿಗೆ ಒದ್ದುಬಿಟ್ಟ. ಸೌಲಾಯಾಹ ಬೈಟ್ಯಾ ನಿಕಲ್‌ಜಾಯಂಹಾಸೆ, ಇಸ್‌ಲಿಯೇ ಅನ್ನುವನು. ಒಬ್ಬ ಎಸ್.ಪಿ. ಬಂದ: ಅರೆ ಯಂಹ ಬೈಟ್ಯಾ ತು; ನಿಕಲ್‌ಜಾಯಂಹಾಸೆ. ಇಸ್‌ಲಿಯೇ ಅಂದ, ಮತ್ತೆ ಒಬ್ಬ ವಜೀರ್ ಬಂದ, ಏಕೆ ಇಲ್ಲಿ ಕುಳಿತಿರಿ, ದೂರ ಸರಿಯಿರಿ ಅಂದ, ಇಸಿಲಿಯೇ ಎಂದ. ಅನಂತರ ರಾಜ ಬಂದಾಗ ಸವಾರಿಯಿಂದ ಇಳಿದು ಅವನನ್ನು ಕರೆಸಿ ನಿಮಗೆ ಏನು ಬೇಕು ಎಂದು ಕೇಳಿ ತೊಂದರೆ ಏನಿತ್ತು ಅದಕ್ಕೆ ಪರಿಹಾರ ಮಾಡಿದ. ಅದಕ್ಕೆ ಇಸಿಲಿಯೇ ಅನ್ನುವನು. ಅದಕ್ಕೆ ನೀವು ಯಾವ ಭಾಷೆ ಉಪಯೋಗ ಮಾಡುತ್ತಿದ್ದೀರಿ. ಅದು ನಿಮಗೇ ಸಲ್ಲುವುದು, ನಮಗೆ ಸಲ್ಲುವುದಿಲ್ಲ. ಅದಕ್ಕಾಗೇ ನಾವು ಇಲ್ಲಿ, ನೀವಲ್ಲಿ, ಇಸ್‌ಲಿಯೇ ಜನ ನೋಡಿಕೊಂಡು ಕೇಳಿಕೊಂಡು ಯಾರ ಸ್ಟ್ಯಾಂಡರ್ಡ್ ಎಷ್ಟು ಎಂದು ತಿಳಿದುಕೊಂಡು ಮಾಡಿದ್ದಾರೆ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಆ ಇಸಿಲಿಯೇ ನಿಮಗೆ ಅನ್ವಯವಾಗುವುದು ಬೇಡ. ನೀವು ಈ ಕಡೆ ಬಂದು ನಾವು ಆ ಕಡೆಗೆ ಬಂದರೆ ಆ ಇಸಿಲಿಯೇ ಆದೀತು ಎಂದು ಹೇಳುತ್ತಿದ್ದೇನೆ.

ಶ್ರೀ ಭೀಮಣ್ಣ ಖಂಡ್ರೆ:- ಈಗ ನಾವು ೨೨-೨೫ ಪರ್ಸೆಂಟ್ ಎಂದು ಹೇಳಿದ್ದೇವೆ. ಆ ದೃಷ್ಟಿಯಿಂದ ನಾನು ಕೇಳುತ್ತಿದ್ದೇನೆ, ನಮ್ಮಲ್ಲಿ ಇವತ್ತಾದರೂ ಬೇರೆಯವರಿಗಿಂತಲೂ ಕಡಿಮೆ ಇದೆ ಎನ್ನುವ ಮಾತನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಬೇರೆ ಸ್ಟೇಟ್‌ನಲ್ಲಿ ಎಷ್ಟಿದೆ, ಅದಕ್ಕಿಂತಲೂ ಇದು ಕಡಿಮೆ ಇದೆ ಎಂದು ನಿಮ್ಮ ಮುಂದೆ ಇಟ್ಟಿದ್ದೇನೆ. ಅದಕ್ಕಾಗಿ ನಾವು ವಿಶೇಷವಾಗಿ ಇದಕ್ಕೇನೂ ಮಾಡುವುದಕ್ಕೆ ಹೋಗಿಲ್ಲ. ಈ ವಿಷಯದಲ್ಲಿ ವಿರೋಧ ಪಕ್ಷದವರನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡಿದ್ದೀರಾ ಎನ್ನುವ ಪ್ರಶ್ನೆ ಬಂತು. ನಾನು ತಮಗೆ ಹೇಳುತ್ತೇನೆ, ಇದು ಟ್ಯಾಕ್ಸ್ ಅಲ್ಲ. ಸರ್ವೀಸ್ ಮಾಡಿದ್ದಕ್ಕೆ ಒಂದು ಜಾಸ್ತಿ ಮಾಡಿರುವುದು. ಆ ದೃಷ್ಟಿಯಿಂದ ನೋಡಿದರೆ ಈ ವಿಷಯವನ್ನು ವಿಧಾನಸಭೆಯಲ್ಲಿ ಇಡುವುದು ಅಥವಾ ಕ್ಯಾಬಿನೆಟ್‌ನಲ್ಲಿ ಇಡುವುದು ಅವಶ್ಯಕತೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಸಭೆಯನ್ನು ಅರಳಿಮರದ ಕೆಳಗಡೆ ಮಾಡಿಬಿಡಿ, ಯಾರನ್ನು ಕೇಳುವುದು ಬೇಡ. ಲಂಗು ಇಲ್ಲ, ಲಗಾಮು ಇಲ್ಲ. ಅವರ ಇಷ್ಟ ಬಂದ ಹಾಗೆ ಮಾಡಬೇಕು.

ಶ್ರೀ ಭೀಮಣ್ಣ ಖಂಡ್ರೆ:- ನಿಮ್ಮನ್ನು ಕೇಳುವ ಸಲುವಾಗಿ ನಾವು ನಿಮಗೆ ನಾಲ್ಕು ಸಾರಿ ಇನ್‌ವೈಟ್ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ಯಾರಿಗೆ ಸ್ವಾಮಿ?

ಶ್ರೀ ಆರ್.ವಿ. ದೇಶಪಾಂಡೆ:- ಯಾವ ಡೇಟ್‌ನಲ್ಲಿ ಕರೆದಿರಿ?ಶ್ರೀ ಭೀಮಣ್ಣ ಖಂಡ್ರೆ:- ನನಗೆ ಬಹಳ ಆಶ್ಚರ್ಯವಾಗುತ್ತದೆ ಶ್ರೀಮಾನ್ ದೇಶಪಾಂಡೆಯವರೇ, ನೀವೇ ೨೫ ವರ್ಷದ ಹುಡುಗನ ತರಹ ಈ ರೀತಿಯಾದರೆ ಹೇಗೆ? be patient. ನಾವು ಏನು ಮಾಡಿದ್ದೇವೆ, ರೇಟ್ಸ್ ಹೆಚ್ಚಿಸಿದ್ದೇವೆ.........

ಶ್ರೀ ವಾಟಾಳ್ ನಾಗರಾಜ್:- ನಮ್ಮನ್ನು ಕರೆದದ್ದು ಯಾವಾಗ ಹೇಳಿ ಸ್ವಾಮಿ?

SRI BHEEMANNA KHANDRE:- Under FTD, 144, TRA 89, dated 4.5.1990.

ಆ ನೋಟಿಫಿಕೇಷನ್ ಪ್ರಕಾರ ಏರಿಸಿ ಅದರ ಬಗ್ಗೆ ಮಾತನಾಡುವಾಗ ನಿಮ್ಮನ್ನು ಇನ್‌ವೈಟ್ ಮಾಡಿದ್ದೇವೆ, ಶ್ರೀಮಾನ್ ಅಜೀಜ್‌ಸೇಠ್‌ರವರು ಇದ್ದಾಗ. ಶ್ರೀಮಾನ್ ಅಜೀಜ್‌ಸೇಠ್‌ರವರು ಇದ್ದಾಗ ತಮ್ಮನ್ನು ಕರೆದಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ:- ಆಗ ಮಾನ್ಯ ಮುಖ್ಯಮಂತ್ರಿಗಳು ಬಂಗಾರಪ್ಪನವರು ತಾನೇ?

ಶ್ರೀ ಭೀಮಣ್ಣ ಖಂಡ್ರೆ:- ಹೌದು.

" Assurance made on the floor of the House that the Government would consult the Corporation, opposition leaders before announcing the hike in prices. In the first instance opposition leaders, MLAs are invited for discussion on 30.01.1992 and 4.5.1992 by the previous Ministry of Transport".

There is a record. On all the occasions the opposition MLAs did not attend the meeting ".

ಶ್ರೀ ವಾಟಾಳ್ ನಾಗರಾಜ್:- ಆಗ ಬಿ.ಡಿ. ಜತ್ತಿಯವರು ಇದ್ದಾಗ ಒಂದು ಸಾರಿ ಕರೆದಿದ್ದರು.

ಶ್ರೀ ಕೆ.ಎಸ್. ಈಶ್ವರಪ್ಪ:- ದೇವರಾಜ ಅರಸ್‌ರವರು ಒಂದು ಸಾರಿ ಕರೆದಿದ್ದರಂತೆ.

ಶ್ರೀ ಭೀಮಣ್ಣ ಖಂಡ್ರೆ:- ೪-೫-೯೨.

ಶ್ರೀ ಪಿ.ಜಿಆರ್. ಸಿಂಧ್ಯ:- ಖಂಡ್ರೆಯವರೇ, ನೀವು ಕರೆದಿದ್ದೀರಾ ಹೇಳಿ. ತಾವು ಕರೆದಿದ್ದೀರಾ?

SRI BHEEMANNA KHANDRE:- The Government is the same.

ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ ಯಾರು ಕರೆದಿದ್ದರು ಹೇಳಿ. ನೀವೂ ಅವರೋ?

ಶ್ರೀ ಭೀಮಣ್ಣ ಖಂಡ್ರೆ:- ಅಜೀಜ್ ಸೇಠ್‌ರವರು.

ಶ್ರೀ ಕೆ.ಎಸ್. ಈಶ್ವರಪ್ಪ:- ಈ ರಾಜ್ಯದ ಜನರು ಕೇಳುತ್ತಿದ್ದಾರೆ, ಅಂಥ ಉತ್ತರವನ್ನು ಇವರು ಕೊಡಲಿ. ರಾಜ್ಯದ ಜನರು ಇವರ ಉತ್ತರವನ್ನು ನೋಡುತ್ತಿರುತ್ತಾರೆ.

ಶ್ರೀ ಭೀಮಣ್ಣ ಖಂಡ್ರೆ:- ನೀವು ಎರಡು-ಮೂರು ತಿಂಗಳಲ್ಲಿ ಬಂದಿರಬಹುದು. ಆದರೆ ಸರ್ಕಾರ ಮಾತ್ರ ಒಂದೇ. ಆ ದೃಷ್ಟಿಯಿಂದ ನೀವೇ ಜವಾಬ್ದಾರಿ ಇದ್ದೀರಿ, ಆದರೂ ನೀವೇ ಮಾತನಾಡುತ್ತಿದ್ದೀರಿ. ಈಗ ನಾನು ಹೇಳುವಾಗ ಬೇರೆಯವರು ಇದ್ದರು ಯಾರು ಎಂದು ಕೇಳಿದರೆ ಹೇಗೆ? ಏತಕ್ಕೆ ಡಬಲ್ ಸ್ಟಾಂಡರ್ಡ್ ನಿಮ್ಮದು ಎಂದು ನಾನು ಕೇಳುತ್ತಿದ್ದೇನೆ. ಇದು ಯಾರಿಗೂ ಗೊತ್ತಾಗುವುದಿಲ್ಲ, ಇದು ಪಬ್ಲಿಕ್‌ಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತೀರಾ? ಇದೆಲ್ಲಾ ಹೊರಗೆ ಥ್ರೂ ಪೇಪರ್ ಮುಖಾಂತರ ಹೋಗುತ್ತದೆ. ನೀವು ಏನು ಹೇಳುತ್ತಿದ್ದೀರಿ, ನಾನು ಏನು ಹೇಳುತ್ತಿದ್ದೇನೆ, ಎಲ್ಲಾ ಹೊರಗೆ ಹೋಗುತ್ತದೆ. ಮಾತನ್ನು ನೀವು ಸ್ವಲ್ಪ ತಿಳಿದು ಆಡಿ. ಆದರ ನಂತರ ಅದಕ್ಕೆ ಸ್ಟಿಕ್‌ಅಪ್ ಆಗಿ. ನೀವು ಛೇಂಜ್ ಮಾಡುವುದಕ್ಕೆ ಹೋದರೆ ಜನರು ತಿಳಿದುಕೊಳ್ಳುತ್ತಾರೆ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ, ಈ ಮಾತನ್ನು ಆಡುವಾಗ ಈ ಪ್ರಕಾರ ನೀವು ಮಾತನಾಡಬೇಡಿ. ಆಮೇಲೆ ನಿಮಗೆ ಏನು ಅವಶ್ಯಕತೆ ಇತ್ತು, ನೀವು ಏಕೆ ಈ ರೀತಿ ಮಾಡಿದ್ದೀರಿ ಎಂದು ಕೇಳಿದ್ದೀರಿ. ತಮಗೆ ಹೇಳಬೇಕಾದರೆ ನಾನು ಅಧಿಕಾರ ತೆಗೆದುಕೊಂಡ ನಂತರ ಎರಡು-ಮೂರು ಮೀಟಿಂಗ್ ಕರೆದು ಅವರಿಗೆ ಎಂಟು ಪಾಯಿಂಟ್ ಪ್ರೋಗ್ರಾಮನ್ನು ಕೊಟ್ಟಿದ್ದೇನೆ. ಅದು ೭೫ ಪರ್‌ಸೆಂಟ್ ಆಗಿದೆ. ಏನು ಬಸ್‌ನಲ್ಲಿ ಬೋರ್ಡ್ ಇದೆಯೆಲ್ಲಾ, ಆ ಬೋರ್ಡ್‌ಗಳನ್ನು ಹಾಕುವುದಕ್ಕೆ ಹೇಳಿದ್ದೇನೆ. ಅಲ್ಲಿ ಕುಡಿಯುವ ನೀರು ಇಲ್ಲ, ಲೆಟ್ರಿನ್, ಯೂರಿನಲ್ ಸಲುವಾಗಿ, ಲೇಡಿ ಸೀಟ್ ಸಲುವಾಗಿ, ಸ್ಮೋಕಿಂಗ್ ಸಲುವಾಗಿ, ಕ್ಲೀನ್‌ಲಿನಸ್ ಸಲುವಾಗಿ ಚೆಕಪ್ ಮಾಡುತ್ತಿದ್ದೇವೆ. ಅದು ಆಗುತ್ತಿದೆ.

(ಗೊಂದಲ)

ಶ್ರೀ ಭೀಮಣ್ಣ ಖಂಡ್ರೆ:- ಇದು ಅಲ್ಲಾವುದ್ದೀನ್ ಲ್ಯಾಂಪ್ ಅಲ್ಲ. I don't see that there is any problem but it will take some time. ನೀವು ಮೂರು ನಾಲ್ಕು ವರ್ಷ ಇದ್ದಾಗ ಏನಾಯಿತು ಎಂದು ಹೇಳುತ್ತಿದ್ದೀರಿ. ಎರಡೇ ತಿಂಗಳಲ್ಲಿ ಇದನ್ನು ಎಕ್ಸ್‌ಪೆಕ್ಟ್ ಮಾಡಿದರೆ ಹೇಗಾಗುತ್ತದೆ. ಅದಕ್ಕೆ ಟೈಮ್ ಬೇಕು. ಆದ್ದರಿಂದ ಈ ಮಾತು ನಾವು ನೀವು ಏನಾದರೂ ಮಾಡಿದರೂ ಈ ಪಿಲ್‌ಫರೇಜ್ ಅಥವಾ ಈ ಕರಪ್‌ಶನ್ ಬುಡದಿಂದ ಹೋಗುವುದಿಲ್ಲ. ಇದು ಇಡೀ ಇಂಡಿಯಾದಲ್ಲಿಯೂ ಇದೆ. ಎಲ್ಲಾ ಸ್ಟೇಟ್‌ನಲ್ಲಿಯೂ ಇದೆ. ಪಾರ್ಲಿಮೆಂಟ್‌ನಲ್ಲಿಯೂ ಇದೆ. ತಮಗೆ ಹೇಳಬೇಕಾದರೆ, ಪ್ರಧಾನಿ ಮಂತ್ರಿಗಳು ಇದರ ಬಗ್ಗೆ ಎರಡು-ಮೂರು ಸಾರಿ ಹೇಳಿದ್ದಾರೆ. ಅದು ತಮ್ಮ ಗಮನದಲ್ಲಿ ಇರಬಹುದು. ದೆಹಲಿಯ ೧ ಕೋಟಿ ರೂಪಾಯಿ ಖರ್ಚಾಗುವುದಾದರೆ ಶೇಕಡ ೧೫ರಷ್ಟು ವಿಲೇಜಸ್ ಮುಟ್ಟುತ್ತದೆ. ಉಳಿದ ಶೇಕಡ ೮೫ರಷ್ಟು ಹಣ ಮಂದಿಯ ಜೇಬಿಗೆ ಹೋಗುತ್ತದೆ ಅನ್ನತಕ್ಕ ಮಾತನ್ನು ಹೇಳುತ್ತೇನೆ. ಇದು ನಿಮಗೂ ಗೊತ್ತು, ನಮಗೂ ಗೊತ್ತು. ನೀವು ಇದನ್ನು ಎಷ್ಟರಮಟ್ಟಿಗೆ ಕಡಿಮೆ ಮಾಡಿದ್ದೀರೋ, ಮಾಡಿಲ್ಲ ಎಂದು ನಾನು ಹೇಳುತ್ತಿಲ್ಲ. ಪ್ರಮಾಣಿಕ ರೀತಿಯಿಂದ ನಾವು ಮಾಡುತ್ತಿದ್ದೇವೆ ಎನ್ನತಕ್ಕ ಮಾತನ್ನು ನಾನು ಹೇಳುತ್ತಿದ್ದೇನೆ. ಹೋದ ಜನವರಿಯಿಂದ ನಾವು ಎಷ್ಟೆಷ್ಟು ಕೇಸಸ್ ಅನ್ನು ಹಾಕಿದ್ದೇವೆ ಅದನ್ನು ಹೇಳುತ್ತೇನೆ. ನವೆಂಬರ್ ನಿಂದ ೫೩೦೬ ಕೇಸಸ್ ಇವೆ. ಯಾರ್‍ಯಾರು ತಪ್ಪು ಮಾಡಿದಾರೆ ಎನ್ನುವ ಸಲುವಾಗಿ ಡಿಸೆಂಬರ್ ೧೯೯೨ರಲ್ಲಿ ೫೨೬೯ ಕೇಸಸ್ ಹಾಕಿದ್ದೇವೆ. ೧೯೯೩ನೇ ಜನವರಿಯಲ್ಲಿ ೫೯೩೧ ಕೇಸಸ್ ಹಾಕಿದ್ದೇವೆ. ನಾವು ಸುಮ್ಮನೆ ಕುಳಿತುಕೊಂಡಿಲ್ಲ. ರಾತ್ರಿಹಗಲು ತಿರುಗುತ್ತಿದ್ದೇವೆ. ಚೆಕ್‌ಅಪ್ ಮಾಡುತ್ತಿದ್ದೇವೆ. ಯಾರು ಆಫೀಸರ್ ಸರಿ ಇಲ್ಲ ಅವರಿಗೆ ಚೇಂಜ್ ಮಾಡಿ ಒಳ್ಳೆಯ ಆಫೀಸರನ್ನು ತಂದು, ಸರಿಯಾದ

ರೀತಿಯಲ್ಲಿ ಸೂಪರ್‌ವೈಸ್ ಮಾಡಬೇಕೆಂದು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ಎಷ್ಟರ ಮಟ್ಟಿಗೆ ಕಡಿಮೆಯಾಗಿದೆ ಎಂದು ಕೇಳಿದರೆ ಹೇಳಬಹುದು, ಹೋದ ಜನವರಿಗೂ ಮತ್ತು ಈ ಜನವರಿಗೂ ಹೋಲಿಸಿ ನೋಡಿದರೆ ನಾವು ೪ ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ಕಲೆಕ್ಟ್ ಮಾಡಿದ್ದೇವೆ. ಹೋದ ಸಾರಿ ೪೨ ಕೋಟಿ ರೂಪಾಯಿ ಕಲೆಕ್ಟ್ ಆಗಿತ್ತು. ಈ ಸಾರಿ ೪೬ ಕೋಟಿ ರೂಪಾಯಿ ಕಲೆಕ್ಟ್ ಮಾಡಿದ್ದೇವೆ. ಡಿಸೆಂಬರ್‌ನಲ್ಲಿ ಸ್ವಲ್ಪ ಕಡಿಮೆಯಾಗಿದೆ. ಇದಕ್ಕೆ ಕಾರಣವೇನೆಂದರೆ ಅಯೋಧ್ಯೆಯಲ್ಲಿ ಗಲಾಟೆ ಇತ್ತು, ಆದ್ದರಿಂದ ಕಡಿಮೆ ಕಲೆಕ್ಟ್ ಆಯಿತು. ಆದರೂ ಈ ಪ್ರಕಾರ ನಾವು ಮಾಡುತ್ತಿದ್ದೇವೆಂದು ಹೇಳುತ್ತೇನೆ. ಎಲ್ಲೆಲ್ಲಿ ತಪ್ಪಾಗಿದೆ, ಆ ತಪ್ಪನ್ನು ಯಾರೇ ಮಾಡಲಿ, ಇಲ್ಲಿ ಪೊಲಿಟಿಕಲ್ ಪ್ರಶ್ನೆ ಇಲ್ಲ. ಕೆಲಸ ಮಾಡುವಾಗ ಪ್ರಾಮಾಣಿಕವಾಗಿ ಮಾಡಬೇಕಾಗುತ್ತದೆ. ಆ ಸಮಯದಲ್ಲಿ ಬಸ್ ಬಾಡಿ ಬಿಲ್ಟ್ ಮಾಡಬೇಕಾದವರೆ ಆನೆಸ್ಟ್ ಆಗಿ ನಿಮಗೆ ಹೇಳಬೇಕಾದರೆ, ೨೨.೫೦೦ ರೂಪಾಯಿಗಳನ್ನು ಒಂದು ಬಸ್ಸಿಗೆ ಕೊಟ್ಟಿದ್ದು ಇತ್ತು, ಅದನ್ನು ಬಿಡಿಸಿದ್ದೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. In this way, we have saved 33 lakhs ಅದು ಹಾಗೆಯೇ ಇದ್ದಿದ್ದರೆ ಮತ್ತೆ ಒಂದು ಕೋಟಿವರೆಗೆ ಹೋಗುತ್ತಿತ್ತು. ಆ ಪ್ರಕಾರ ಇಲ್ಲಿಯವರೆಗೆ ಮಾಡಿದ್ದೇವೆ. ಮಾನ್ಯ ಸಿಂಧ್ಯರವರೆ, ತಾವು ಹೇಗೆ ಚೆಕ್‌ಅಪ್ ಮಾಡಿದ್ದೀರಿ, ನಾನೂ ಹಾಗೆಯೇ ಚೆಕ್‌ಅಪ್ ಮಾಡುತ್ತಿದ್ದೇನೆ. ೮-೧೦ ಜಾಗದಲ್ಲಿ ಮಾಡಿದ್ದೇವೆ. ಆ ಪ್ರಕಾರ ವಾರ್ನಿಂಗ್ ಕೊಟ್ಟಿದ್ದೇವೆ. ಯಾರಿಗೆ ಚೇಂಜ್ ಮಾಡಬೇಕೋ ಅವರಿಗೆ ಚೇಂಜ್ ಮಾಡಿದ್ದೇವೆ. ಯಾರಿಗೆ ಟ್ರಾನ್ಸ್‌ಫರ್ ಮಾಡಬೇಕೋ ಅವರಿಗೆ ಟ್ರಾನ್ಸ್‌ಫರ್ ಮಾಡಿದ್ದೇವೆ. ಆ ಪ್ರಕಾರ ಕೆಲಸ ಮಾಡುತ್ತಿದ್ದೇವೆಂದು ಹೇಳುತ್ತಿದ್ದೇನೆ. ಎಲ್ಲವನ್ನು ಒಮ್ಮೆ ಮಾಡುವುದಕ್ಕೆ ಆಗುವುದಿಲ್ಲ ಎನ್ನುವಂತಹ ಮಾತನ್ನು ನೀವು ಒಪ್ಪುತ್ತೀರಿ, ನಾವೂ ಒಪ್ಪುತ್ತೇವೆ. But, whatever we say, we must say it honestly. ಈ ಪ್ರಕಾರ ಆಗುತ್ತಿದೆ. ಇದನ್ನು ಮಾಡುವಾಗ ನಾವು ಪ್ರತಿಯೊಂದು ಮಾತಿಗೂ ಒಮ್ಮೆ ಸುಧಾರಿಸುವುದಕ್ಕೆ ಸಾಧ್ಯವಿಲ್ಲ. ಎಲ್ಲ ಜನರು, ತಾವೇನು ಹೇಳಿದ್ದೀರಿ ಅದನ್ನು ನಾನು ತತ್ವಶಃ ಒಪ್ಪುತ್ತೇನೆ. ಡ್ರೈವರ್, ಕಂಡಕ್ಟರ್, ಯಾರೇ ಆಗಲಿ ಮೇಲಿನಿಂದ ಕೆಳಗಡೆಯವರೆಗೂ ಡಿಸ್ಟ್ರಿಬ್ಯೂಟ್ ಮಾಡಿಕೊಂಡು ಪಾಲುದಾರರಾಗಿ ಮಾಡುತ್ತಿದ್ದಾರೆಂಬ ಮಾತನ್ನು ನಾನು ಒಪ್ಪುತ್ತೇನೆ. ಅದನ್ನು ಕಡಿಮೆ ಮಾಡಲು ಒಬ್ಬರಿಂದ ಸಾಧ್ಯವಿಲ್ಲ; ಕಾನೂನಿಂದ ಮಾಡಲಿಕ್ಕೆ ಸಾಧ್ಯವಿಲ್ಲ. ಸಮಾಜ ತಯಾರಾಗಬೇಕಾಗುತ್ತದೆ. ನಾವು ನೀವು ಕೂಡಿ ಮಾಡಬೇಕಾಗುತ್ತದೆ. ನಿಮ್ಮ ಸಹಕಾರ ನಮಗೆ ಬೇಕಾಗುತ್ತದೆ. ನಮ್ಮ ಸಹಕಾರವೂ ಬೇಕಾಗುತ್ತದೆ. ಈ ದೃಷ್ಟಿಯಿಂದ ನಾವಿಬ್ಬರೂ ಕೂಡಿ ಮಾಡೋಣ. ಆದರೆ ಸದ್ಯದ ಪರಿಸ್ಥಿತಿ ಏನೆಂದು ಹೇಳುತ್ತಿದ್ದೇನೆ. ನಮ್ಮ ಸ್ನೇಹಿತರಿಗೆ ಹೇಳುತ್ತಿದ್ದೇನೆ. ಈಗ ಏನು ಪರಿಸ್ಥಿತಿ ಇದೆ, ಆ ಪರಿಸ್ಥಿತಿಯಲ್ಲಿ ನಾವು ಮಾಡಬೇಕಾದರೆ ಯಾವುದು ಮೊದಲು ಮಾಡಬೇಕು, ಯಾವುದನ್ನು ನಂತರ ಮಾಡಬೇಕು ಎನ್ನುವುದು ಪ್ರಶ್ನೆಯಾಗಿದೆ. " ಹುಚ್ಚು ಹೋಗದೆ ಮದುವೆಯಾಗುವುದಿಲ್ಲ; ಮದುವೆಯಾಗದೆ ಹುಚ್ಚು ಹೋಗುವುದಿಲ್ಲ ". ಯಾವುದು ಮೊದಲು ಮಾಡಬೇಕೆನ್ನುವ ಪ್ರಶ್ನೆ ಬಂದಾಗ......

ಶ್ರೀ ವಾಟಾಳ್ ನಾಗರಾಜ್:- ಈಗ ನಿಮಗೆ ಹಿಡಿದಿರುವ ಹುಚ್ಚು ಯಾವುದೆಂದು ನನಗೆ ಗೊತ್ತಾಗಲಿಲ್ಲ.

ಶ್ರೀ ಭೀಮಣ್ಣ ಖಂಡ್ರೆ:- ಮಾನ್ಯ ವಾಟಾಳ್ ನಾಗರಾಜ್‌ರವರು ಬಹಳ ಹುಷಾರಾಗಿದ್ದಾರೆ. ಅವರು ಎಲ್ಲವನ್ನು ತಿಳಿದುಕೊಳ್ಳುತ್ತಾರೆ. ನೀವು ತಿಳಿದುಕೊಳ್ಳಿರಿ. ೨ ತಿಂಗಳಿಂದ ನಾವು ಪ್ರಯತ್ನ ಮಾಡಿ ೪ ಕೋಟಿ ರೂಪಾಯಿಗಳನ್ನು ಉಳಿಸಿದ್ದೇವೆ ಎನ್ನತಕ್ಕ ಮಾತನ್ನು ಪ್ರಾಮಾಣಿಕತೆಯಿಂದ ಹೇಳುತ್ತಿದ್ದೇನೆ. ಸೋರಿ ಹೋಗುತ್ತಿಲ್ಲ ಎಂದು ಅಲ್ಲ, ಬಹಳಷ್ಟು ಸೋರಿ ಹೋಗುತ್ತಿದೆ. ಅದರಲ್ಲಿ ಡೌಟ್ ಇಲ್ಲ. ಯಾರೂ ಡಿನೈ ಮಾಡುವುದಕ್ಕೆ ಸಾಧ್ಯವಿಲ್ಲ. ರೂಫ್ ಮೇಲೆ ೫೦ ಜನ ಕುಳಿತಿದ್ದರು ಎಂದು ತಾವು ಹೇಳಿದಿರಿ. ೫೦ ಜನರಲ್ಲಿ ಎಷ್ಟು ಜನ ಟಿಕೆಟ್

ತೆಗೆದುಕೊಂಡಿರುತ್ತಾರೆ ಎಷ್ಟು ಜನ ಟಿಕೆಟ್ ತೆಗೆದುಕೊಂಡಿರುವುದಿಲ್ಲ ಎಂದು ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಬಸ್ ಪ್ರಯಾಣದರ ಈಗ ಹೆಚ್ಚಾಗಿದೆ, ಒಪ್ಪುತ್ತೇವೆ. ವಿದ್ಯಾರ್ಥಿಗಳು ಒಂದು ಸಲ ಕಾಲೇಜಿಗೆ ಹೋಗುವ ಸಲುವಾಗಿ ೧೦ ಸಲ ತಿರುಗುತ್ತಾರೆನ್ನುವ ಉದಾಹರಣೆಯೂ ಇದೆ, ಇಲ್ಲ ಎಂದಲ್ಲ. ಇದನ್ನೆಲ್ಲಾ ಚೆಕ್-ಅಪ್ ಮಾಡಿ ಸರಿಪಡಿಸಬೇಕಾದರೆ ಎಲ್ಲರ ಸಹಕಾರ ಅತ್ಯಗತ್ಯ.

ಶ್ರೀಮತಿ ದಮಯಂತಿ ಬೋರೇಗೌಡ: ಹರಿ, ಹರ, ಬ್ರಹ್ಮ ಬಂದರೂ ಕೆ.ಎಸ್.ಆರ್.ಟಿ.ಸಿ.ಯಲ್ಲಿ ದುಡ್ಡು ಸೋರಿಕೆಯಾಗುತ್ತಿರುವುದನ್ನು ತಪ್ಪಿಸುವುದು ಸಾಧ್ಯವಿಲ್ಲ. ಬಿಟಿಎಸ್ ಆದರೂ ತಾವು ಖಾಸಗೀಕರಣಗೊಳಿಸುತ್ತೀರಾ?

ಶ್ರೀ ಭೀಮಣ್ಣ ಖಂಡ್ರೆ: ಈ ಸಂಸ್ಥೆಗೆ ಜನವರಿ ತಿಂಗಳಿನಲ್ಲಿ ೪೬.೮೯ ಕೋಟಿ ರೂಪಾಯಿಗಳ ಆದಾಯ ಬಂದಿದೆ. ಜನವರಿ, ೧೯೯೨ರಲ್ಲಿ ೪೨.೬೧ ಕೋಟಿ ರೂಪಾಯಿಗಳ ಆದಾಯ ಬಂದಿದೆ. ನಮ್ಮ ಬಗ್ಗೆ ತಾವು ಯಾವ ಭಾವನೆ, ಗೌರವಗಳನ್ನು ಇಟ್ಟುಕೊಂಡಿದ್ದೀರೋ ನಿಮ್ಮ ಬಗ್ಗೆ ಅದೇ ರೀತಿಯ ಭಾವನೆ, ಗೌರವಗಳನ್ನು ನಾವೂ ಸಹ ಇಟ್ಟುಕೊಂಡಿದ್ದೇವೆ. ನೀವು ಸಹ ಅದೇ ಪ್ರಕಾರ ಮಾಡಿದಿರಿ. ಆದರೆ, ಪರಿಸ್ಥಿತಿ ಏನಿದೆಯೆಂದರೆ, ಆ ಪ್ರಕಾರ ಮಾಡುವಾಗ ಅದರಲ್ಲಿ ರಾಜಕೀಯ ತರುವುದು ಬೇಡ ಸಮಾಜ ಸುಧಾರಿಸುವ ಸಲುವಾಗಿ ನೀವು ಸ್ವಲ್ಪ ಮನಸ್ಸು ಬಿಚ್ಚಿ ಮಾತನಾಡಿ. ಮಾನ್ಯ ಸದಸ್ಯರಾದ ಶ್ರೀ ಬೈರೇಗೌಡರು ಹೇಳಿದ್ದನ್ನು ನಾನು ಒಪ್ಪಿದೆ. ಏನೆಂದರೆ ಸಿಸ್ಟಮ್ ಪ್ರಕಾರ ಬದಲಾವಣೆಯಾಗಬೇಕೆಂದು ಹೇಳಿದ್ದಕ್ಕೆ ನಾನೂ ಕೂಡ ಒಪ್ಪುತ್ತೇನೆ. ಈ ಸಿಸ್ಟಮ್ ವಿರುದ್ಧ ನಮ್ಮ ದೇಶದಲ್ಲಿ ಒಂದು ಕ್ರಾಂತಿ ಜರುಗಬೇಕಾಗಿದೆಯೆಂಬ ಮಾತನ್ನು ಹೇಳುತ್ತಿದ್ದೇನೆ. ಈ ಸಿಸ್ಟಮ್‌ನಲ್ಲಿ ಯಾವ ಪ್ರಕಾರ ನಡೆಯುತ್ತಿದೆಯೋ, ಇದು ದೂರವಾಗಿ ಹೊಸದನ್ನು ತರಬೇಕಾದರೆ ಈಗಿರುವ ಪದ್ಧತಿ ಬದಲಾವಣೆಯಾಗಬೇಕು. ಈಗಿನ ಪದ್ಧತಿಯ ಪ್ರಕಾರ ಯಾವ ರೀತಿ ನಡೆಯುತ್ತಿದೆಂಬುದು ನಿಮಗೂ ಗೊತ್ತು, ನಮಗೂ ಗೊತ್ತು, ಎಲ್ಲರಿಗೂ ಸಹ ಗೊತ್ತಿದೆ. ಅದು ಬದಲಾವಣೆಯಾಗುವವರೆಗೆ ಏನು ಮಾಡಬೇಕೆನ್ನುವ ಪ್ರಶ್ನೆ ಎದುರಾದಾಗ ಸದ್ಯದ ಪರಿಸ್ಥಿತಿ ಏನಿದೆ, ಕಾನೂನು ಏನಿದೆ, ನಿಯಮಗಳೇನಿವೆ, ಜನರ ಮನಸ್ಥಿತಿ ಹೇಗಿದೆ ಎಂಬುದನ್ನು ತಿಳಿದುಕೊಂಡು ಮಾಡಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾವು ಮಾತನಾಡಿರತಕ್ಕಂಥಾದ್ದೆಲ್ಲವನ್ನೂ ತಾವು ವೈಯುಕ್ತಿಕವಾಗಿ ತೆಗೆದುಕೊಂಡಿದ್ದೀರಿ. ನೀವು ಅಧಿಕಾರಕ್ಕೆ ಬಂದ ಎರಡು ತಿಂಗಳೊಳಗಾಗಿ ಇದನ್ನೆಲ್ಲಾ ಸರಿ ಮಾಡುವುದಕ್ಕೆ ನಿಮ್ಮ ಹತ್ತಿರ ಅಲ್ಲಾವುದ್ದೀನ್ ಪಿಲ್ಲೀಯ ದೀಪವಿಲ್ಲವೆನ್ನುವುದು ನಮಗೆ ಗೊತ್ತಿದೆ. ಈಗ ತಾವೇನು ಹೇಳಿದ್ದೀರೆಂದರೆ, ಕಳೆದ ಎರಡು ತಿಂಗಳಲ್ಲಿ ನಾನು ಬಂದ ನಂತರ ಕೆಲವು ಕ್ರಮಗಳನ್ನು ತೆಗೆದುಕೊಂಡು ೪೨ ಕೋಟಿ ರೂಪಾಯಿಗಳಿದ್ದುದು ನಲವತ್ತಾರೂವರೆ ಕೋಟಿ ಅಂದರೆ ನಾಲ್ಕೂವರೆ ಕೋಟಿ ರೂಪಾಯಿಗಳಾಗಿವೆಯೆಂದು ಹೇಳಿದಿರಿ. ಇದೇ ಲೆಕ್ಕಾಚಾರದಲ್ಲಿ ೧೨ ತಿಂಗಳು ಅಂದರೆ ಒಂದು ವರ್ಷಕ್ಕೆ ೨೪ ಕೋಟಿ ರೂಪಾಯಿಗಳ ಉಳಿತಾಯವಾಗುತ್ತದೆ. ೨೪ ಕೋಟಿ ರೂಪಾಯಿಗಳು ಉಳಿತಾಯವಾಗಬೇಕಾದರೆ Why are you burdening the commuters? This is my arguement.

SRI BHEEMANNA KHANDRE:- Very good idea. Very good suggestion. ಅದಕ್ಕೋಸ್ಕರ, ನಾನು ಒಂದು ವಿಷಯ ಕೇಳುತ್ತಿದ್ದೇನೆ. ಒಂದು ಮಾತಿಗೆ ನಾವಿಬ್ಬರೂ ಒಪ್ಪಿದ್ದೇವೆ. ಏನೆಂದರೆ, ಇದೇ ರೀತಿ ಮಾಡಿದರೆ ಉಳಿತಾಯವಾಗುತ್ತದೆಂದು. ಉಳಿತಾಯವಾಗಬಹುದು. ಉಳಿತಾಯ ಮಾಡುವ ಸಲುವಾಗಿ ಏನೇನು ಕೆಲಸ ಮಾಡಬೇಕು ಎಂಬ ಪ್ರಶ್ನೆ ನಮ್ಮ ಮುಂದಿದೆ. ಈಗ ನಮ್ಮ ಬಳಿ ಏನು ಸಿಬ್ಬಂದಿ ಇದೆ, ಆ ಸಿಬ್ಬಂದಿ ಜೊತೆಗೆ ಚೆಕ್-ಅಪ್ ಮಾಡುವ ಸಲುವಾಗಿ ಇನ್ನೂ ೨೫೭ ಜನರನ್ನೂ ನೇಮಕಾತಿ ಮಾಡುವುದು,

ಅಲ್ಲದೆ, ೩೦೦೦-೪೦೦೦ ಜನ ಕಡಿಮೆ ಇದ್ದಾರೆ ಅದಕ್ಕೂ ನೇಮಕಾತಿ ಮಾಡಬೇಕಾಗುತ್ತದೆ. ಏಕೆಂದರೆ, ಕೆಎಸ್‌ಆರ್‌ಟಿಸಿ ನಿಯಮಗಳ ಪ್ರಕಾರ ಶೇಕಡ ೩೩ರಷ್ಟು ಚಾಲಕರು ಮತ್ತು ನಿರ್ವಾಹಕರು ಹೆಚ್ಚಿಗೆ ಬೇಕಾಗುತ್ತಾರೆ. ಕಾರಣ, ಭಾನುವಾರವಾಗಲಿ ಮತ್ತು ಬೇರೆ ಯಾವುದೇ ಕೆಲಸವಾಗಲಿ ಅವರು ಹೋಗಲಿ ಅಥವಾ ಯಾವುದಾದರೂ ಅಪಘಾತ ಸಂಭವಿಸಿದಲ್ಲಿ, ಆ ಸ್ಥಳಕ್ಕೆ ಹೋಗಿ ಹೇಳಿಕೆ ಕೊಡಬೇಕಾಗುತ್ತದೆನ್ನುವ ದೃಷ್ಟಿಯಿಂದ ನಾವು ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಖಾಸಗಿಯವರಿಗೆ ಕೊಟ್ಟರೆ ಈ ರೀತಿ ವ್ಯವಸ್ಥೆಯಾಗುವುದಿಲ್ಲ ಮತ್ತು ಇದರಲ್ಲಿ ಸುಮಾರು ೬೦,೦೦೦ ಕುಟುಂಬಗಳ ಪ್ರಶ್ನೆ ಅಡಗಿದೆ. ಇದನ್ನು ತೆಗೆದುಹಾಕಬೇಕೆಂದು ಈಗತಾನೇ ಶ್ರೀಮಾನ್ ಬೈರೇಗೌಡರು ಹೇಳಿದರು. ಈಗ ೬೦,೦೦೦ ಜನರಿಗೆ ಉದ್ಯೋಗ ಕೊಡಬೇಕೆಂದರೆ ಹೇಗೆ ಸಾಧ್ಯವಾಗುತ್ತದೆ? ತಾವು ಏನು ಹೇಳಿದಿರಿ ಅದನ್ನು ನಾನು ಒಪ್ಪುತ್ತೇನೆ. ಒಳ್ಳೆಯ ಉದ್ದೇಶವಿಟ್ಟುಕೊಂಡು ತಾವು ಇದನ್ನು ರಾಷ್ಟ್ರೀಕರಣಗೊಳಿಸಿದಿರಿ. ರಾಷ್ಟ್ರೀಕರಣಗೊಳಿಸಿದ ನಂತರ ಇನ್ನೂ ಬಹಳಷ್ಟು ವ್ಯವಸ್ಥೆಯಾಗಬೇಕು. ಬಸ್ಸುಗಳು ಬೇಗನೆ ಕೆಡುವ ಉದ್ದೇಶವೇನೆಂದರೆ, ರಸ್ತೆಗಳು ಸರಿಯಾಗಿಲ್ಲದಿರುವುದು. ಎರಡನೆಯದಾಗಿ, ಚಾಲಕರು ಮತ್ತು ನಿರ್ವಾಹಕರಿಗೆ ಸರಿಯಾದ ತರಬೇತಿ ನೀಡಿರುವುದಿಲ್ಲ, ಈಗ ಅವರಿಗೆ ತರಬೇತಿ ಕೊಡುವ ವ್ಯವಸ್ಥೆ ಮಾಡುತ್ತಿದ್ದೇವೆ. ಅವರ ವರ್ತನೆ ಸರಿಯಾಗಿಲ್ಲದಿರುವುದು ನಮಗೂ ಸಹ ಕಂಡುಬಂದಿದೆ. ಅದಕ್ಕೋಸ್ಕರ ಅವರಿಗೆ ತರಬೇತಿ ಕೊಡಿಸಬೇಕಾಗುತ್ತದೆ. ಅದಲ್ಲದೆ ಬಹಳಷ್ಟು ಅಪಘಾತಗಳು ಸಂಭವಿಸುತ್ತಿರುವುದರ ಬಗ್ಗೆ ತಾವೇನು ಅಂಕಿಅಂಶ ಕೊಟ್ಟಿದ್ದೀರಿ, ಅದನ್ನು ನಾನು ಹೋಲಿಕೆ ಮಾಡುವುದಕ್ಕೆ ಹೋಗುವುದಿಲ್ಲ. ದಾಖಲೆಗಳ ಪ್ರಕಾರ ನೋಡಿಕೊಳ್ಳೋಣ. ಸಾಕಷ್ಟು ಸಂಖ್ಯೆಯಲ್ಲಿ ಅಪಘಾತಗಳು ಸಂಭವಿಸುತ್ತಿರುವುದಕ್ಕೆ ಮುಖ್ಯ ಕಾರಣ ಮದ್ಯಪಾನವೆಂಬುದು ನಿಮಗೂ ಗೊತ್ತು, ನಮಗೂ ಗೊತ್ತು. ನಾವು ಮದ್ಯಪಾನವನ್ನು ಎಷ್ಟರಮಟ್ಟಿಗೆ ನಿಯಂತ್ರಿಸಿದ್ದೇವೆ? ಚಾಲಕರು ಮದ್ಯಪಾನ ಕುಡಿಯುವುದನ್ನು ಬಿಟ್ಟರೆ ಶೇಕಡ ೫೦ರಷ್ಟು ಅಪಘಾತಗಳು ಕಡಿಮೆಯಾಗುತ್ತವೆಂಬುದು ನನ್ನ ಧೋರಣೆ. ನನ್ನ ವಿಚಾರದಲ್ಲಿ ಮದ್ಯ ಕುಡಿಯುವುದನ್ನು ನಿಯಂತ್ರಿಸಿದರೆ ಈಗ ಸಂಭವಿಸುತ್ತಿರುವ ಅಪಘಾತಗಳಲ್ಲಿ ಶೇಕಡಾ ಅರ್ಧದಷ್ಟು ಅಪಘಾತಗಳು ಕಡಿಮೆಯಾಗುತ್ತವೆ. ಇದರಿಂದ, ಸೋರಿಕೆಯಾಗುತ್ತಿರುವುದರ ಮೇಲೂ ಸಾಕಷ್ಟು ಪರಿಣಾಮ ಬೀರುತ್ತವೆ, ಒಳ್ಳೆಯ ಸಮಾಜ ನಿರ್ಮಾಣವಾಗುತ್ತದೆ. ಆದರೆ, ನಮ್ಮ ದೇಶದಲ್ಲಿ ಇದುವರೆವಿಗೂ ಮದ್ಯಪಾನವನ್ನು ನಿಯಂತ್ರಿಸುವುದಾಗಲಿ, ಸುಧಾರಿಸುವುದಾಗಲಿ ಅಥವಾ ನಿಷೇಧಗೊಳಿಸುವುದಾಗಲಿ ಯಾವುದೇ ಪ್ರಯತ್ನ ಆಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ಏನು ಮಾಡಬೇಕು? ಹೇಗೆ ಮಾಡಬೇಕು? ಯಾವುದನ್ನು ಮಾಡಬೇಕು? ಎನ್ನುವ ಪ್ರಶ್ನೆ ಕಾಡುತ್ತದೆ. ಇದರ ಬಗ್ಗೆ ನಾವು-ನೀವು ವಿಚಾರ ಮಾಡಬೇಕು. ಚೆಕ್-ಅಪ್ ಮಾಡುವ ಸಲುವಾಗಿ ೨-೩ ಸಲ ಕಮೀಷನರ್‌ರವರನ್ನು ಕರೆದುಕೊಂಡು ಹೋಗಿದ್ದೇವೆ, ಅಲ್ಲದೆ, ಚೀಫ್ ಇನ್ಸ್‌ಪೆಕ್ಟರ್, ಟ್ರಾಫಿಕ್ ಅವರನ್ನು ಕರೆದುಕೊಂಡು ಹೋಗಿ ನೀವು ಏನು ಹೇಳಿದಿರಿ ಅದನ್ನೂ ಸಹ ಕಂಡುಹಿಡಿದಿದ್ದೇವೆ. ಅದನ್ನು ಹೇಗೆ ಮಾಡಬಹುದೆಂದು ಅವರು ಹೇಳಿದರೆ ಒಳ್ಳೆಯದು. ಬಸ್ಸಿನ ಒಳಗಡೆ ಕುರಿ ಮಂದೆ ತುಂಬಿದಂತೆ ತುಂಬಿ ಹಾಗೂ ಬಸ್ಸಿನ ಮೇಲೆ ೫೦ ಜನರು ಕುಳಿತಿದ್ದನ್ನು ನಿಯಂತ್ರಿಸಲು ನಾವು ಹೋದಾಗ, ಬಸ್ಸಿನ ಚಾಲಕ ಹಾಗೂ ನಿರ್ವಾಹಕರು "ಸ್ವಾಮಿ, ನಮಗೆ ಬಸ್ ಕಡಿಮೆ ಇದೆ, ಆದುದರಿಂದ, ಜನರೆಲ್ಲಾ ಬಸ್ಸಿನ ಮೇಲೆ ಕುಳಿತುಕೊಳ್ಳುತ್ತಾರೆ, ಬಸ್ಸಿನ ಮೇಲೆ ಕುಳಿತುಕೊಳ್ಳಬಾರದೆಂದರೆ ಜನರು ನಮ್ಮನ್ನು ಹೊಡೆಯುತ್ತಾರೆ, ನಾವು ಏನು ಮಾಡಬೇಕೆಂದು ನೀವೇ ಹೇಳಿ" ಎಂದರು. ಆ ರೀತಿ ಹೇಳಿದಾಗ- Is it not duty of the Government to consider it sympathetically? What should we do?

೪.೨೦ ಪಿ.ಎಂ.

ಇದರ ಬಗ್ಗೆ ತಾವೇ ವಿಚಾರ ಮಾಡಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈಗ ನಾವು ಸರಿಯಾಗಿ ಚೆಕ್-ಅಪ್ ಮಾಡುವ ಸಲುವಾಗಿ ಹೆಚ್ಚು ಜನರು ಬೇಕು, ಇನ್ನೂ ಹೆಚ್ಚು ಬಸ್ಸುಗಳು ಬೇಕು, ಆ ಬಸ್ಸುಗಳಿಗೆ ಸ್ಟ್ಯಾಂಡ್ ಬೇಕು, ಡಿಪೋ ಬೇಕು. ನಾನು ಪಟ್ಟಿ ಮಾಡಿ ಇಟ್ಟಿದ್ದೇನೆ, ಸಾಧಾರಣವಾಗಿ ಸುಮಾರು ೮೫ ಪರ್‌ಸೆಂಟ್‌ನಷ್ಟು ನಮ್ಮ ಎಂ.ಎಲ್.ಎ. ಸ್ನೇಹಿತರು ನಮಗೆ ಡಿಪೋ ಬೇಕು, ಬಸ್ಸು ಬೇಕು, ನಮಗೆ ಸ್ಟ್ಯಾಂಡ್ ಬೇಕು, ಆ ಬಸ್ಸುಗಳು ಹಳೆಯದಾಗಿದೆ ಅದನ್ನು ಬದಲಾವಣೆ ಮಾಡಿ ಎಂದು ಕೇಳುತ್ತಿದ್ದಾಗ ಮಾನ್ಯ ಸಿಂಧ್ಯರವರೆ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರೇ, ತಮ್ಮಲ್ಲಿ ಬಹಳ ವಿನಯವಾಗಿ ಕೇಳಿಕೊಳ್ಳುತ್ತಿದ್ದೇನೆ, ಇದು ಬೇಕೋ ಅಥವಾ ಬೇಡವೋ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಸಾಲವನ್ನು ತೆಗೆದುಕೊಂಡು ಮಾಡಿ. ಬೆಲೆ ಜಾಸ್ತಿ ಮಾಡಬೇಡಿ.

ಶ್ರೀ ಭೀಮಣ್ಣ ಖಂಡ್ರೆ:- ಆಗಲಿ ಸಾಲವನ್ನೇ ತೆಗೆದುಕೊಂಡು ಮಾಡುತ್ತೇವೆ. ಆದರೆ ನಮಗೆ ಬೇಕಾದಷ್ಟು ಸಾಲವನ್ನು ಕೊಡಬೇಕಲ್ಲ. ಈಗ ಮಿಲಿಟರಿಗೆ ಕಳಿಸತಕ್ಕ ವೆಪನ್‌ಗಳು ಇಲ್ಲವೆಂದು ಹೇಳಿದಾಗ ಅವುಗಳನ್ನು ಕೊಡುವುದು ನಮ್ಮ ಧರ್ಮವಲ್ಲವೆ, ಅಂಥ ವೆಪನ್‌ಗಳು ಕೊಡಲು ಹಣಬೇಕೆಂದಾಗ ಅದನ್ನು ನೀವು ವಿರೋಧ ಮಾಡಿದರೆ ಹೇಗಾಗುತ್ತದೆ ಎಂದು ನಾನು ಕೇಳುತ್ತೇನೆ. ಇದರ ಬಗ್ಗೆ ದಯಮಾಡಿ ಉತ್ತರ ಹೇಳಿ? ಇದರ ಬಗ್ಗೆ ನಿಮ್ಮ ಸಲಹೆಯನ್ನು ಕೊಡಿ? ಆದುದರಿಂದ ಇದು ಅತ್ಯಂತ ಅವಶ್ಯಕವಾಗಿದೆ ಎಂದು ನಾನು ಹೇಳುತ್ತಿದ್ದೇನೆ. ಇದು ಇಲ್ಲದೆ ಸಾಧ್ಯವಿಲ್ಲವೆಂದಾಗ ಏನು ಮಾಡುವುದಕ್ಕಾಗುತ್ತದೆ. ಸಾರ್ವಜನಿಕರು ೧೦, ೨೦ ಪರ್‌ಸೆಂಟ್ ಜಾಸ್ತಿ ಮಾಡಿದರೂ ಪರವಾಗಿಲ್ಲ ನಮಗೆ ಸೌಕರ್ಯ ಬೇಕು, ಈಗ ಹಣದ ಮೌಲ್ಯ ಬಹಳ ಕಡಿಮೆಯಾಗಿದೆ ಆದಕ್ಕಾಗಿ ನೀವು ಹೆಚ್ಚು ತೆಗೆದುಕೊಳ್ಳಿ ಆದರೆ ನಮಗೆ ಸೌಕರ್ಯವನ್ನು ಕೊಡಿ ಎನ್ನುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅಧ್ಯಕ್ಷರೆ, ಇವರ ಮಾತನ್ನು ಒಪ್ಪಿಕೊಳ್ಳುತ್ತೀರಾ? ಈಗಾಗಲೆ ಬೆಲೆಯನ್ನು ಜಾಸ್ತಿ ಮಾಡಿದ್ದರಿಂದ ಸುಮಾರು ೧೦೦ ಬಸ್ಸುಗಳನ್ನು ಸುಟ್ಟು ಹಾಕಿದ್ದಾರೆ, ಇವರು ಹೇಳುವುದನ್ನು ನೋಡಿದರೆ ಇನ್ನೂ ೮೦೦೦ ಸಾವಿರ ಬಸ್ಸುಗಳಿಗೂ ಬೆಂಕಿಯನ್ನು ಇಡುವ ಪ್ರಯತ್ನ ಮಾಡುತ್ತಾರೆ. ಇನ್ನೂ ೨೫ ಪರ್‌ಸೆಂಟ್ ಜಾಸ್ತಿ ಮಾಡಿ ಎಂದು ಹೇಳುತ್ತಿದ್ದಾರೆ. ಇದು ಯಾಗುತಾನೇ ಒಪ್ಪುತ್ತಾರೆ, ನೀವೇ ಹೇಳಿ.

ಶ್ರೀ ಭೀಮಣ್ಣ ಖಂಡ್ರೆ:- ನನಗೆ ಅನುಭವವಿರತಕ್ಕದ್ದನ್ನು ನಾನು ಹೇಳುತ್ತಿದ್ದೇನೆ. ತಮ್ಮ ಅನುಭವದ ಪ್ರಕಾರ ತಾವು ಹೇಳುತ್ತಿದ್ದೀರಿ. ಆ ಮಾತು ಬೇರೆ. ಪರಂತು ಒಂದು ಮಾತನ್ನು ಹೇಳುತ್ತಿದ್ದೇನೆ. Without giving all these facilities can we control it.? ಎಷ್ಟರ ಮಟ್ಟಿಗೆ ಮಾಡಬಹುದು?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಆಗುತ್ತದೆ.

ಶ್ರೀ ಭೀಮಣ್ಣ ಖಂಡ್ರೆ:- ಇದು ಅಸತ್ಯ, ಸತ್ಯಕ್ಕೆ ದೂರವಾದ ಮಾತು, ಅದು ಆಗಲು ಸಾಧ್ಯವಿಲ್ಲ. ನೀವು ಬಸ್ಸನ್ನು ಕೊಟ್ಟಿಲ್ಲದಿರುವುದು ಹೌದೋ ಅಥವಾ ಅಲ್ಲವೊ? ನೀವು ಜನರು ಟಾಪ್ ಮೇಲೆ ಪ್ರಯಾಣ ಮಾಡುತ್ತಾರೆಂದು ಹೇಳಿದರಿ. ಆದರಿಂದಾಗಿ ನಾವು ಹೆಚ್ಚು ಬಸ್ಸುಗಳು ಬೇಕು ಎನ್ನುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನೀವು ಒಂದು ಬಸ್ಸನ್ನು ಅಡಿಷನಲ್ ಆಗಿ ತೆಗೆದುಕೊಳ್ಳಬೇಡಿ, ಆದರ ಬದಲು ಈಗ ಇರತಕ್ಕ ೯ ಸಾವಿರ ಬಸ್ಸುಗಳನ್ನೇ ದಿನಕ್ಕೆ ೨೦ ಕಿ.ಮೀ.

ಜಾಸ್ತಿ ಓಡಿಸಿ. ಆಗ ೯೦೦ ಬಸ್ಸುಗಳು ನಿಮಗೆ ಅಡಿಷನಲ್ ಆಗಿ ಸಿಗುತ್ತವೆ. ನಾನು ಹೇಳಿರತಕ್ಕ ಒಂದು ಅಂಶವನ್ನೂ ತಾವು ನೋಟ್ ಮಾಡಿಕೊಂಡು ಪರಿಗಣನೆಗೆ ತೆಗೆದುಕೊಳ್ಳುತ್ತಿಲ್ಲ.

ಶ್ರೀ ಭೀಮಣ್ಣ ಖಂಡ್ರೆ:- ನಾವು ಇಲ್ಲಿ ಮಾತನಾಡುವುದು ಬೇರೆ. ೯ ಸಾವಿರ ಬಸ್ಸುಗಳು ಇದ್ದುದ್ದು, ಇದನ್ನು ಕ್ಯಾಲಿಕ್ಯುಲೇಟ್ ಮಾಡಿರತಕ್ಕದ್ದು ಕಾಗದದ ಮೇಲೆ ಮಾತ್ರ. ೯ ಸಾವಿರದಲ್ಲಿ ೫೦೦ ಬಸ್ಸುಗಳು ರಸ್ತೆಯ ಮೇಲೆ ಇರುವುದಿಲ್ಲ, ಇರತಕ್ಕ ಬಸ್ಸುಗಳು ೨೦ ಕಿ.ಮೀ ಜಾಸ್ತಿ ಓಡಬೇಕಾದರೆ ರಸ್ತೆಗಳಿವೆಯೆ? ಸಿಕಂದರಾಬಾದ್ ಮತ್ತು ಹೈದರಾಬಾದ್ ಮುಂತಾದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅದು ಆಗುವುದಿಲ್ಲ. ಆ ರೀತಿ ಓಡಿಸುವಾಗ ೪ ಸಾವಿರ ಜನರು ಕಡಿಮೆ ಇದ್ದರೂ ಹೇಗೆ ಓಡಿಸಲು ಆಗುತ್ತದೆ. ನೀವೇನು ವಿದ್ಯುತ್‌ನ್ನು ನಿರ್ಮಾಣ, ಉತ್ಪಾದನೆ ಮಾಡುತ್ತೀರೇನು? ಅಥವಾ ಅಮೇರಿಕಾದಂತೆ ಕುಳಿತಲ್ಲೇ ನಡೆಸುವ ಹೊಸದಾದ ಸಂಶೋದನೆಯ ಪ್ರಕಾರವೇನಾದರೂ ಮಾಡುತ್ತೀರ ಇದರ ಬಗ್ಗೆ ಸ್ವಲ್ಪ ಪ್ರಾಕ್ಟಿಕಲ್ ಆಗಿ ಯೋಚನೆ ಮಾಡಿ ನೋಡಿ. ತಾವು ಏನು ಅದನ್ನು ಉಳಿಸಬೇಕೆಂದು ಸಲಹೆಯನ್ನು ಕೊಟ್ಟಿದ್ದೀರಿ ಅದನ್ನು ಒಪ್ಪಿಕೊಳ್ಳುತ್ತೇನೆ, ಅದನ್ನು ಮಾಡೋಣ. ಅದನ್ನು ಮಾಡುವ ಸಲುವಾಗಿ ಇವೆಲ್ಲವನ್ನು ಮಾಡುವುದು ಬೇಡವೆಂದರೆ ಅದು ಸರಿಯಾಗುವುದಿಲ್ಲ, ಇವೆಲ್ಲಾ ಬೇಕು ಎಂದಾಗ ನೀವು ಅದರ ಬಗ್ಗೆ ವಿರೋಧ ಮಾಡುವುದು ಎಷ್ಟರ ಮಟ್ಟಿಗೆ ಸರಿ ಎನ್ನುವುದನ್ನು ತಾವು ತಿಳಿದುಕೊಳ್ಳಬೇಕು. ಅದು ಅವಶ್ಯಕವಾಗಿ ಬೇಕೆ ಬೇಕು. ಅದು ಇಲ್ಲದಿದ್ದರೆ ಆಗುವುದಿಲ್ಲ. ನಾವು ಸರಿಯಾಗಿ ಚೆಕ್‌ಅಪ್ ಮಾಡಬೇಕಾದರೆ, ಭ್ರಷ್ಟಾಚಾರವನ್ನು ತಡೆಗಟ್ಟಬೇಕಾದರೆ, ಒಳ್ಳೆಯ ಕೆಲಸವನ್ನು ತೆಗೆದುಕೊಳ್ಳಬೇಕಾದರೆ, ಸರಿಯಾದ ಸೂಪರ್‌ವೈಜೇಷನ್ ಮಾಡಬೇಕಾದರೆ ಹೆಚ್ಚು ಬಸ್ಸುಗಳು, ಹೆಚ್ಚು ಸ್ಟಾಫ್‌ಗಳು ಮತ್ತು ಇನ್ನೂ ಏನೇನು ಬೇಕೋ ಅವೆಲ್ಲವುಗಳನ್ನು ಕೊಡತಕ್ಕದ್ದು ಅವಶ್ಯಕ. ಆ ದೃಷ್ಟಿಯಿಂದ ನಾವು ಮಾಡುತ್ತಿದ್ದೇವೆ. ಅದನ್ನು ನೀವು ಬಹಳ ಹರ್ಷದಿಂದ ಸ್ವಾಗತ ಮಾಡಬೇಕು. ಮಾನ್ಯ ಖಂಡ್ರೆಯವರೆ, ನಾವು ೫೦ ಪರ್‌ಸೆಂಟ್ ಮಾಡಿದ್ದೆವು, ನೀವು ೨೫ ಪರ್‌ಸೆಂಟ್ ಮಾಡಿದ್ದೀರಿ, ಇದು ಬಹಳ ಒಳ್ಳೆಯ ನಿರ್ಣಯ, ಬಹಳ ಸಂತೋಷ ನಿಮ್ಮ ಕೆಲಸಕ್ಕೆ ನಾವು ಸಂತೋಷದಿಂದ ಸಪೋರ್ಟ್‌ನ್ನು ಕೊಡುತ್ತೇವೆ ಎಂದು ಹೇಳಬೇಕು. ಅದನ್ನು ಬಿಟ್ಟು ಪ್ರತಿಯೊಂದು ಮಾತಿಗೂ ನೀವು ಜಂಪ್ ಆದರೆ ನಾನು ಏನು ಮಾಡುವುದಕ್ಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಈ ಮಾತು, ಇಬ್ಬರು ದರೋಡೆಕಾರರು ಒಟ್ಟಿಗೆ ಸೇರಿದ ಹಾಗಾಯಿತು. ಆ ರೀತಿಯಲ್ಲಿ ಅರ್ಥವಾಯಿತು.

ಶ್ರೀ ಭೀಮಣ್ಣ ಖಂಡ್ರೆ:- ಇನ್ನು ಕೇಳುವ ಅವಶ್ಯಕತೆ ಇಲ್ಲ. ಏನು ದರ ಹೆಚ್ಚಾಗಿದೆ ಅದರ ಬಗ್ಗೆ ಮತ್ತೆ ಮಾತನಾಡುತ್ತೇನೆ. ನಿನ್ನೆ ವಿಧಾನ ಪರಿಷತ್ತಿನಲ್ಲಿ ಇದರ ಬಗ್ಗೆ ಹೇಳಿದ್ದೇನೆ, ಅದು ಪೇಪರ್‌ನಲ್ಲಿ ಬಂದಿರಬಹುದು, ತಮಗೂ ಗೊತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ನಾವು ಅಡ್ಜರ್ನ್‌ಮೆಂಟ್ ಮೋಷನ್ ರೂಪದಲ್ಲಿ ಫರ್ದರ್ ಡಿಸ್‌ಕಷನ್ ಮಾಡಬೇಕೆನ್ನುವ ದೃಷ್ಟಿಯಿಂದ ಸರಕಾರಕ್ಕೆ ಏನಾದರೂ ಒಳ್ಳೆಯ ಸಲಹೆಗಳನ್ನು ಕೊಟ್ಟರೆ ಅವರು ಕೇಳುತ್ತಾರೆಂದು ನಾವು ಅಂದುಕೊಂಡಿದ್ದೇವೆ. ಆದರೆ ಅವರು ಒಂದನ್ನೂ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ನಾವು ಕೊಟ್ಟಿರತಕ್ಕಂತಹ ಒಂದು ಸಲಹೆಗೂ ಅವರು ಉತ್ತರ ಕೊಡಲಿಲ್ಲ. ನಾವು ಬಹಳ ಕಡಿಮೆ ಅಂದರೆ ಟೀಕೆಯನ್ನೇ ಮಾಡಿಲ್ಲವೆಂದು ಹೇಳಬೇಕು. ನೀವು ಇಲ್ಲಿ ಕುಳಿತಿದ್ದಾಗ, ಮಾನ್ಯ ಮೊಯಿಲಿಯವರು ಮತ್ತು ಅವರ ಸ್ನೇಹಿತರುಗಳು ಮೊದಲನೇ ಸಾಲಿನಲ್ಲಿ ಕುಳಿತು ಏನು ಟೀಕೆ ಮಾಡಿದ್ದಾಗ ಅದರಲ್ಲಿ ೧೦ ಪರ್ಸೆಂಟ್ ಕೂಡ ನಮ್ಮದು ಇಲ್ಲ. ಅದನ್ನೂ ನೀವು ಟಾಲರೇಟ್ ಮಾಡುವುದಕ್ಕೆ ತಯಾರಿಲ್ಲ. ನಾವು ಹೇಳಿರತಕ್ಕಂತಹ ಒಂದು ಸಲಹೆಗೂ, ಒಂದು ಪಾಯಿಂಟಿಗೂ ನೀವು ಉತ್ತರ ಕೊಡಲಿಕ್ಕೆ ತಯಾರಿಲ್ಲ.

ಶ್ರೀ ಭೀಮಣ್ಣ ಖಂಡ್ರೆ:- ನಿಮ್ಮ ಸಲಹೆಗಳನ್ನು ಸಜೆಷನ್ ನಾವು ಸ್ವಾಗತಿಸಿದ್ದೇವೆ. ಆ ಸಜೆಷನ್ಸ್ ಅನ್ನು ಕಳಕಳಿಯಿಂದ ಅಪ್ರಿಷಿಯೇಟ್ ಮಾಡುತ್ತೇವೆ. ತಾವು ಒಳ್ಳೆಯ ಸಜೆಷನ್ ಕೊಟ್ಟಿರಿ, ಆ ದಾರಿಯಲ್ಲಿ ನಾವು ಇದ್ದೇವೆ, ಅದನ್ನು ಮಾಡುತ್ತಿದ್ದೇವೆ ಅದಕ್ಕೆ ನಮಗೆ ಅವಕಾಶ ಕೊಡಿ. ಆ ಅವಕಾಶದ ಜೊತೆಗೆ ಯಾವ್ಯಾವ ಸಾಧನ ಬೇಕು ಅದಕ್ಕೆ 'ಯಸ್' ಎಂದು ಹೇಳಿ ನಾವು ಕೇಳುತ್ತಿದ್ದೇವೆ. ನಿಮ್ಮನ್ನು ಬಹಳ ರಿಕ್ವೆಸ್ಟ್ ಮಾಡುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನೀವು ಮಾಡುತ್ತೀರಿ ಎಂದು ನಮಗಂತೂ ಬಹಳ ವಿಶ್ವಾಸ ಇದೆ. ಅಲ್ಲಿಯವರೆಗೆ ಈ ಬೆಲೆ ಜಾಸ್ತಿ ಮಾಡಬೇಡಿ.

ಶ್ರೀ ಭೀಮಣ್ಣ ಖಂಡ್ರೆ:- ಅಕ್ಕಿ ಖರ್ಚಾಗಬಾರದು, ಹೊಟ್ಟೆ ತುಂಬಾ ಊಟಮಾಡಿ, ಕೆಲಸ ಮಾಡಿ ಎಂದರೆ ಹೇಗಾಗುತ್ತದೆ. ಕೆಲಸ ಮಾಡಬೇಕಾದರೆ ಬೇಕೇ ಬೇಕಲ್ಲ. ನೀವು ಇಲ್ಲಿದ್ದರೆ ಏನು ಮಾಡುತ್ತಿದ್ದಿರಿ ಎಂಬುದನ್ನು ಸ್ವಲ್ಪ ಹೇಳುತ್ತೀರಾ? you are not in a position to say anything about it. ನೀವು ಅದನ್ನೇ ಮಾಡುತ್ತಿದ್ದಿರಿ. ನಾವು ೨೫ ಪರ್ಸೆಂಟ್ ಮಾಡುತ್ತಿದ್ದೇವೆ ನೀವು ೫೦ ಪರ್ಸೆಂಟ್ ಮಾಡುತ್ತೇವೆಂದು ಹೇಳಬಹುದು. ಕಾರಣ, ಹಿಂದಿನ ಉದಾಹರಣೆಗೆ ತೆಗೆದುಕೊಂಡು ಹೇಳುತ್ತಿದ್ದೇನೆ. ಮಾನ್ಯ ದೇಶಪಾಂಡೆಯವರಿಗೆ ಹೇಳುತ್ತಿದ್ದೇನೆ. ನೀವು ಹಿಂದಿನದನ್ನು ಏಕೆ ಕೋಟ್ ಮಾಡುತ್ತೀರಿ ಎಂದರೆ it is relevant ಆಗ ಸರ್ಕಾರದಲ್ಲಿ ನೀವಿದ್ದವರು. ಅಲ್ಲಿ ಕುಳಿತಾಗ ಒಂದು, ಇಲ್ಲಿ ಕುಳಿತಾಗ ಒಂದು ಬೇಡ. ನೀವು ಮಾಡುತ್ತಿದ್ದೀರಿ ಎಂದು ಅಪ್ರಿಷಿಯೇಟ್ ಮಾಡಬೇಕು. ಈ ಪರಿಸ್ಥಿತಿಯನ್ನು ನೋಡಿಕೊಂಡು ತಾವಾದರೂ ನೀವು ಸರಿಯಾಗಿ ಮಾಡಿ ತೋರಿಸಿ ಎಂದು ಹೇಳಿರಿ, ನಾವು ತಯಾರಿಸಿದ್ದೇವೆ, ಮಾಡಿ ತೋರಿಸುತ್ತೇವೆ. ನಾವೂ ತಪ್ಪಬಹುದು, ಇಲ್ಲವೆಂದಲ್ಲ. ಮಾಡುವ ಮನುಷ್ಯ ತಪ್ಪಬಹುದು, ತಪ್ಪಾದರೆ ತಿದ್ದಿಕೊಳ್ಳಿ ಎಂದು ಹೇಳಿ. ಅದಕ್ಕೋಸ್ಕರವೇ ವಿರೋಧ ಪಕ್ಷ ಇರುವುದು. ಕೆಲಸ ಮಾಡುವ ಮನುಷ್ಯ ಬೀಳುತ್ತಾನೆ, ಏಳುತ್ತಾನೆ ತಪ್ಪೂ ಮಾಡಬಹುದು ಅದನ್ನು ನೀವು ತಿದ್ದಬೇಕು. ಆನೆಗೆ ಅಂಕುಶ ಇದ್ದಹಾಗೆ ವಿರೋಧ ಪಕ್ಷ ಇದೆ. ಆದರೆ ಅಂಕುಶ ಮಾಡುವುದನ್ನು ಬಿಟ್ಟು ಪ್ರಾಣ ತೆಗೆಯುವ ಕೆಲಸ ಮಾಡಬೇಡಿ. ನಮಗೆ ಕೇಳುವ ಅಧಿಕಾರ ಇದೆ. ನೀವು ನಮ್ಮ ಮಾಲೀಕರು. ರೂಲಿಂಗ್ ಪಕ್ಷದಲ್ಲಿ ಕುಳಿತುಕೊಂಡು ನಾವು ಕೆಲಸ ಮಾಡುತ್ತಿದ್ದೇವೆ. ಅಕೌಂಟೆಂಟ್ ರೀತಿ ನೀವೇನು ಹೇಳಿದರೂ ನಾವು ಕೇಳಬೇಕಾಗುತ್ತದೆ. ಅದು ಸರಿ ಇದ್ದರೆ ಕೇಳಬಹುದು, ಇಲ್ಲದಿದ್ದರೆ ತಳ್ಳಿ ಹಾಕಬಹುದು. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ತಾವು ಬಹಳಷ್ಟು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ, ಅದನ್ನು ಸ್ವಾಗತ ಮಾಡುತ್ತೇನೆ. ಪರಂತು ನಾವು ಏನು ಮಾಡುತ್ತಿದ್ದೇವೆ ಅದನ್ನು ನೀವು ಅಪ್ರಿಷಿಯೇಟ್ ಮಾಡಿ. ಇದರ ವಿನಃ ನಮಗೆ ಗತ್ಯಂತರ ಇಲ್ಲ. ಅದು ಇಲ್ಲದೆ ನಡೆಸುವುದಕ್ಕೆ ಸಾಧ್ಯವಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಇದ್ದೇವೆ. ನನಗೆ ಇಷ್ಟು ಮಾತ್ರ ಖಾತರಿ ಇದೆ. ಇಡೀ ಕರ್ನಾಟಕ ರಾಜ್ಯದ ಜನ ವಾಸ್ತವಿಕತೆಯನ್ನು ನೋಡಿ ಸಂತೋಷಪಡುತ್ತಾರೆ. ಕಾರಣ, ನಾವು ಎರಡನ್ನೂ ಸೈಮಲ್ಟೇನಿಯಸ್ ಆಗಿ ಮಾಡುತ್ತಿದ್ದೇವೆ. ಟ್ಯಾಕ್ಸ್ ತೆಗೆದುಕೊಂಡು ಅವರಿಗೇನು ಬೇಕೋ ಅದನ್ನೂ ಮಾಡುತ್ತಿದ್ದೇವೆ. ಇಷ್ಟಕ್ಕೇ ಆಗುವುದಿಲ್ಲ. ೩೦-೪೦ ಕೋಟಿ ರೂಪಾಯಿಗಳನ್ನು ಸೇವ್ ಮಾಡಬೇಕಾಗುತ್ತದೆ. ಅಷ್ಟಾದರೂ ಇನ್ನೂ ೪೩ ಕೋಟಿ ಡೆಫಿಸಿಟ್ ಆಗುತ್ತದೆ. ಇದರಲ್ಲಿ ೮೦ ಕೋಟಿ ಸ್ಟೂಡೆಂಟ್ಸ್ ಪಾಸ್‌ಗೆ ಆಗುತ್ತಿದೆ. ತಾವು ತಮಿಳುನಾಡಿನಲ್ಲಿರುವುದನ್ನು ರೆಫರೆನ್ಸ್ ಕೊಟ್ಟಿರಿ. ತಮಿಳುನಾಡಿನಲ್ಲಿ ಎಷ್ಟು ಜನ ಹುಡುಗರಿಗೆ ಪಾಸ್ ಕೊಟ್ಟಿದ್ದಾರೆ ಅದರಲ್ಲಿ ೫೦ ಪರ್ಸೆಂಟ್ ಪಾಸಿನ ಹಣ ತಮಿಳುನಾಡು ಸರಕಾರಕ್ಕೆ ಹೋಗುತ್ತದೆ; ೮೦ ಪರ್ಸೆಂಟ್ ತನಕ ತೆಗೆದುಕೊಳ್ಳುತ್ತದೆ. ಈ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಆ ರೀತಿ ಇಲ್ಲ. ೧೭.೫ ಪರ್ಸೆಂಟ್ ಎಂದು ತಾವೇ ಮಾಡಿದ್ದೀರಿ, ಈಗ ಅದನ್ನು ಕಡಿಮೆ ಮಾಡಬೇಕೆಂದು ಹೇಳಿದಿರಿ. ತಾವು ಸಿಟ್ಟಾಗದಿದ್ದರೆ ಒಂದು ಮಾತನ್ನು ಹೇಳುತ್ತೇನೆ. ಆ ಸಮಯದಲ್ಲಿ ೧೭.೫ ಪರ್ಸೆಂಟ್ ಎಂದು ತಾವೇ ಮಾಡಿದ್ದೀರಿ

ಈಗ ಕಡಿಮೆ ಮಾಡಿ ಎಂದು ಹೇಳುತ್ತೀರಾ? ಒಂದು ಕೆಲಸವನ್ನು ನೀವು ಮಾಡಿ ಹೋಗಿ it is the legacy of your Government. ನಂತರ ಅದನ್ನು ಕಡಿಮೆ ಮಾಡಲು ಆಗುತ್ತದೆಯೇ? ಸ್ಟೂಡೆಂಟ್ಸ್‌ಗೆ ಪಾಸ್ ಕೊಟ್ಟಮೇಲೆ ಅದನ್ನು ಕಡಿಮೆ ಮಾಡುವುದಕ್ಕಾಗುತ್ತದೆಯೇ? ಕಡಿಮೆ ಮಾಡಿದರೆ ಗಲಾಟೆಯಾಗುತ್ತದೆಂದು ತಮಗೆ ಗೊತ್ತಿದೆ. ನೀವು ಮಾಡಿ ಹೋದಿರಿ. ಆದ್ದರಿಂದಲೇ ನಾವು ಮಾಡುವಾಗಲೇ ಲೆಕ್ಕ ಹಾಕಿ ಮಾಡಬೇಕಾಗುತ್ತದೆ. ನಾವೇ ಇರಲಿ, ಬೇರೆಯವರೇ ಇರಲಿ, ಸರ್ಕಾರ ಸದಾ ಇರುತ್ತದೆ. ಸ್ಪೀಕರ್ ಸಾಹೇಬರೇ, ತಾವು ಅಲ್ಲಿ ಕುಳಿತಿದ್ದೀರಿ ಘನತೆ, ಗೌರವವನ್ನು ಕಾಯ್ದುಕೊಳ್ಳುವುದು ತಮ್ಮ ಕರ್ತವ್ಯ. ಮತ್ತು ಆ ಸಮಯವಲ್ಲಿ ಏನೂ ಮಾಡಲಾರದೆ ನಂತರ ಆಗ ಹಾಗಿತ್ತು, ಈಗ ಹೀಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ತಾವು ಸರ್ಕಾರದಲ್ಲಿದ್ದಾಗ ವಿಚಾರ ಮಾಡಬೇಕಿತ್ತು. ೧೭ ಪರ್ಸೆಂಟ್‌ನಷ್ಟು ನೀವು ಮಾಡಿ ಇಂಥ ಪರಿಸ್ಥಿತಿಗೆ ಸರ್ಕಾರವನ್ನು ತಂದಿಟ್ಟು ಇವತ್ತು ಇದನ್ನು ವಾಪಸು ತೆಗೆದುಕೊಳ್ಳಿ ಎಂದರೆ ಎಷ್ಟು ಕಷ್ಟವಾಗುತ್ತದೆಂಬುದನ್ನು ವಿಚಾರಮಾಡಿ. ಹಿಂದೆ ೧೭ ಪರ್ಸೆಂಟ್ ಮಾಡಿದಾಗ ನೀವೇ ಇದ್ದಿರಿ. ೧೯೮೫-೮೬ರಲ್ಲಿ ಏತಕ್ಕೆ ಮಾಡಿದಿರಿ? ಈಗ ನಮಗೆ ಏನು ಬುದ್ಧಿವಾದವನ್ನು ಹೇಳುತ್ತಿದ್ದೀರಿ, ಅದನ್ನು ಹಿಂದೆ ನೀವೇ ಮಾಡಬಹುದಿತ್ತಲ್ಲಾ. ಆ ರೀತಿ ನೀವೂ ಮಾಡಲಿಲ್ಲ ಎಂದ ಮೇಲೆ ನಮಗೆ ಹೇಳತಕ್ಕ ಅಥವಾ ಟೀಕೆ ಮಾಡತಕ್ಕ ನೈತಿಕ ಹಕ್ಕು ನಿಮಗೆ ಎಲ್ಲಿದೆ? Whether you have got any moral right to criticise us ಎಂದು ತಮ್ಮನ್ನು ಕೇಳುತ್ತಿದ್ದೇನೆ. ದೇಶಪಾಂಡೆಯವರೆ, ತಾವು ಏನು ಹೇಳುತ್ತೀರೆಂಬುದನ್ನು ನಾನು ಕೇಳಬಯಸುತ್ತೇನೆ. ನಮಗೆ ನೈತಿಕ ಹಕ್ಕು ಇರುವುದರಿಂದ ನಾವು ಇದನ್ನು ಮಾಡುತ್ತಿದ್ದೇವೆ. ನೀವೂ ಕೂಡ ಹಿಂದೆ ಮಾಡಿದ್ದೀರಿ. ನೀವು ಎಷ್ಟು ಮಾಡಿದಿರಿ ಅದರಲ್ಲಿ ಅರ್ಧ ಕೂಡ ನಾವು ಮಾಡಿಲ್ಲ. ನಿಮ್ಮ ಪ್ರಮಾಣದಲ್ಲಿ ನೋಡುವುದಾದರೆ ಇವತ್ತು ಏನು ರೇಟ್ ಜಾಸ್ತಿಯಾಗಿದೆ ಆ ರೇಟನ್ನು ನಾವು ನೋಡಿದರೆ ಈಗ ಮಾಡಿರುವುದಕ್ಕೆ ೪ ಪಟ್ಟು ಹೆಚ್ಚಿಗೆ ಮಾಡಬೇಕಾಗುತ್ತದೆ. ಆದರೂ ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಈಗ ಏನು ೪೦ ಕೋಟಿ ರೂಪಾಯಿ ಕೊರತೆ ಬೀಳುತ್ತವೆ ಅದಕ್ಕೆ ನಾವು ಎಚ್ಚರಿಕೆಯಿಂದ ಕೆಲಸಮಾಡಬೇಕಾಗಿದೆ. ಇದು ಮುಳ್ಳಿನ ಕುರ್ಚಿ ಎಂಬುದು ನನಗ ಮತ್ತು ಮಾನ್ಯ ಸಿಂಧ್ಯರವರಿಗೆ ಚೆನ್ನಾಗಿ ಗೊತ್ತಿದೆ. ನಾನು ಯಾರನ್ನೂ ವ್ಯಕ್ತಿಗತವಾಗಿ ಟೀಕೆ ಮಾಡುವುದಿಲ್ಲ. ಏಕೆಂದರೆ ಅವರು ಒಳ್ಳೆಯ ನಿಷ್ಠಾವಂತ, ಪ್ರಾಮಾಣಿಕ ಮತ್ತು ದಕ್ಷ ವ್ಯಕ್ತಿ. ಅವರನ್ನು ನಾನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೇನೆ. ಅದೇರೀತಿ ನಾವೂ ಕೂಡ ಕೆಲಸಮಾಡುತ್ತಿದ್ದೇವೆ. ಯಾರು ಏನು ಬೇಕಾದರೂ ಬೈಯಲಿ. ಮಾನ್ಯ ವಾಟಾಳ್ ನಾಗರಾಜ್‌ರವರು ಬೈಯುವುದಾದರೆ ಬೈಯಲಿ. ಆದರೂ ನಮ್ಮ ಕರ್ತವ್ಯವನ್ನು ನಾವು ಮಾಡುತ್ತೇವೆ. ವಾಟಾಳ್ ನಾಗರಾಜ್‌ರವರು ಅವರ ಕೆಲಸವನ್ನು ಅವರು ಮಾಡಲೇಬೇಕಾಗುತ್ತದೆ. ವಸ್ತು ಸ್ಥಿತಿ ಹೀಗಿದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಕ್ಷಮಿಸಬೇಕು. ಒಬ್ಬ ಸಾಧು ಮನುಷ್ಯನಿಗೆ ಒಂದು ಚೇಳು ಹೊಡೆದಿದೆ.................

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಏನು ಮಾತನಾಡುತ್ತಿದ್ದಾರೆಂದು ನಮಗೆ ಗೊತ್ತಾಗಲೇ ಇಲ್ಲ. ಇಷ್ಟು ಹೊತ್ತು ಅವರು ಏನು ಮಾತನಾಡಿದರೋ ನಮಗೆ ಒಂದೂ ಅರ್ಥವಾಗಿಲ್ಲ. ನಮಗೆ ಅರ್ಥವಾಗುವಂತೆ ಅವರು ದಯವಿಟ್ಟು ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಖಂಡ್ರೆಯವರು ೨ ಗಂಟೆ ಮಾತನಾಡಿದರು. ನಮಗೆ ಏನೇನೂ ಅರ್ಥವಾಗಲಿಲ್ಲ, ಮತ್ತು ಅವರು ಏನು ಹೇಳಿದರೆಂದು ನಮಗೆ ಗೊತ್ತೇ ಇಲ್ಲ.

ಶ್ರೀ ಎಂ. ಮಹದೇವ್:- ಅವರು ಹೇಳಿದ್ದನ್ನು ನೀವು ಭಾಷಾಂತರ ಮಾಡಬೇಕೆಂದು ಕೇಳೋಣವೆಂದು ಮಾಡಿದ್ದೆವು.

ಶ್ರೀಮತಿ ಮೋಟಮ್ಮ:- ವಾಟಾಳ್ ನಾಗರಾಜ್‌ರವರೇ, ಅವರು ಅಚ್ಚ ಕನ್ನಡದಲ್ಲಿ ಸ್ವಚ್ಛವಾಗಿ ಮಾತನಾಡಿದರೂ ನಿಮಗೆ ಅರ್ಥವಾಗಲಿಲ್ಲ ಎಂದರೆ ನಿಮ್ಮ ಕನ್ನಡ ಯಾವುದು?

ಶ್ರೀ ವಾಟಾಳ್ ನಾಗರಾಜ್:- ಇವರದ್ದು ಅಚ್ಚ ಕನ್ನಡ ಎಂದರೆ ಆ ದೇವರೇ ಕಾಪಾಡಬೇಕು. ಆ ಭುವನೇಶ್ವರಿಯೇ ಆಕಾಶದಿಂದ ಇಳಿದುಬರಬೇಕಾಗುತ್ತದೆ.

SRI BHIMANNA KANDRE:- With all respect to the Hon'ble leader of the opposition, Hon'ble Deputy leader of the opposition, and the opposition members. I submit that what we done honestly is correct. It was necessary. What we have prescribed, we have declared.

ದಯವಿಟ್ಟು ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ನೀವು ಮಿಲಿಟರಿ ಸರ್ಕಾರದಲ್ಲಿ ಇರುವುದಕ್ಕೇ ಸರಿ. ಸರ್ವಾಧಿಕಾರಿ ಸರ್ಕಾರದಲ್ಲಿ ಮಂತ್ರಿಯಾಗಿರುವುದಕ್ಕೆ ಸರಿಯೇ ಹೊರತು ಈ ಪ್ರಜಾಪ್ರಭುತ್ವಕ್ಕೆ ಸರಿಯಿಲ್ಲ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಈ ಸರ್ಕಾರಕ್ಕೆ ಎಷ್ಟೇ ಒತ್ತಾಯಮಾಡಿದರೂ, ಜನಸಾಮಾನ್ಯರ ಬಗ್ಗೆ, ರೈತರ ಬಗ್ಗೆ ಕಾಳಜಿ ಇಲ್ಲ. ಆದುದರಿಂದ ನಾವು ಇದರ ವಿರುದ್ಧ ಧರಣಿ ಮಾಡಬೇಕಾಗುತ್ತದೆ. ಬೇರೆ ಪ್ರಶ್ನೆಯೇ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾವು ಏನು ಹೇಳಿದರೂ ಅದು ಗೋರ್ಕಲ್ಲ ಮೇಲೆ ನೀರು ಸುರಿದಂತಾಗಿದೆ, ಏನೂ ಉಪಯೋಗವಿಲ್ಲ.

ಶ್ರೀ ಸಿ. ಬೈರೇಗೌಡ:- ಇದು ಬೆಟ್ಟವನ್ನು ಅಗೆದು ಇಲಿಯನ್ನು ಹಿಡಿದಂತಾಗಿದೆ. ಬೆಟ್ಟ ಅಗೆದು ಇವರು ಕೈಯಲ್ಲಿ ಇಲಿಯನ್ನೂ ಕೂಡ ಹಿಡಿಯುವುದಕ್ಕೆ ಆಗಿಲ್ಲ. ಇದರಲ್ಲಿ ಏನೇನೂ ಅರ್ಥವೇ ಇಲ್ಲ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ದೇಶಪಾಂಡೆ, ಪಿ.ಜಿ.ಆರ್. ಸಿಂಧ್ಯ, ಬಸವರಾಜ ಪಾಟೀಲ್ ಅಟ್ಟೂರು, ಸಿ. ಬೈರೇಗೌಡ, ಕೆ.ಎಸ್. ಈಶ್ವರಪ್ಪ, ಇನ್ನೂ ಮುಂತಾದವರು ಮಾನ್ಯ ಸಭಾಧ್ಯಕ್ಷರ ಮುಂದಿನ ಆವರಣದೊಳಕ್ಕೆ ಆಗಮಿಸಿ ಧರಣಿ ಕುಳಿತರು.)

ಶ್ರೀ ಕೆ.ಎಸ್. ಈಶ್ವರಪ್ಪ:- ಬೇರೆ ರಾಜ್ಯಗಳಲ್ಲಿ ರೇಟು ಜಾಸ್ತಿ ಇದೆ, ಆದುದರಿಂದ ನಾವೂ ಮಾಡುತ್ತೀನೆಂದು ಹೇಳುವುದಾದರೆ ಇದಕ್ಕೆ ಅರ್ಥ ಇದೆಯೇ? ಇದು ಸರ್ಕಾರವೇ?

ಅಧ್ಯಕ್ಷರು:- ಈಗ ಮಾನ್ಯ ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಓದುತ್ತಾರೆ ಕೇಳಿ. ಶ್ರೀ ಭೀಮಣ್ಣ ಖಂಡ್ರೆ:- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಇದೇ ಫೆಬ್ರವರಿ ೭ ರಿಂದ ....

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ ....

ಅಧ್ಯಕ್ಷರು:- ದೇಶಪಾಂಡೆಯವರೆ, ಮಾನ್ಯ ಮಂತ್ರಿಗಳು ಇನ್ನೂ ಸ್ಟೇಟ್‌ಮೆಂಟ್‌ನ್ನು ಮಾಡತಕ್ಕದ್ದು ಉಳಿದಿದೆ. ದಯವಿಟ್ಟು ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ. ಅದು ಇನ್ನೂ ಪೂರ್ತಿ ಆಗಿಲ್ಲ.

ಶ್ರೀ ಭೀಮಣ್ಣ ಖಂಡ್ರೆ:- ಸಮಾಧಾನದಿಂದ ಕೇಳಿ. ನಾವು ಏನು ಹೇಳಬೇಕೋ ಹೇಳುತ್ತೇವೆ. ದಯವಿಟ್ಟು ನಿಮ್ಮ ನಿಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಿ ಎಂದು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ವಿರೋಧಪಕ್ಷದವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಸರ್ಕಾರ ಜನವಿರೋಧಿ ನೀತಿಯನ್ನು ಅನುಸರಿಸುತ್ತಿದೆ. ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯ ಮಂತ್ರಿಯಾದ ಮೇಲೆ ರಾಜ್ಯಕ್ಕೆ ಏನಾದರೂ ಒಳ್ಳೆಯದಾಗಬಹುದೆಂದು ನಾವು ತಿಳಿದಿದ್ದೆವು. ಅದು ಒಂದು ಕೆಟ್ಟ ಕನಸು. ಇವರು ಈ ರಾಜ್ಯದ ಜನತೆಗೆ ಮಾಡಿರತಕ್ಕ ಮಹಾ ಮೋಸ. ಈ ಮೋಸವನ್ನು ನಾವು ವಿಧಿಯಿಲ್ಲದೆ ಖಂಡಿಸಲೇಬೇಕಾಗಿದೆ. ಇದು ಸರ್ಕಾರ ಹೊರಡಿಸಿರತಕ್ಕ ದರ ಏರಿಕೆ ಪಟ್ಟಿ. ಈ ಪಟ್ಟಿಯನ್ನು ನಾವು ತೀವ್ರವಾಗಿ ವಿರೋಧಿಸುತ್ತಿದ್ದೇವೆ. ರಾಜ್ಯಾದ್ಯಂತ ಜನತೆಯಲ್ಲಿ ಈ ಮಹಾ ಸಭೆಯ ಮೂಲಕ ಕಳಕಳಿಯಿಂದ ಮನವಿಮಾಡಿಕೊಳ್ಳುತ್ತೇವೆ. ಇಡೀ ರಾಜ್ಯದ ಸಮಗ್ರ ವಿರೋಧಪಕ್ಷಗಳು, ಸಂಘ ಸಂಸ್ಥೆಗಳವರು ಈ ಸರ್ಕಾರದ ಬೆಲೆಯ ಏರಿಕೆಯ, ದರ ಏರಿಕೆಯ ನೀತಿಯನ್ನು ವಿರೋಧಿಸಿ ರಸ್ತೆ, ರಸ್ತೆಗಳಲ್ಲಿ, ಬೀದಿ ಬೀದಿಗಳಲ್ಲಿ ಈ ಸರ್ಕಾರದ ವಿರುದ್ಧ ಚಳುವಳಿಯನ್ನು ಪ್ರಜಾಸತ್ತಾತ್ಮಕವಾಗಿ ನಡೆಸಬೇಕೆಂದು ಹೇಳಿ, ಒತ್ತಾಯ ಮಾಡಿ, ಆ ಚಳುವಳಿಯನ್ನು ಇಲ್ಲಿಂದಲೇ ಧರಣಿ ಮಾಡುವ ಮೂಲಕ ಪ್ರಾರಂಭ ಮಾಡುತ್ತಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಹಿಂದಿನ ಸರ್ಕಾರದ ಧೋರಣೆಯನ್ನು ಪ್ರತಿಭಟನೆ ಮಾಡಿ, ಅವರು ಮಾಡುತ್ತಿರುವುದು ಅನ್ಯಾಯವೆಂದು ಹೇಳಿ ದೊಡ್ಡ ಆಪರೇಷನ್ ಮಾಡುತ್ತೇವೆಂದು ಹೇಳಿ, ಇಗೀ ರಾಜ್ಯದ ಜನತೆಯ ಜೋಬಿಗೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಆಪರೇಷನ್ ಮಾಡುತ್ತಿದ್ದಾರೆ; ಇಡೀ ರಾಜ್ಯದ ಜನತೆಯ ಪರವಾಗಿ ಇದನ್ನು ಪ್ರತಿಭಟನೆ ಮಾಡಿ, ನಾವು ಕೂಡ ಇದನ್ನು ವಿರೋಧ ಮಾಡುತ್ತಿದ್ದೇವೆ.

ಶ್ರೀ ಭೀಮಣ್ಣ ಖಂಡ್ರೆ:- ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆ ಇದೇ ಫೆಬ್ರವರಿ ಏಳರಿಂದ ಗ್ರಾಮೀಣ ಸಾಮಾನ್ಯಜನರ ಮತ್ತು ನಗರ ಬಸ್ ದರವನ್ನು ಶೇಕಡಾ ೨೨ ರಷ್ಟು ಮತ್ತು ಎಕ್ಸ್‌ಪ್ರೆಸ್, ಸೆಮಿಲಕ್ಷುರಿ ಬಸ್ ದರಗಳನ್ನು ಶೇಕಡಾ ೨೫ರಷ್ಟು ಹೆಚ್ಚಿಸಿದೆ. ಈಗ ಗ್ರಾಮೀಣ ಸಾಮಾನ್ಯ ಮತ್ತು ಎಕ್ಸ್‌ಪ್ರೆಸ್ ಬಸ್ ದರಗಳನ್ನು ಶೇಕಡ ೭ ರಷ್ಟು ಕಡಿಮೆ ಮಾಡಲು ಸರ್ಕಾರ ನಿರ್ಧರಿಸಿದೆ. ಅದರಂತೆ ೩೦೦ ಕಿಲೋಮೀಟರ್‌ಗಳಿಗಿಂತ ಹೆಚ್ಚು ದೂರದ ಲಕ್ಷುರಿ ಬಸ್‌ಗಳಿಗೆ ಇವತ್ತು ಕೂಡ ಶೇಕಡ ೭ರಷ್ಟು ಕಡಿಮೆ ಮಾಡಲು ಸರ್ಕಾರ ನಿರ್ಧರಿಸಿದೆ.

(ಗೊಂದಲ)

(ಈ ಸಂದರ್ಭದಲ್ಲಿ ವೆಲ್‌ನಲ್ಲಿ ನಿಂತ ಮಾನ್ಯ ವಿರೋಧಪಕ್ಷದ ಸದಸ್ಯರು ಜನವಿರೋಧಿ ಸರ್ಕಾರಕ್ಕೆ ಧಿಕ್ಕಾರವೆಂದು ಘೋಷಣೆಯನ್ನು ಕೂಗುತ್ತಿದ್ದರು)

ಶ್ರೀ ಎಂ. ವೀರಪ್ಪ ಮೊಯಿಲಿ:- ತಾವು ೧೭ ಪರ್ಸೆಂಟ್, ೨೫ ಪರ್ಸೆಂಟ್ ಹಾಕಿ ಏರಿಸಿದಾಗ ತಾವು ರಾಜಿನಾಮೆ ಕೊಟ್ಟಿದ್ದಿರಾ ಸುಮ್ಮನೆ ಏನು ಮಾತನಾಡುತ್ತಿದ್ದೀರಿ. ಏತಕ್ಕೆ ರಾಜಿನಾಮೆಯನ್ನು ಕೊಡಬೇಕು. ದರವನ್ನು ಕಡಿಮೆ ಮಾಡಿದ್ದಕ್ಕೆ ರಾಜಿನಾಮೆಯನ್ನು ಕೊಡಬೇಕೆ. ಏನು ಮಾತನಾಡುತ್ತೀರಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಅವರು ಬೆಲೆ ಏರಿಸಿದ್ದಾರೆಂದು ನೀವು ಏರಿಸುತ್ತೀರಾ?

ಶ್ರೀ ಎಂ. ವೀರಪ್ಪಮೊಯಿಲಿ:- ಹೌದು ಹೌದು, ನೀವು ಬರೆ ನೀರನ್ನು ಕುಡಿಸಿ ಸರ್ಕಾರ ನಡೆಸಿದ್ದೀರಿ, ಏನು ಮಾತನಾಡುತ್ತೀರಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಅವರು ಅನ್ಯಾಯ ಮಾಡಿದ್ದರಿಂದ ವಿರೋಧ ಪಕ್ಷದಲ್ಲಿ ಕುಳಿತಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ:- ಸ್ವಲ್ಪ ಕೇಳುವುದು ಇದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ತಾವು ಜನರಿಗೆ ದೊಡ್ಡ ಸರ್ಜರಿ ಮಾಡಿಬಿಟ್ಟಿರಿ, ಮುಗಿಸಿಬಿಟ್ಟಿರಿ. ತಾವು ತಮ್ಮ ಹೃದಯವನ್ನು ಬಿಚ್ಚಿ ಹೇಳಿ. ನಿಮ್ಮ ಬಗ್ಗೆ ನಮಗೆ ಅಪಾರವಾದ ಗೌರವವಿದೆ. ಹೃದಯ ಬಿಚ್ಚಿ ತಾವು ಮಾಡುತ್ತಿರುವುದು ಸರಿ ಎಂದು ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ:- ಈಗಾಗಲೇ ಸನ್ಮಾನ್ಯ ಸಾರಿಗೆ ಸಚಿವರು ಹೇಳಿಕೆ ಕೊಟ್ಟಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಅವರು ಹೇಳುವುದು ಸದನಕ್ಕೆ ಅರ್ಥವಾಗಿಲ್ಲ.

ಶ್ರೀ ಭೀಮಣ್ಣ ಖಂಡ್ರೆ:- ೫೦ ಪರ್ಸೆಂಟ್ ಏರಿಸಿದಾಗ ನಿಮಗೆ ಅರ್ಥವಾಗಲಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:- ಹಾಗಾದರೆ, ಏನೂ ದರ ಏರಿಸದೆ ನಾವು ಸರ್ಕಾರವನ್ನು ನಡೆಸುತ್ತೇವೆಂದು ತಾವು ಒಂದು ಆಶ್ವಾಸನೆಯನ್ನು ಕೊಟ್ಟಬಿಟ್ಟರೆ ನಾವು ಕುಳಿತುಕೊಳ್ಳುತ್ತೇವೆ. ದಯವಿಟ್ಟು ನಿಮ್ಮಲ್ಲಿ ಯಾರಾದರು ಹೇಳಲಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಮೇಜರ್ ಆಪರೇಷನ್ ಇದೇನೆ?

ಶ್ರೀ ಎಂ. ವೀರಪ್ಪ ಮೊಯಿಲಿ:- ಮೇಜರ್ ಆಪರೇಷನ್ ಬರೇ ರಾಮಮಂತ್ರ ಹೇಳಿದರ ಆಗುವುದಿಲ್ಲ. ರಾಮಬಾಣದಿಂದ ಮೇಜರ್ ಸರ್ಜರಿ ಆಗುತ್ತದೆ. ಮಂತ್ರದಿಂದ ಆಗುವುದಿಲ್ಲ. ಭಜನೆ ಮಾಡುವುದರಿಂದ ಸರ್ಜರಿ ಆಗುವುದಿಲ್ಲ. ತಾವು ಪ್ರತಿಯೊಂದಕ್ಕೂ ವಿರೋಧ ಮಾಡಬಹುದು. ಏತಕ್ಕೆಂದರೆ ವಿರೋಧಪಕ್ಷದಲ್ಲಿ ಇದ್ದು ವಿರೋಧ ಮಾಡಬಹುದು, ಅದಕ್ಕೆ ಏನೂ ಅಡ್ಡಿ ಇಲ್ಲ. ಆದರೆ ಪ್ರಶ್ನೆ ಏನೆಂದರೆ, ಸನ್ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಅಲ್ಲೂ ಕೂಡ ಚರ್ಚೆ ನಡೆಯಿತು. ನಿನ್ನೆ ಧರಣಿ ಕೂಡ ಮಾಡಿದರು. ಧರಣಿ ಮಾಡಿದ ಮೇಲೆ ನಮ್ಮ ಪಕ್ಷದಿಂದಲೂ ಕೂಡ ಚರ್ಚೆ ಮಾಡಿದ್ದೇವೆ. ಚಿಂತನೆ ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೇ, ಮೊನ್ನೆ ದರವನ್ನು ಏನು ಏರಿಸಿದ್ದೇವೆ, ಹಾಗೆ ಏರಿಸಿದಮೇಲೂ ಕೂಡ ರಸ್ತೆ ಸಾರಿಗೆ ಇಲಾಖೆಗೆ ಸುಮಾರು ೪೮ ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತದೆ. ೪೮ ಕೋಟಿ ರೂಪಾಯಿ ನಷ್ಟವಾದರೂ ಕೂಡ ನೀವು ನಿಭಾಯಿಸಬೇಕು, ನಮ್ಮ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಎಲ್ಲೆಲ್ಲಿ ಸೋರಿಕೆಯಾಗುತ್ತಿದೆ ಅದನ್ನು ನಿಲ್ಲಿಸಬೇಕೆಂದು ಹೇಳಿದ್ದೇವೆ. We have given that kind of responsibility to covering the area of Rs.48 crores. ಅದು ಮಾಡಿದ್ದೇವೆ. ಕಳೆದ ಎರಡು-ಮೂರು ವರ್ಷಗಳಿಂದ ಇದೇ ರೀತಿಯಾಗಿ ನಿರ್ಣಯ ತೆಗೆದುಕೊಳ್ಳುವುದಕ್ಕೆ ಭಯ. ಈಗ ಪರಿಸ್ಥಿತಿ ಏನಾಗಿದೆ ಎಂದರೆ, ನಮಗೆ ಸಂತೋಷ. ಏಕೆಂದರೆ, ಜನಗಳ ಹತ್ತಿರ ಬಹಳ ಚೆನ್ನಾಗಿರೋಣ; ತೆರಿಗೆ ಹಾಕುವುದು ಬೇಡ, ರಸ್ತೆ ಸಾರಿಗೆ ದರ ಏರಿಸುವುದು ಬೇಡ ಎಂದರೆ ಇನ್ನು ಒಂದು ವರ್ಷದೊಳಗೆ ರಸ್ತೆ ಸಾರಿಗೆ ಸಂಸ್ಥೆ ಮುಚ್ಚಿಹೋಗುತ್ತದೆ. ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಗೆ ಇದು ಬೇಕು. ರಸ್ತೆ ಸಾರಿಗೆ ನಿಗಮ ನಿಲ್ಲಬೇಕು, ಅವರ ಸಾರಿಗೆ ವ್ಯವಸ್ಥೆ ಬರಬೇಕು. ಇದು ಕೆಲವರಿಗೆ ಬೇಕು. ಇದನ್ನು ಡಿ-ನ್ಯಾಷನಲೈಸ್ ಮಾಡಿ ಎಂದು ಒಡಕು ಧ್ವನಿ ಒಂದು ಕಡೆ ಏಳುತ್ತದೆ. ರೂಟುಗಳನ್ನು ನಮಗೆ ಕೊಡಿ ಎಂದು ಹೇಳುತ್ತಾರೆ. ಅಂದಾಗ ಹೇಗೆ ನಿಭಾಯಿಸುವುದಕ್ಕಾಗುತ್ತದೆ. We have totally politicalised KSRTC. ಪೂರ್ತಿ ಪ್ರೊಫೆಷನಲ್ ಬೇಸಿಸ್ ಮೇಲೆ ಮಾಡುವುದಿಲ್ಲ. ಪ್ರೊಫೆಷನಲ್ ಬೇಸಿಸ್ ಮೇಲೆ ನೀವು ಒಂದು ಸಂಸ್ಥೆಯನ್ನು ನಡೆಸದಿದ್ದರೆ ಹೇಗೆ? ನಿನ್ನೆ ಅದನ್ನೇ

ಮಾತನಾಡಿದ್ದೇನೆ. ಈ ಸದನದಲ್ಲಿ ನೀವು ಪ್ರೊಫೆಷನಲ್ ಸಂಕೇತವಾಗಿ ಬಂದಿದ್ದೀರೆಂದು ಹೇಳಿದೆ. ನಾನು ನೆನೆಸಿದ್ದೆ, ಸನ್ಮಾನ್ಯ ಅಧ್ಯಕ್ಷರು ಹೊಸದಾಗಿ ಬಂದ ಮೇಲೆ ಇವತ್ತು ಆ ದೃಷ್ಟಿಯಲ್ಲಿ ತಾವೆಲ್ಲ ಆಲೋಚನೆ ಮಾಡುತ್ತೀರಿ, ಎಂದು ತಿಳಿದುಕೊಂಡರೆ, We are totally politicalising the issue. Including me. Iam sorry.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಅವರು ತಮ್ಮ ತಮ್ಮ ಸ್ಥಾನಗಳಿಗೆ ಬಂದು ಮಾತನಾಡಬೇಕು. ಅಲ್ಲಿ ಮಾತನಾಡುವುದಕ್ಕೆ ಅವಕಾಶ ಇಲ್ಲ.

SRI M. VEERAPPA MOILY:- Iam not telling you only. Including me. Even if I have forced the KSRTC to increase...

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರ ಮೇಲೆ ನಮ್ಮನ್ನು ಎತ್ತಿಕಟ್ಟಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ಆ ಕೆಲಸ ತಾವು ಯಾವಾಗಲೂ ಮಾಡುವುದಿಲ್ಲ. ನಾನು ಮಾಡುವುದಿಲ್ಲ, ಮಾಡಬಾರದು. ಈಗ ಪ್ರಶ್ನೆ ಏನೆಂದರೆ; I own this sin on behalf of the people.

ಶ್ರೀ ಬಿ.ಎಂ. ಇದಿನಬ್ಬ:- ನಮ್ಮ ನಾಯಕರು ಮಾತನಾಡುವಾಗ ಮಾನ್ಯ ಸದಸ್ಯರು ಅಲ್ಲಿಂದಲೇ ಮಾತನಾಡುವುದು ಸರಿಯಾಗುತ್ತದೆಯೇ? ಅವರವರ ಸ್ಥಾನದಲ್ಲಿ ಬಂದು ಮಾತನಾಡಿದರೆ ಮಾತ್ರ ಒಂದು ಬೆಲೆ, ನೆಲೆ ಸಿಕ್ಕುತ್ತದೆ. ಈ ರೀತಿ ಆದರೆ ಹೇಗಾಗುತ್ತದೆ? ಇದನ್ನು ನಿಯಂತ್ರಣ ಮಾಡಬೇಕೆಂದು ವಿಧಿಬಂದು ಎತ್ತುತ್ತೇನೆ.

SRI M. VEERAPPA MOILY:- I think I must see according to them ಇಷ್ಟು ರೆವಿನ್ಯೂ ಬರಬೇಕು? ಮೂರು ವರ್ಷದಿಂದ the successive Governments including me, we have committed the sin of imposing this kind of burden on them. ಎಷ್ಟು ದಿನ ಮುಂದುವರಿಸಿಕೊಂಡು ಹೋಗುತ್ತೀರಿ? Alright, I can also continue for one more year conveniently. ಎಲ್ಲರಿಗೂ ಸಂತೋಷಪಡಿಸಿ, ಎಲ್ಲರನ್ನೂ ಸಮಾಧಾನ ಮಾಡಿಕೊಂಡು ನಾನು ಮುಖ್ಯಮಂತ್ರಿಯಾಗಿ ಇರಬಹುದು. ಆದರೆ at what cost? I will be presiding over the liquidation of the KSRTC. You should not forget about it. ನಾನು ಮಾತ್ರವಲ್ಲ ಇಡೀ ಸದನ. we will be the sinners tomorrow, all of us, each one of us. ಅದನ್ನು ಡೀನ್ಯಾಷನಲೈಸ್ ಮಾಡಬೇಕು, ಎಲ್ಲವನ್ನು ಸ್ಪ್ಲಿಟ್ ಮಾಡಬೇಕು, ರೂಟ್ಸ್ ಎಲ್ಲ ನಾವು ಕೊಟ್ಟು ಬಿಡಬೇಕು; ಇದು ಕೆಲವರಿಗೆ ಬೇಕು. ಆದರೆ you and me should not be a party to it. No. We have never said. ಇವತ್ತು ಪ್ರಾಮಾಣಿಕವಾಗಿ ಹೇಳಿ, ಕೆಎಸ್‌ಆರ್‌ಟಿಸಿ ದರ ಏರಿಸದೆ ನಾವು ಅಧಿಕಾರಕ್ಕೆ ಬಂದು ಕೆಎಸ್‌ಆರ್‌ಟಿಸಿಯನ್ನು ರನ್ ಮಾಡುತ್ತೇವೆಂದು ತಾವು ಯಾರಾದರೂ ಎದೆ ತಟ್ಟಿ ಹೇಳಿ. I will surrender to you. Can you do that ? No. ತಾವು ಬೇಕಾದರೆ ಚರಿತ್ರೆ ನೋಡಿ. ನಿಮ್ಮನ್ನು ನಾನು ದೂರುವುದಿಲ್ಲ. ಯಾರ ಮೇಲೂ ಹೊರೆ ಹಾಕುವುದಿಲ್ಲ. ವರ್ಷ ಹತ್ತತ್ತು ಪರ್ಸೆಂಟಾದರೂ ಜಾಸ್ತಿ ಮಾಡಬೇಕಾಗಿತ್ತು, ಅದನ್ನು ಮಾಡಲಿಲ್ಲ. ಇವತ್ತು ನಿಷ್ಟು ಮಾಡಿದ್ದೇವೆಂದರೆ ultimately it comes to 15%. ಮೂರು ವರ್ಷಗಳಿಂದ ಹತ್ತತು ಪರ್ಸೆಂಟ್ ಅಂದರೂ ೩೦ ಪರ್ಸೆಂಟ್ ಮಾಡಬೇಕಾಗಿತ್ತು. ಇದು ಸೋರಿಕೆ ಅಲ್ಲ. It is not to compensate only, Natural. Anyway, two years we have not done it. It is alright. ಎರಡು ವರ್ಷ ನಾವು ಮಾಡಲಿಲ್ಲ. ಇದು

Natural growth. You forget about it. Alright don't give provision. ಯಾವುದು ಸೋರಿಕೆಯಿಂದ ನಷ್ಟವಾಗುತ್ತದೆ, ಅದಕ್ಷತೆಯಿಂದ ನಷ್ಟವಾಗುತ್ತದೆ. ಅದನ್ನು ನಾವು ಸಾರ್ವಜನಿಕರ ಮೇಲೆ ಹೇರುವುದು ಬೇಡ. I agree with you. That is why we have agreed to reduce now. We don't want. ಏಕೆಂದರೆ, ಸಾರ್ವಜನಿಕರ ಮೇಲೆ ಅದಕ್ಷತೆಯ ಭಾರ ಅಥವಾ ಸೋರಿಕೆಯ ಭಾರ ಬೀಳಬಾರದು. I agree with that kind of logic. ಅದನ್ನು ಆ ಸದನದಲ್ಲಿ ಹೇಳಿದರು; ತಾವೂ ಹೇಳಿದ್ದೀರಿ; ನಮ್ಮ ಪಕ್ಷದವರೂ ಹೇಳಿದ್ದಾರೆ. Agreeing to that, ೭ ಪರ್ಸೆಂಟ್ ಕಡಿಮೆ ಮಾಡಿದ್ದೇವೆ. Again we are asking them to shoulder the responsibility. We are doing that. We have gone to that kind of a reasonable level. ಆದರೂ, ನಾನು ಹೇಳಿದೆ. ಸನ್ಮಾನ್ಯ ದೇಶಪಾಂಡೆಯವರು ನನ್ನ ಜೊತೆಯಲ್ಲಿ ಮಾತನಾಡಿದ್ದಾರೆ. ಆ ಸದನದಲ್ಲಿ ಕೂಡ ಹೇಳಿದೆ. Alright, I will with-hold making the statement, let us discuss again. ನಾವು ಚರ್ಚೆ ಮಾಡೋಣ, ಸಮಾಲೋಚನೆ ಮಾಡೋಣ. ಆ ಮೇಲೆ ಬೇಕಾದರೆ ನಾವು ಹೇಳಿಕೆ ಕೊಡುತ್ತೇವೆಂದು ಕೂಡಾ I have sent word to the Hon'ble Minister not to make a statement. I also withheld. Then the leader of Opposition in the other House said, "No. You must make a statement right now." See, that means it is not we, as Government. It is you as Opposition Party, who forfeited your right of consultations with the Government. This is not mine.

(INTERRUPTIONS from the Opposition Members)

SRI M. VEERAPPA MOILY : You never said, but in the other House your counter-part has said. You should have exercised this right. I am not attributing any motive to any one but at the same time if you are honestly championing the cause of the people, if that is the reason, you should have come around for consultations. We have already made a statement.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಇವತ್ತು ಒಂದು ಪ್ರಶ್ನೆ ನಿರ್ಮಾಣ ಆಗಿದೆ. ಈಗ ಮಾನ್ಯ ಸಚಿವರು ಉತ್ತರ ಕೊಡುವಾಗ ವಿರೋಧ ಪಕ್ಷಗಳಿಗೆ ನಾನು ಮಾತನಾಡುವುದಕ್ಕೆ ಕರೆದಿದ್ದೆ, ಸರ್ಕಾರ ಕರೆದಿತ್ತು ಎಂದು ಹೇಳಿದರು. ಯಾವಾಗ ಎಂದರೆ ೧೯೯೩ರ ಜನವರಿಯಲ್ಲಿ ಅಜೀಜ್ ಸೇಠ್ ಅವರು ಕರೆದಿದ್ದರು ಎಂದು ಹೇಳಿದರು. ಇವತ್ತು ತಾವಾಗಲೀ, ಅಥವಾ ಟ್ರಾನ್ಸ್‌ಪೋರ್ಟ್ ಮಂತ್ರಿಗಳಾಗಲೀ ನಮಗೆ ಚರ್ಚೆಗೆ ಬನ್ನಿ ಎಂದು ಹೇಳಿಲ್ಲ. ಯಾವಾಗ ಕರೆದಿರಿ ಎಂದು ಹೇಳಿ. ಇವತ್ತು ತಾವು ಚರ್ಚೆಗೆ ಕರೆದರೂ ನೀವು ಬಂದಿಲ್ಲ ಎಂದು ನಮ್ಮ ಮೇಲೆ ಅಪವಾದ ಮಾಡಿದರೆ ಅದು ಸರಿಯಲ್ಲ. ದಯಮಾಡಿ ಇದಕ್ಕೆ ಸ್ಪಷ್ಟೀಕರಣ ನೀಡಿ. ನಮ್ಮನ್ನು ಯಾವಾಗ ಕರೆದಿರಿ, ಯಾರು ಕರೆದರು, ಯಾರು ಹೇಳಿಕಳುಹಿಸಿದರು ಎನ್ನುವುದನ್ನು ಹೇಳಿ. ಇನ್‌ಫಾರ್ಮಲ್ಲಾಗಿ ಯಾವುದೋ ಡಿಸ್ಕಷನ್ ಆಗಿರಬಹುದು. ಅದು ಮಹತ್ವಪ್ಟದ್ದು ಆಗುವುದಿಲ್ಲ. ಅಫಿಷಿಯಲ್ಲಾಗಿ ಇದರ ಬಗ್ಗೆ ಯಾವುದೂ ಚರ್ಚೆಯಾಗಿಲ್ಲ, ಯಾರೂ ಚರ್ಚೆಗೆ ಕರೆದಿಲ್ಲ. ಹೀಗಾಗಿ ಇವತ್ತು ನಾವು ಏನು ಹೇಳುತ್ತಿದ್ದೇವೆ ಎಂದರೆ, ನೀವು ಬಸ್ ಪ್ರಯಾಣ ದರ ಏನು ಹೈಕ್ ಮಾಡಿದ್ದೀರಿ ಅದಕ್ಕೆ ಕೆಲವು ಕಾರಣಗಳಿರಬಹುದು, ಆದರೂ ನಮಗೆ ಕನ್ವಿನ್ಸ್ ಆಗುತ್ತಿಲ್ಲ. ಆದ್ದರಿಂದ ಇವತ್ತು ಈ ಹೈಕ್ ವಿತ್‌ಡ್ರಾ ಮಾಡಿ ಹೌಸ್ ಕಮಿಟಿ ಮಾಡಿ, ಇದರ ಬಗ್ಗೆ ಪರಿಶೀಲನೆ ನಡೆಯಲಿ. ಸಾರಿಗೆ ಸಂಸ್ಥೆ

ಬಗ್ಗೆ ಕಂಪ್ರಹೆನ್ಸಿವ್ ಸ್ಟಡಿ ಆಗಲಿ. ಅವಶ್ಯಕತೆ ಇದ್ದರೆ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕಾಗುತ್ತದೆ. ಅದನ್ನು ಬಿಟ್ಟು ನಿಮ್ಮನ್ನು ಕರೆದಿದ್ದೆವು, ನೀವು ಬರಲಿಲ್ಲವೆಂದು ನಮ್ಮ ಮೇಲೆ ಅಪಾದನೆ ಮಾಡಿದರೆ ಅದು ತಪ್ಪಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಮುಖ್ಯ ಮಂತ್ರಿಗಳು ಸದನ ಪ್ರಾರಂಭ ಆಗುವುದಕ್ಕಿಂತ ಮುಂಚೆ ವಿರೋಧ ಪಕ್ಷದವರನ್ನು ಸಂಪ್ರದಾಯಕವಾಗಿ ಕರೆಯತಕ್ಕದ್ದು ಇದ್ದು, ೧೨ನೇ ತಾರೀಖು ಸಭೆ ಮುಗಿದು ೧೩ನೇ ತಾರೀಖು ಸಂಜೆ ಕರೆದಾಗ ಈ ವಿಚಾರ ಚರ್ಚೆಗೆ ಬರಲಿಲ್ಲ. ಚರ್ಚೆ ಮಾಡುವುದಕ್ಕೇ ಅವಕಾಶ ಆಗಲಿಲ್ಲ. ೨ ಗುಟೆಗೆ ಕರೆದಿದ್ದರು. ಅವರು ಎಲ್ಲೋ ಮೀಟಿಂಗ್‌ನಿಂದ ಬಂದರು. ಚರ್ಚೆ ಮಾಡುವುದಕ್ಕೆ ನಾವು ತಯಾರು ಇದ್ದೆವು. ಅವರು ಚರ್ಚೆಗೆ ತಯಾರು ಇರಲಿಲ್ಲ. ಆದರೂ ಮುಖಾಮುಖಿ ನಾವು ಏನು ಹೇಳಿದೆವು ಎಂದರೆ, ನೀವು ಏನು ದರ ಏರಿಸಿದ್ದೀರಿ ಅದನ್ನು ಸಂಪೂರ್ಣ ಹಿಂದೆ ತೆಗೆದುಕೊಂಡು ಆಮೇಲೆ ಮಾತುಕತೆಗೆ ಕರೆದರೆ ಬರುತ್ತೇವೆಂದು ಹೇಳಿದೆವು. ಆಮೇಲೆ ಅವರು ಕರೆಯತಕ್ಕ ಸೂಚನೆಯನ್ನೇ ನಮಗೆ ಕೊಡಲಿಲ್ಲ. ಈ ಪರಿಸ್ಥಿತಿ ಇರುವಾಗ ಮಾನ್ಯ ಮುಖ್ಯಮಂತ್ರಿಗಳು ಯಾವುದೋ ಒತ್ತಡಕ್ಕೆ ಸಿಕ್ಕಿದ್ದಾರೆಂದೆನಿಸುತ್ತದೆ. ನೀವು ಬಸ್ ಪ್ರಯಾಣ ದರ ಏರಿಕೆ ಮಾಡಿರತಕ್ಕದ್ದಕ್ಕೆ ನಮ್ಮ ಸಂಪೂರ್ಣ ಬೆಂಬಲ ಇಲ್ಲ. ಒಂದೇ ಒಂದು ಪ್ರಶ್ನೆ ಎಂದರೆ, ದರ ಏರಿಕೆ ಆಜ್ಞೆಯನ್ನು ಏನು ಹೊರಡಿಸಿದ್ದೀರಿ ಅದನ್ನು ಸಂಪೂರ್ಣ ಹಿಂದೆ ತೆಗೆದುಕೊಂಡು ಮಾತುಕತೆಗೆ ಕರೆದರೆ ನಾವು ಬರುವುದಕ್ಕೆ ಸಿದ್ಧರಿದ್ದೇವೆ

ಶ್ರೀ ಕೆ.ಎಸ್. ಈಶ್ವರಪ್ಪ:- ಹಿಂದಿನ ಸರ್ಕಾರ ಇದ್ದಾಗ ಅಜೀಜ್ ಸೇಠ್ ಅವರು ವಿರೋಧ ಪಕ್ಷದವರನ್ನು ಕರೆದು ಕೇಳಿದ್ದರು ಎಂದಮೇಲೆ, ವೀರಪ್ಪಮೊಯಿಲಿಯವರು ಕರೆದಿಲ್ಲ ಎನ್ನುವುದು ಸ್ಪಷ್ಟವಾಯಿತು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಏರಿಕೆ ಮಾಡಿರುವುದನ್ನು ಬೇಷರತ್ತಾಗಿ ವಾಪಸ್ಸು ಪಡೆದು ಆ ನಂತರ ಮಾತುಕತೆಗೆ ಕರೆಯಲಿ.

೪.೫೦ ಪಿ.ಎಂ.

ಮತ್ತೆ ಕರೆದು ಚರ್ಚೆಮಾಡಿಕೊಂಡು ಆಮೇಲೆ ತೀರ್ಮಾನ ತೆಗೆದುಕೊಳ್ಳಲಿ. ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಅವರನ್ನು ಕರೆದು ಮಾತನಾಡಬೇಕಾಗಿತ್ತು, ಸೌಜನ್ಯಕ್ಕಾದರೂ ಮಾತನಾಡಬೇಕಾಗಿತ್ತು ಎಂದು ಹೇಳುತ್ತಿದ್ದಾರೆ. ನಾನು ಮುಖ್ಯಮಂತ್ರಿಗಳಿಗೆ ರಾಜ್ಯದ ಜನತೆಯ ಪರವಾಗಿ ಹೇಳುವುದು ಇಷ್ಟೆ, ನಿಮ್ಮ ತೊಂದರೆಗಳು ಏನಿವೆ ಅದರ ಬಗ್ಗೆ ಎಲ್ಲವಿರೋಧಪಕ್ಷಗಳ ನಾಯಕರುಗಳನ್ನು ಕರೆಯಿರಿ, ಚರ್ಚೆಮಾಡಿ. ಅಲ್ಲಿಯತನಕ ಹೆಚ್ಚಿಸಿರುವ ದರವನ್ನು ಬೇಷರತ್ತಾಗಿ ವಾಪಸ್ಸು ತೆಗೆದುಕೊಳ್ಳಬೇಕೆಂದು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ನಾನು ಈ ವಿಚಾರದಲ್ಲಿ ಮಾತನಾಡತಕ್ಕ ಸಂದರ್ಭದಲ್ಲಿ ಸಭಾನಾಯಕರು ಇದ್ದಿದ್ದರೆ ಬಹಳ ಚೆನ್ನಾಗಿರುತ್ತಾ ಇತ್ತು. ನಾನು ಅದಕ್ಕೆ ಮನವಿ ಸಹ ಮಾಡಿಕೊಂಡೆ. ತಮಗೆ ಬೇರೆ ಕಡೆ ಕೆಲಸ ಇರಬಹುದು ಹೋಗಿದ್ದೀರಿ. ತಾವು ಆ ಸದನಕ್ಕೆ ಹೋಗಿದ್ದೀರಿ. ತಾವೇನು ೬೦ ಕೋಟಿ ರೂಪಾಯಿಗಳಷ್ಟು ೧೯೯೨-೯೩ನೇ ಇಸವಿಯಲ್ಲಿ ಲಾಸ್ ಆಗುತ್ತದೆ ಹಾಗೂ ೧೯೯೩-೯೪ನೇ ಇಸವಿಯಲ್ಲಿ ೧೨೦ ಕೋಟಿ ರೂಪಾಯಿ ಲಾಸ್ ಆಗುತ್ತದೆಂದು ಹೇಳಿದಿರಿ, ನಾನು ಹೇಳತಕ್ಕ ಕಾರ್ಯ ಕ್ರಮಗಳನ್ನು ತೆಗೆದುಕೊಂಡರೆ ನಿಮಗೆ ಸುಮಾರು ೮೦ ಕೋಟಿ ರೂಪಾಯಿಗಳಷ್ಟು ಉಳಿತಾಯವಾಗುತ್ತದೆ ಎನ್ನತಕ್ಕ ಮಾತನ್ನು ಹೇಳಿದ್ದೇನೆ. ತಾವು ಇದಕ್ಕೆ ರಾಜಕೀಯ ಬೆರೆಸಬಾರದು, ಕೆ.ಎಸ್.ಆರ್.ಟಿ.ಸಿ.ಯನ್ನು ಪ್ರೊಫೆಷನಲ್ಸ್ ಕಡೆಯಿಂದ ರನ್ ಮಾಡಿಸಬೇಕು, as technocrats ಮಾತನಾಡಬೇಕೆಂದು ಹೇಳಿದ್ದೀರಿ. ನಾನು ೪೫ ನಿಮಿಷ ಮಾತನಾಡಿದ್ದೇನೆ,

ಅಧ್ಯಕ್ಷರು ತಾವು ನನ್ನ ಮಾತನ್ನು ಕೇಳಿದ್ದೀರಿ. We are not accusing but the fact I am telling, ನಾನು ಹೇಳಿದ ಹಾಗೆ ನೀವು ಕ್ರಮ ತೆಗೆದುಕೊಳ್ಳುವುದಾದರೆ, ೮೦ ರಿಂದ ೮೫ ಕೋಟಿ ರೂಪಾಯಿಗಳನ್ನು ನೀವು ಉಳಿತಾಯ ಮಾಡಬಹುದು. ನೀವು ಸಂಸದೀಯ ವ್ಯವಹಾರದಲ್ಲಿರಬಹುದು, ಎಲ್ಲ ವಿಚಾರದಲ್ಲಿ ಇರಬಹುದು, ಸರ್ಕಾರದ ನೇತಾರರಾಗಿ ನೀವೆಲ್ಲ ತಿಳಿದುಕೊಂಡಿದ್ದೀರಿ. ಆದರೆ ಈ ಸಾರಿಗೆ ಸಂಸ್ಥೆಯ ಆಡಳಿತದ ಒಳಭಾಗ ನಿಮಗೆ ಇನ್ನೂ ಅರ್ಥವಾಗಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಆದ್ದರಿಂದ ನಿಮ್ಮಲ್ಲಿ ಮನವಿ ಮಾಡಿಕೊಳ್ಳತಕ್ಕದ್ದು ಏನೆಂದರೆ ನೀವು ಮಾತುಕತೆಗೆ ಕರೆಯುವುದು ಬಿಡುವುದು ಅದು ಬೇರೆ ವಿಚಾರ. ಈಗ ನೀವು ಹೇಳಿದಹಾಗೆ ಪ್ರೊಫೆಷನಲ್ ಆಗಿ ನಡೆಸಿ. ೧೯೭೭ರ ನಂತರ ಈ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ನ್ಯಾಷನಲೈಸ್ ಮಾಡಿದ್ದು ಯಾರು? ಬೀದರ್, ಗುಲ್ಬರ್ಗ, ರಾಯಚೂರು, ಚಿತ್ರದುರ್ಗ ಮತ್ತು ದಾವಣಗೆರೆ ರೂಟ್‌ಗಳನ್ನು ನ್ಯಾಷನಲೈಸ್ ಮಾಡಿದ್ದು ನಮ್ಮ ಸರ್ಕಾರ ಇದ್ದಾಗ ಆದ್ದರಿಂದ ಇವತ್ತು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ, ಇದನ್ನು ಪ್ರೊಫೆಷನಲ್ ಆಗಿ ರನ್ ಮಾಡುವುದಕ್ಕೆ ಎಲ್ಲಾ ಸಹಕಾರವನ್ನು ನಾವು ಕೊಡುವುದಕ್ಕೆ ತುಯಾರಾಗಿದ್ದೇವೆ. ನಾವು ನೀವು ಸೇರಿಕೊಂಡು ಮಾಡೋಣ, ಅದಕ್ಕೆ ನಾನು ರೆಡಿ ಇದ್ದೇನೆ. ಆದರೆ ನೀವು ಅದನ್ನು ವಿತ್‌ಡ್ರಾ ಮಾಡಿ. ಈಗ ನೀವು ೨೫ ಪರ್ಸೆಂಟ್ ಹೆಚ್ಚು ಮಾಡಿದ್ದೀರಿ, ಈಗ ಅದನ್ನು ೭ ಪರ್ಸೆಂಟ್ ಇಳಿಸಿದ್ದೇವೆಂದು ಹೇಳುತ್ತಾ ಇದ್ದೀರಿ. ಇದು ಯಾವ ಕಡೆಗೆ? ಇದರಲ್ಲಿ ಏನು ಅರ್ಥವಿದೆ? ಲಕ್ಸುರಿ ಮತ್ತು ಸೆಮಿ ಲಕ್ಸುರಿ ಬಸ್‌ಗಳ ದರ ಕಡಿಮೆ ಮಾಡಿದ್ದೇವೆಂದರೆ ಅದರಿಂದ ರೈತರಿಗೆ ಏನು ಅನುಕೂಲವಾಗುತ್ತದೆ? ನಾನು ನಿನ್ನೆ ದಿನ ಮಾತನಾಡತಕ್ಕ ಸಂದರ್ಭದಲ್ಲಿ ನಿಮಗೆ ಹೇಳಿದ್ದೇನೆ. ಯಾವ ರೂಟ್‌ಗಳಲ್ಲಿ ರೇಟ್ ಕಡಿಮೆ ಮಾಡುವುದರಿಂದ ಜನಗಳಿಗೆ ಅನುಕೂಲವಾಗುತ್ತವೆ ಎನ್ನುವುದನ್ನು ತಾವು ದಯವಿಟ್ಟು ಮತ್ತೊಮ್ಮೆ ಪುನರಾಲೋಚನೆ ಮಾಡಬೇಕು. ನಾವು ಪ್ರತಿಭಟನೆಯನ್ನು ವಾಪಸ್ಸು ತೆಗೆದುಕೊಳ್ಳಬೇಕಾದರೆ ತಾವು ಇದರ ಬಗ್ಗೆ ಪುನರ್ ವಿಚಾರ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಸಭಾಧ್ಯಕ್ಷರೆ, ಈಗ ಚರ್ಚೆ ಇಲ್ಲೇ ನಿಲ್ಲಬೇಕಾಗಿಲ್ಲ. ನಿಮ್ಮ ಚರ್ಚೆ, ನಿಮ್ಮ ಪ್ರತಿಭಟನೆ ಇಲ್ಲೇ ನಿಲ್ಲಬೇಕಾಗಿಲ್ಲ. It is a continuous dialogue on this matter. ಏಕೆಂದರೆ, ಇದು ಈಗಲೇ ತೀರ್ಮಾನವಾಗಬೇಕೆಂದು ಇಲ್ಲ. ಈಗ ನಾವು ತಮ್ಮ ಪ್ರತಿಭಟನೆ, ಸಾರ್ವಜನಿಕರ ವಿಚಾರಗಳಿಗೆ ಮತ್ತು ನಮ್ಮ ಸಿಎಲ್‌ಪಿಯಲ್ಲಿ ಬಂದಂತಹ ವಿಚಾರಗಳಿಗೆ ಮತ್ತು ಸದನದಲ್ಲಿ ಬಂದಂತಹ ಚರ್ಚೆಗಳಿಗೆ ಸ್ಪಂದಿಸಿ ನಾವು ಇಷ್ಟು ಕಡಿಮೆ ಮಾಡಿದ್ದೇವೆ. ನಾವು ೩೦-೪೦ ದಿವಸ ಇಲ್ಲೇ ಇರುತ್ತೇವೆ. We will call all of you for a discussion. ಇನ್ನೂ ಡಿಸ್‌ಕಸ್ ಮಾಡೋಣ. ನಾವು ಮಾಡಿದ್ದು ಬಹಳ ತಪ್ಪಾಯಿತು ಎಂದು ಕಂಡುಬಂದರೆ ಈಗ ನಾವು ಇಳಿಸಿದ್ದೇವೆ, ಅದನ್ನು ಆಮೇಲೆ ವಿಚಾರ ಮಾಡೋಣ ಅಥವಾ ಅದನ್ನು ಇನ್ನು ಹೆಚ್ಚು ಮಾಡಬೇಕೆಂದು ಅಭಿಪ್ರಾಯ ಕೊಟ್ಟರೆ ಅದನ್ನೂ ಮಾಡೋಣ. ಎರಡರಲ್ಲಿ ಒಂದು ಕೆಲಸ ಮಾಡೋಣ. ದಯಮಾಡಿ ಇಲ್ಲಿಗೆ ತಾವು ನಿಲ್ಲಿಸಬೇಕಾಗುತ್ತದೆ. ನಮ್ಮ ವಿಚಾರಕ್ಕೆ ತಾವು ಸ್ಪಂದಿಸಬೇಕಾಗುತ್ತದೆ. ತಮ್ಮ ವಿಚಾರಕ್ಕೆ ನಾವು ಸ್ಪಂದಿಸಬೇಕಾಗುತ್ತದೆ. ಪ್ರತಿಷ್ಠೆಯ ಕಣದಲ್ಲಿ ಇಲ್ಲ. ಇಪ್ಪತ್ತೈದು ವರ್ಷಗಳಿಂದ ಬಸ್ ದರವನ್ನು ಏರಿಸಲೇ ಇಲ್ಲ. ಏರಿಸಬೇಕು ಎನ್ನುವುದನ್ನು ತಾವೂ ಒಪ್ಪುತ್ತೀರಿ. ೧೦ ಪರ್ಸೆಂಟ್ ಇಳಿಸಬೇಕು, ೧೫ ಪರ್ಸೆಂಟ್ ಇಳಿಸಬೇಕು ಎಂದು ಚರ್ಚೆ ಇದೆ. ಬಹುಶಃ ೫ ಪರ್ಸೆಂಟ್‌ನಲ್ಲಿ ನಿಮ್ಮ ಚರ್ಚೆ ಇದೆ. ಆ ಚರ್ಚೆಯನ್ನು ಮುಂದುವರಿಸೋಣ. ತಮ್ಮನ್ನು ನಾವು ಕರೆದು ಮಾತನಾಡುತ್ತೇವೆ. ಮಾತನಾಡಿಕೊಂಡು ಒಂದು ಇತ್ಯರ್ಥ ಮಾಡೋಣ. ಆದ್ದರಿಂದ ಇಲ್ಲಿಗೆ ಈ ಚರ್ಚೆಯನ್ನು ನಿಲ್ಲಿಸಿ ಮುಂದೆ ನಾವು

ಖಂಡಿತವಾಗಿಯೂ ಕೂಡ ಮಂತ್ರಿಗಳು ನಾವೆಲ್ಲರೂ ಕುಳಿತು ದರದ ಬಗ್ಗೆ ಏನು ಮಾಡಬೇಕು, ನಾವು ಮಾಡಿದ್ದು ತಪ್ಪಾಗಿದ್ದರೆ ನಾವು ಒಪ್ಪಿಕೊಳ್ಳತಕ್ಕ ಪ್ರಾಮಾಣಿಕತೆ ನಾವು ಮಾಡುತ್ತೇವೆ. ತಮ್ಮ ಭಾಗದಲ್ಲಿ ತಪ್ಪಾಗಿದೆ ಎಂದು ಕಂಡು ಬಂದು ಇನ್ನೂ ಹೆಚ್ಚು ಮಾಡಬೇಕೆಂದು ಅಭಿಪ್ರಾಯ ಪಟ್ಟರೆ ನೀವೂ ಒಪ್ಪಬೇಕಾಗುತ್ತದೆ. ಈ ಎರಡರಲ್ಲಿ ಒಂದು ತೀರ್ಮಾನ ಮಾಡೋಣ. ಆದ್ದರಿಂದ ಇವತ್ತು ಈ ಚರ್ಚೆಯನ್ನು ಇಷ್ಟಕ್ಕೆ ಸೀಮಿತಗೊಳಿಸಿ ಮುಂದಿನ ವ್ಯವಹಾರಗಳಿಗೆ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮ ಹತ್ತಿರ ಮನವಿ ಮಾಡಿಕೊಳ್ಳುತ್ತೇನೆ.

(ಈ ಸಂದರ್ಭದಲ್ಲಿ ಮಾನ್ಯಸದಸ್ಯರಾದ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು.)

ಶ್ರೀ ಎಂ. ವೀರಪ್ಪಮೊಯಿಲಿ:- ಈಗ ಮೊನ್ನೆ ೪೮ ಕೋಟಿ ರೂಪಾಯಿಗಳ ನಷ್ಟವಾಯಿತು. ಈಗ ಸುಮಾರು ೪೦-೪೨ ಕೋಟಿ ರೂಪಾಯಿಗಳ ಭಾರವನ್ನು ಪುನಃ ಕೆ.ಎಸ್.ಆರ್.ಟಿ.ಸಿ.ಗೆ ವಹಿಸಿದ್ದೇವೆ. About Rs.90 crores we have given them, so that they can improve their efficiency and make up. ಈ ಜವಾಬ್ದಾರಿಯನ್ನು ಅವರ ಮೇಲೆ ಹೊರಿಸಿದ್ದೇವೆ. ಇಲ್ಲ, ೧೮೦ ಕೋಟಿ ರೂಪಾಯಿಗಳ ಜವಾಬ್ದಾರಿ ಕೂಡ ನಿಮ್ಮದೇ ಎಂದು ಕೆ.ಎಸ್.ಆರ್.ಟಿ.ಸಿ. ಮೇಲೆ ನಾವು ಹೇರಿದರೆ, ನಾಳೆ ಅದು ಮುಳುಗಿದರೆ ನಾವು ನೀವು ಎಲ್ಲ ಅದಕ್ಕೆ ಭಾಗಿದಾರರಾಗಬೇಕಾಗುತ್ತದೆ. ಕೆ.ಎಸ್.ಆರ್.ಟಿ.ಸಿ. ಬದುಕುವ ಬಗ್ಗೆ ದಾರಿ ನೋಡಬೇಕೇ ಹೊರತು ಅದರ ಬಾಗಿಲು ಮುಚ್ಚಿಸುವ ಪ್ರಯತ್ನದ ಬಗ್ಗೆ ಯೋಚನೆ ಬಹುಶಃ ನಿಮ್ಮದ್ದು ಯಾರದ್ದೂ ಅಲ್ಲವೆಂದು ನಾನು ಭಾವಿಸಿದ್ದೇನೆ. ಆ ರೀತಿ ಏನಾದರೂ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳನ್ನು ನಿಲ್ಲಿಸಿಬಿಟ್ಟು ಯಾರಾದರೂ ಖಾಸಗಿಯವರಿಗೆ ಕೊಟ್ಟು ಲಾಭ ಮಾಡಿಕೊಳ್ಳಬೇಕೆಂಬ ಅಭಿಪ್ರಾಯ ಬಹುಶಃ ಯಾರಿಗೂ ಇಲ್ಲ. ಆದ್ದರಿಂದ ಈ ಅಭಿಪ್ರಾಯ ಸಾರ್ವಜನಿಕರಲ್ಲಿ ಕೂಡ ಬರಬಾರದು. ಕೆ.ಎಸ್.ಆರ್.ಟಿ.ಸಿ. ಈ ರಾಜ್ಯದ ಒಂದು ದೊಡ್ಡ ವೈರಿ ಎನ್ನುವ ಅಭಿಪ್ರಾಯವನ್ನು ನೀವು ವಿರೋಧ ಪಕ್ಷದವರು ಕೊಟ್ಟರೂ ಅದು ಸಾಧು ಅಲ್ಲ, ನಾವು ಕೊಟ್ಟರೂ ಸಾಧು ಅಲ್ಲ. ಆದ್ದರಿಂದ ದಯವಿಟ್ಟು ನಾವು ಇಲ್ಲಿಗೆ ಚರ್ಚೆಯನ್ನು ನಿಲ್ಲಿಸಿಬಿಡೋಣ. ತಾವು ಪ್ರತಿಭಟನೆಯನ್ನು ತೋರಿಸಿದ್ದೀರಿ. ನಾವು ನಿಮ್ಮ ಪ್ರತಿಭಟನೆಗೆ ಸ್ಪಂದಿಸಿದ್ದೇವೆ. ನಿಮ್ಮ ಪ್ರತಿಭಟನೆಯನ್ನು ಪ್ರತಿಷ್ಠೆಯ ಕಣವೆಂದು ನಮ್ಮ ಕಡೆಯವರು ಏನೂ ತಿಳಿದುಕೊಂಡಿಲ್ಲ. ಆದ್ದರಿಂದ ಈ ಸ್ಪಂದನ ಇದ್ದುಬಿಡಲಿ. Don't become too dry. ದಯವಿಟ್ಟು ಚರ್ಚೆಯನ್ನು ಇಲ್ಲಿಗೇ ನಿಲ್ಲಿಸಿಬಿಡೋಣ.

ಅಧ್ಯಕ್ಷರು:- ಸದಸ್ಯರಲ್ಲಿ ನನ್ನ ಮನವಿ ಏನೆಂದರೆ, ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮುಖ್ಯಮಂತ್ರಿಯವರೂ ಸಹಿತ ಇದರ ಬಗ್ಗೆ ತಮ್ಮ ಹೇಳಿಕೆಯನ್ನು ಹೇಳಿದ್ದಾರೆ. ದಯವಿಟ್ಟು ತಾವು ತಮ್ಮ ಆಸನಗಳನ್ನು ವಹಿಸಿಕೊಂಡು ಮುಂದಿನ ಕಾರ್ಯಕಲಾಪಗಳಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- (ಬಾವಿಯಿಂದ) ತಮ್ಮ ಬಗ್ಗೆ ನಮಗೆ ಗೌರವ ಇದೆ. ಸರ್ಕಾರ ಆಜ್ಞೆಯನ್ನು ಕೂಡಲೇ ಹಿಂತೆಗೆದುಕೊಂಡರೆ ನಾವು ಬರುವುದಕ್ಕೆ ಸಿದ್ಧರಿದ್ದೇವೆ. ಅವರು ತಮ್ಮ ಆಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ನಂತರ ಬೇಕಾದರೆ ಮಾತುಕತೆ ಮಾಡೋಣ.

ಶ್ರೀ ಟಿ.ಎಂ. ಮಂಜುನಾಥ್:- ಸರ್ಕಾರ ವಾಪಸ್ ತೆಗೆದುಕೊಂಡಿದೆ ಅಂದಮೇಲೆ ಎತ್‌ಡ್ರಾ ಮಾಡಿಕೊಂಡಹಾಗೆ ತಾನೆ?

ಶ್ರೀ ವಾಟಾಳ್ ನಾಗರಾಜ್:- (ಬಾವಿಯಿಂದ) ನೀವು ಇನ್ನೂ ಸಿದ್ಧ ಮಾಡಿಲ್ಲವೇನು?

(ಸಭೆಯಲ್ಲಿ ನಗು)

ಶ್ರೀ ಎಂ. ವೀರಪ್ಪ ಮೊಯಿಲಿ:- ಕೆ.ಎಸ್.ಆರ್.ಟಿ.ಸಿ. ಯವರಿಗೇ ಬಿಟ್ಟುಬಿಡೋಣ. ಈಗ ತಮಗೆ ಗೊತ್ತಿದೆ, ಒಬ್ಬ ಪ್ರಾಮಾಣಿಕ, ದಕ್ಷ ಅಧಿಕಾರಿಯನ್ನು ಅಲ್ಲಿ ಹಾಕಿದ್ದೇವೆ. Let us give him some time to function; let us not interfere. One thing, I can assure the House and the people outside that we will give absolute liberty to them to run it on utmost professional line without interference from the political level.

ಶ್ರೀ ವಾಟಾಳ್ ನಾಗರಾಜ್:- ನಾನು ಒಂದು ಮನವಿಯನ್ನು ಮಾಡುತ್ತಿದ್ದೇನೆ. ನಾವು ನಮ್ಮ ವಿಚಾರವನ್ನು ಹೇಳಿದ್ದೇವೆ. ಏನು ಅನ್ಯಾಯವಾಗಿದೆ ಎಂದು ಹೇಳಿದ್ದೇವೆ. ಒಂದು ಸದನದ ಸಮಿತಿ ಮಾಡುವುದಕ್ಕೆ ಏನೂ ಆಕ್ಷೇಪಣೆ ಇಲ್ಲ. ಅವರಿಗೆ ಒಂದು ತಿಂಗಳಲ್ಲಿ ವರದಿ ಕೊಡಿ ಎಂದು ಹೇಳೋಣ. ಒಂದು ಸದನದ ಸಮಿತಿ ಮಾಡಿ, ಆ ಸಮಿತಿಯವರು ಈ ಸದನ ಮುಗಿಯುವುದರೊಳಗಾಗಿ ಒಂದು ವರದಿ ಕೊಡುತ್ತಾರೆ. ಈಗ ಸಭೆಯನ್ನು ಮುಂದಕ್ಕೆ ಹಾಕಿ, ಮಾತುಕತೆ ಮಾಡೋಣ.

ಅಧ್ಯಕ್ಷರು:- ಈಗ ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನವು ಐದು ಗಂಟೆ ಎರಡು ನಿಮಿಷಕ್ಕೆ ಮುಕ್ತಾಯಗೊಂಡು ಹತ್ತು ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು)

(ಸದನವು ಸಂಜೆ ೬ ಗಂಟೆಗೆ ಪುನಃ ಸಮಾವೇಶಗೊಂಡಿತು. ಅಧ್ಯಕ್ಷರು (ಶ್ರೀ ಎ.ಎಸ್. ಕೌಜಲಗಿಯವರು) ಪೀಠದಲ್ಲಿದ್ದರು.)

ಪ್ರಕಟಣೆ

ಅಧ್ಯಕ್ಷರು:- ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ೯ನೇ ನಿಯಮದ ಮೇರೆಗೆ ಈ ಕೆಳಕಂಡ ಸದಸ್ಯರುಗಳನ್ನು ಪ್ರಸ್ತುತ ಅಧಿವೇಶನದ ಸಮಯದಲ್ಲಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಗೈರುಹಾಜರಿಯಲ್ಲಿ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ನಾಮ ನಿರ್ದೇಶನ ಮಾಡಿದ್ದೇನೆ.

ಶ್ರೀಯುತರುಗಳಾದ:

೧. ಬಿ.ಎಂ. ಇದಿನಬ್ಬ
೨. ಶ್ರೀಮತಿ ಮೋಟಮ್ಮ
೩. ಜಿ.ಎಸ್. ಆಚಾರ್
೪. ಎಸ್.ಹೆಚ್. ಕೌಜಲಗಿ
೫. ಜಿ.ಎಸ್. ಶಿವನಂಜಪ್ಪ
೬. ಶ್ರೀಮತಿ ದಮಯಂತಿ ಬೋರೇಗೌಡ

(ಇವತ್ತಿನ ಸಭೆಯನ್ನು ಮುಕ್ತಾಯಗೊಳಿಸಿ ನಾಳೆ ಬೆಳಿಗ್ಗೆ ೧೧ ಗಂಟೆಗೆ ಪುನಃ ಸೇರುವುದು)

(ಸದನವು ಸಂಜೆ ೬ ಗಂಟೆ ಒಂದು ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ೧೭ನೇ ಫೆಬ್ರವರಿ ೧೯೯೩ರ ಬುಧವಾರ ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)

(* ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)